ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಜನವರಿ 1 ಸೋಮವಾರ 2024
ಸಂಪುಟ: 44 | ಸಂಚಿಕೆ: 255 | ಪುಟಗಳು: 12
₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ನಾಡಿನ ಸಮಸ್ತರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.
ವ್ಯವಸ್ಥಾಪಕರು.
ಮೈಸೂರು ಮಿತ್ರ

ಮೈಸೂರಿನ ಬಾನಂಗಳದಲ್ಲಿ ಬೆಳಕಿನ ಚಿತ್ತಾರದೊಂದಿಗೆ

ಹೊಸ ವರ್ಷಕ್ಕೆ ಅದ್ಧೂರಿ ಸ್ವಾಗತ

ಮೈಸೂರು, ಡಿ.31(ಎಂಕೆ, ಎಂಟಿವೈ)– ಬಾನಂಗಳದಲ್ಲಿ ಬೆಳಕಿನ ಚಿತ್ತಾರ... ಎದೆಯಾಳದಿಂದ ಹೊಮ್ಮಿದ ಹರ್ಷೋದ್ಗಾರ... ಸಂಗೀತದ ಝೇಂಕಾರದೊಂದಿಗೆ ನೂರಾರು ಕನಸುಗಳನ್ನು ಹೊತ್ತು ತಂದ ಹೊಸ ವರ್ಷ(2024)ಕ್ಕೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಅದ್ಧೂರಿ ಸ್ವಾಗತ ಕೋರಲಾಯಿತು...

ಕೊರೊನಾ ಕರಿಛಾಯೆಯ ನಡುವೆ ಸಡಗರ–ಸಂಭ್ರಮದಿಂದ ಆವೃತ್ತವಾಗಿದ್ದ ಅರಮನೆ ನಗರಿಯಲ್ಲಿ ನೂತನ ವರ್ಷದ ಶುಭಾಶಯಗಳ ಮಳೆ ಸುರಿಯಿತು. ವಿಶ್ವವಿಖ್ಯಾತ ಅಂಬಾವಿಲಾಸ ಅರಮನೆ ಅಂಗಳ, ಸ್ಟಾರ್ ಹೋಟೆಲ್‌ಗಳು, ಪಬ್‌ಗಳಲ್ಲಿ ಕುಣಿದು ಕುಪ್ಪಳಿಸಿ, ಸಂಭ್ರಮದ ಸಾಗರದಲ್ಲಿ ಮಿಂದೆದ್ದ ಜನ ಸಮೂಹ ವರ್ಷವಿಡೀ ಸಂತಸವೇ ತುಂಬಿರಲಿ ಎಂದು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು.

ಮೈಸೂರಿನ ಅರಮನೆ ಆವರಣದಲ್ಲಿ ರಮಣೀಯ ಪುಷ್ಪಕಾಶಿಯ ಕಲಾಕೃತಿಗಳ ನಡುವೆ ಬಾನಂಗಳದಲ್ಲಿ ರೂಪುಗೊಂಡ ಬೆಳಕಿನ ಚಿತ್ತಾರ ನೂತನ ವರ್ಷವೂ ಎಲ್ಲರ ಬಾಳಲ್ಲಿ ಬೆಳಕಿನ ಹರುಷ ತರಲೆಂದು ನಾಂದಿ ಹಾಡಿತು. ರಾತ್ರಿ 12 ಗಂಟೆಯಾಗುತ್ತಿದ್ದಂತೆ ಆಕಾಶಕ್ಕೆ ಚಿಮ್ಮಿದ ಶಬ್ದರಹಿತ ಹಸಿರು ಪಟಾಕಿಗಳ ಬೆಳಕಿನ ವೈಭವ ಜನಸಾಗರವನ್ನು ನಿಬ್ಬೆರಗಾಗಿಸಿತಲ್ಲದೆ ನೋಡುಗರ ಕಣ್ಣಲ್ಲಿ ಮಿಂಚು ಹರಿಸಿತು. ● 7ನೇ ಪುಟಕ್ಕೆ





ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛಗೊಳಿಸದಂತೆ ಶಿಕ್ಷಣ ಇಲಾಖೆಯಿಂದ ಸುತ್ತೋಲೆ

ಬೆಂಗಳೂರು, ಡಿ.31– ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಂದ ಶೌಚಾಲಯಗಳನ್ನು ಸ್ವಚ್ಛಗೊಳಿಸಿದ ಪ್ರಕರಣಗಳು ನಿರಂತರವಾಗಿ ಬೆಳಕಿಗೆ ಬರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡಿದ್ದು, ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛಗೊಳಿಸದಂತೆ ಸುತ್ತೋಲೆ ಹೊರಡಿಸಿದೆ.



ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛಗೊಳಿಸಬೇಡಿ. ಸ್ವಚ್ಛಗೊಳಿಸಿದರೆ ಎಫ್‌ಐಆರ್ ದಾಖಲಿಸಲಾಗುವುದು ಎಂದು ಇಲಾಖೆ ಎಚ್ಚರಿಕೆ ನೀಡಿದೆ. ಕಳೆದ ಕೆಲವು ದಿನಗಳ ಹಿಂದೆ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಯಲುವಳ್ಳಿ ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಮಕ್ಕಳನ್ನು ಶೌಚಗುಂಡಿಗೆ ಇಳಿಸಿದ ಪ್ರಕರಣ ಬೆಳಕಿಗೆ ಬಂದ ಬೆನ್ನಲ್ಲೇ ಬೆಂಗಳೂರಿನ ಅಂದ್ರಹಳ್ಳಿ ಹಾಗೂ ಶಿವಮೊಗ್ಗದ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛಗೊಳಿಸಿದ ಪ್ರಕರಣಗಳು ಸುದ್ದಿಯಾಗಿದ್ದವು. ಈ ಎಲ್ಲ ಬೆಳವಣಿಗಳ ಬೆನ್ನಲ್ಲೇ ಸುತ್ತೋಲೆ ಹೊರಡಿಸಿರುವ ಶಿಕ್ಷಣ ಇಲಾಖೆ, ಇಲಾಖೆಯಿಂದ ಕಾಲ–ಕಾಲಕ್ಕೆ ಹೊರಡಿಸಲಾಗುವ ಸೂಚನೆ, ನಿರ್ದೇಶನಗಳನ್ನು ಚಾಚೂ ತಪ್ಪದೆ ಪಾಲಿಸಬೇಕು. ಹಾಗೆಯೇ ವಿದ್ಯಾರ್ಥಿಗಳನ್ನು ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಳ್ಳುವಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ಎಚ್ಚರಿಕೆ ಕ್ರಮಗಳನ್ನು ವಹಿಸಬೇಕು ಎಂದು ರಾಜ್ಯದ ಎಲ್ಲ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರಿಗೆ ಮತ್ತು ಸಂಬಂಧಿಸಿದ ಎಲ್ಲ ಇಲಾಖಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ಹೊರಡಿಸಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಚಟುವಟಿಕೆಗಳಲ್ಲಿ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕಾಗುತ್ತದೆ. ವಿದ್ಯಾರ್ಥಿಗಳನ್ನು ಶೌಚಾಲಯಗಳ ಸ್ವಚ್ಛತೆಯಂತಹ ಕಾರ್ಯಗಳಿಂದ ದೂರವಿರಿಸುವುದು ಅಧಿಕಾರಿಗಳ, ಮುಖ್ಯ ಶಿಕ್ಷಕರ, ಸಿಬ್ಬಂದಿ ಕರ್ತವ್ಯ. ಆದರೆ ಈ ಹೊಣೆಗಾರಿಕೆ ಮರೆತು ವಿದ್ಯಾರ್ಥಿಗಳನ್ನು ● 7ನೇ ಪುಟಕ್ಕೆ

ಭಾಷಾ ನ್ಯೂನತೆ ನಿವಾರಿಸಲು ರಾಷ್ಟ್ರೀಯ ಶಿಕ್ಷಣ ನೀತಿ ಸಹಾಯ

ನವದೆಹಲಿ,ಡಿ.31–ಭಾಷಾ ನ್ಯೂನತೆಯಿಂದ ಶಾಲೆಯಿಂದ ಹೊರಗುಳಿದ ಅಥವಾ ಅಧ್ಯಯನವನ್ನು ಅರ್ಧಕ್ಕೆ ನಿಲ್ಲಿಸಿದ ಮಕ್ಕಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡೆತಡೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಮ್ಮ ಜನಪ್ರಿಯ ರೇಡಿಯೊ ಕಾರ್ಯಕ್ರಮ ಮನ್ ಕಿ ಬಾತ್‌ನ ವರ್ಷದ ಕೊನೆಯ 108ನೇ ಸಂಚಿಕೆಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಉದ್ದೇಶವೆಂದರೆ ಭಾಷೆ ಮಕ್ಕಳಿಗೆ ವಿದ್ಯಾಭ್ಯಾಸ ಗಳಿಕೆಗೆ ತೊಡಕಾಗಬಾರದು ಮತ್ತು ಪ್ರತಿಯೊಂದು ಮಗುವಿನ ಸಮಗ್ರ ಅಭಿವೃದ್ಧಿಯಾಗಬೇಕು ಎಂಬುದು. ರಾಷ್ಟ್ರೀಯ ಶಿಕ್ಷಣ ನೀತಿ ಇದಕ್ಕೆ ವರದಾನವಾಗಿದೆ ಎಂದರು.



ನಮ್ಮ ದೇಶದಲ್ಲಿ ಭಾಷಾ ನ್ಯೂನತೆಯಿಂದ ಹಲವು ಮಕ್ಕಳು ಓದನ್ನು ಅರ್ಧಕ್ಕೆ ನಿಲ್ಲಿಸುತ್ತಾರೆ. ನಮ್ಮ ಹೊಸ ಶಿಕ್ಷಣ ನೀತಿ ಅಂತಹ ಅಡೆತಡೆಗಳನ್ನು ಹೋಗಲಾಡಿಸಲು ಸಹಾಯ ಮಾಡುವುದಲ್ಲದೆ ಮಗುವಿನ ಸಮಗ್ರ ಅಭಿವೃದ್ಧಿಗೆ ಸಹಾಯವಾಗುತ್ತದೆ ಎಂದರು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜುಲೈ 29, 2020ರಲ್ಲಿ ಜಾರಿಗೆ ತಂದಿತು. ಶಾಲಾ ಶಿಕ್ಷಣದಲ್ಲಿ ಸಮಗ್ರ ಸುಧಾರಣೆ ತರುವುದು ಇದರ ಉದ್ದೇಶ. ಪೂರ್ವ ಪ್ರಾಥಮಿಕ ಹಂತದಿಂದ 12ನೇ ತರಗತಿಯವರೆಗೆ ಸಮಗ್ರ ಶಿಕ್ಷಣ ಎಲ್ಲಾ ಹಂತಗಳಲ್ಲಿ ಲಭ್ಯವಾಗುವಂತೆ ಖಚಿತಪಡಿಸುತ್ತದೆ. ಎನ್‌ಇಪಿ ಅಡಿಯಲ್ಲಿ ಆರಂಭಿಕ ಬಾಲ್ಯಜೀವನದ ಆರೈಕೆ ಮತ್ತು 3ರಿಂದ 7 ವರ್ಷದವರೆಗೆ ಎಲ್ಲಾ ಮಕ್ಕಳಿಗೆ ಶಿಕ್ಷಣ ಒದಗಿಸುತ್ತದೆ ಎಂದರು.

ಈ ವರ್ಷ ನಾವು ಅನೇಕ ಸಾಧನೆಗಳನ್ನು ಮಾಡಿದ್ದೇವೆ. ದೇಶವು 5ನೇ ಅತಿದೊಡ್ಡ ಆರ್ಥಿಕತೆಯಾಯಿತು. ಜಿ20ನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಇಂದು ದೇಶದ ಮೂಲೆ ಮೂಲೆಗಳಲ್ಲಿ ಆತ್ಮವಿಶ್ವಾಸ ತುಂಬಿದೆ. ಮುಂದಿನ ವರ್ಷವೂ ಈ ಉತ್ಸಾಹವನ್ನು ಉಳಿಸಿಕೊಳ್ಳಬೇಕು. ಚಂದ್ರಯಾನ–3ರ ಯಶಸ್ಸಿಗಾಗಿ ಹಲವರು ನನಗೆ ಸಂದೇಶಗಳನ್ನು ಕಳುಹಿಸುತ್ತಿದ್ದಾರೆ ಎಂದರು.

ಕಾಶಿ–ತಮಿಳು ಸಂಗಮದಲ್ಲಿ ಪಾಲ್ಗೊಳ್ಳಲು ತಮಿಳುನಾಡಿನಿಂದ ಸಾವಿರಾರು ಜನರು ಕಾಶಿ ತಲುಪಿದ್ದರು. ಅಲ್ಲಿ ನಾನು ಅವರೊಂದಿಗೆ ಸಂವಹನ ನಡೆಸಲು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಎಐ ಟೂಲ್ ಭಾಷಿಣಿಯನ್ನು ಮೊದಲ ಬಾರಿಗೆ ಬಳಕೆ ಮಾಡಿದ್ದೆ, ನಾನು ಹಿಂದಿಯಲ್ಲಿ ಭಾಷಣ ಮಾಡುತ್ತಿದ್ದರೆ ಅದು ತಮಿಳಿಗೆ ಭಾಷಾಂತರವಾಗುತ್ತಿತ್ತು. ನಿಯಮಿತ ವ್ಯಾಯಾಮ ಮತ್ತು 7 ಗಂಟೆಗಳ ಸಂಪೂರ್ಣ ನಿದ್ರೆ ದೇಹಕ್ಕೆ ಬಹಳ ಮುಖ್ಯ ಮತ್ತು ಫಿಟ್ ಆಗಿರಲು ಸಹಾಯ ಮಾಡುತ್ತದೆ. ಭಾರತವು ಇನ್ನೋವೇಷನ್ ಹಬ್ ಆಗುತ್ತಿರುವುದು ಎಂದೂ ನಾವು ನಿಲ್ಲುವುದಿಲ್ಲ ಎಂಬುದರ ಸಂಕೇತವಾಗಿದೆ. 2015ರಲ್ಲಿ ನಾವು ಗ್ಲೋಬಲ್ ಇನ್ನೋವೇಶನ್ ಇಂಡೆಕ್ಸ್‌ನಲ್ಲಿ 81ನೇ ಸ್ಥಾನವನ್ನು ಪಡೆದಿದ್ದೇವೆ. ಇಂದು ನಾವು 40ನೇ ಸ್ಥಾನದಲ್ಲಿದ್ದೇವೆ ಎಂದರು.

ಬಿಎಸ್‌ವೈ ಕುಟುಂಬಕ್ಕೆ ಯಾರ ಸಹಾನುಭೂತಿ ಬೇಡ; ಕೋವಿಡ್ ಆರೋಪಕ್ಕೆ ಸರ್ಕಾರ ಯಾವುದೇ ತನಿಖೆ ನಡೆಸಲಿ

ವಿಜಯಪುರ, ಡಿ.31– ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸರ್ಕಾರದ ಅವಧಿಯಲ್ಲಿ ನಡೆದ ಭ್ರಷ್ಟಾಚಾರದ ಬಗ್ಗೆ ಸ್ವಪಕ್ಷದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಕ್ರಿಯಿಸಿದ್ದಾರೆ.



ಸತ್ಯವನ್ನು ಹೊರತೆಗೆಯಲು ಯಾವುದೇ ತನಿಖೆಗೆ ಆದೇಶಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಯಾವುದೇ ● 7ನೇ ಪುಟಕ್ಕೆ

ಅರವಿಂದ್ ಪನಗಾರಿಯಾ 16ನೇ ಕೇಂದ್ರ ಹಣಕಾಸು ಆಯೋಗದ ನೂತನ ಅಧ್ಯಕ್ಷ

ನವದೆಹಲಿ: ನೀತಿ ಆಯೋಗದ ಮಾಜಿ ಅಧ್ಯಕ್ಷ ಅರವಿಂದ್ ಪನಗಾರಿಯಾ ಅವರನ್ನು 16ನೇ ಕೇಂದ್ರ ಹಣಕಾಸು ಆಯೋಗದ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. ಹಣಕಾಸು ಸಚಿವಾಲಯದ ಜಂಟಿ ಕಾರ್ಯದರ್ಶಿ ರಿತ್ವಿಕ್ ರಂಜನಂ ಪಾಂಡೆ ಆಯೋಗದ ಮುಂಗಡ ಕೋಶದ ವಿಶೇಷ ಕರ್ತವ್ಯಾಧಿಕಾರಿಯಾಗಿರುತ್ತಾರೆ. 2015ರಿಂದ 2017ರವರೆಗೆ ನೀತಿ ಆಯೋಗದ ಅಧ್ಯಕ್ಷರಾಗಿದ್ದರು. ಅವರು ಭಾರತ–ಅಮೆರಿಕನ್ ಪ್ರಮುಖ ಆರ್ಥಿಕ ತಜ್ಞರು.



ಸಂಸದ ಪ್ರತಾಪ್ ಸಿಂಹ ಸಹೋದರ ವಿಕ್ರಂ ಸಿಂಹ ಬಂಧನ ಪ್ರಕರಣ

ಮಗನ ರಾಜಕೀಯ ಭವಿಷ್ಯಕ್ಕಾಗಿ ನನ್ನ ತುಳಿಯುವ ಪ್ರಯತ್ನವಿದು

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಂಸದ ಪ್ರತಾಪ್ ಸಿಂಹ ಕಿಡಿ



- ಸಿದ್ದರಾಮಯ್ಯ ಬ್ರಿಲಿಯೆಂಟ್ ಫಾದರ್, ಪೊಲಿಟಿಷಿಯನ್
- ಲೋಕಸಭಾ ಚುನಾವಣೆಯಲ್ಲಿ ಮಗನನ್ನು ಗೆಲ್ಲಿಸಲು ತಂತ್ರಗಾರಿಕೆ
- ನನ್ನ ಕುಟುಂಬ ಇವರಿಗೆ ಟಾರ್ಗೆಟ್
- ಜನರು, ಚಾಮುಂಡಿ, ಕಾವೇರಿ ತಾಯಿ ನನ್ನ ಕೈಬಿಡಲ್ಲ

ಮೈಸೂರು, ಡಿ.31(ಬಿಎಲ್‌ಯು)– ಮೈಸೂರು–ಕೊಡಗು ಲೋಕಸಭಾ ಚುನಾವಣೆಯಲ್ಲಿ ಪುತ್ರ ಡಾ.ಯತೀಂದ್ರನನ್ನು ಗೆಲ್ಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕೀಯವಾಗಿ ನನ್ನನ್ನು ತುಳಿಯುವ ವ್ಯವಸ್ಥಿತ ಷಡ್ಯಂತ್ರ ನಡೆಸಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಕಿಡಿಕಾರಿದರು.

ಮೈಸೂರಿನ ವಿಜಯನಗರದ ತಮ್ಮ ನಿವಾಸದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾಜಕೀಯವಾಗಿ ಹಣಿಯಲು ನನ್ನ ಚಾರಿತ್ರ್ಯ ವಧೆ ಮಾಡುತ್ತಿದ್ದಾರೆ, ನನ್ನ ಕುಟುಂಬವನ್ನು ಬೀದಿಗೆ ಎಳೆದು ತಂದಿದ್ದಾರೆ ಎಂದು ಕೋಪತಾಪ ಪ್ರದರ್ಶಿಸಿದರು. ಮರ ಕಡಿದ ಪ್ರಕರಣದಲ್ಲಿ ತಮ್ಮ ಸಹೋದರ ವಿಕ್ರಂ ಸಿಂಹನನ್ನು ಬಂಧಿಸಿರುವ ಸರ್ಕಾರದ ಕ್ರಮದ ವಿರುದ್ಧ ವಾಗ್ದಾಳಿ ನಡೆಸಿದ ಪ್ರತಾಪ್ ಸಿಂಹ, ತಮ್ಮ ಮಾತಿನುದ್ದಕ್ಕೂ ಸಿದ್ದರಾಮಯ್ಯ ವಿರುದ್ಧ ಚಾಟಿ ಬೀಸಿದರು. ಇನ್ನು ನಿಮ್ಮ ಸುಪುತ್ರ ವಿನಿಟ್ ಕೊಡುವ ಬದಲು ನನ್ನ ವಿರುದ್ಧ ತನಿಖೆ ಆಗಬೇಕು ಎನ್ನುತ್ತಾರೆ ಎಂದು ಹೇಳಿದರು.

ಡಿಸೆಂಬರ್ 16ರಂದು ಬೇಲೂರಿನ ಜಮೀನಿನ ವಿಚಾರದಲ್ಲಿ ಜಯಮ್ಮ, ರಾಜೇಶ್ ಶೆಟ್ಟಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಸಹಾಯ ಮಾಡಿದ ರವಿ ಎಂಬಾತ ಪರಾರಿಯಾಗಿದ್ದಾನೆ. ಈ ತನಕ ಮೂವರನ್ನು ಹಿಡಿಯಲು ಸಾಧ್ಯವಾಗಿಲ್ಲ. ಡಿಸೆಂಬರ್ 24ರ ತನಕ ಅವರನ್ನು ಬಂಧಿಸಲು ಸಾಧ್ಯವಾಗಿಲ್ಲ ಎಂದರು.

> “ಮಾನ್ಯ ಸಿದ್ದರಾಮಯ್ಯ ಅವರಿಗೆ ಸಾಷ್ಟಾಂಗ ನಮಸ್ಕಾರಗಳು. ಅವರನ್ನು ಎರಡು ವಿಚಾರಕ್ಕೆ ಶ್ಲಾಘಿಸಬೇಕು ಅಂದುಕೊಂಡಿದ್ದೇನೆ. ತಮ್ಮ ಮಗನನ್ನು ಲೋಕಸಭಾ ಚುನಾವಣೆಯಲ್ಲಿ ಗೆಲ್ಲಿಸಿ ರಾಜಕೀಯ ಭವಿಷ್ಯ ರೂಪಿಸಲು ಸಿದ್ದರಾಮಯ್ಯ ಯಾರನ್ನಾದರೂ ತುಳಿಯುತ್ತಾರೆ. ಇದನ್ನು ಸಿದ್ದರಾಮಯ್ಯ ಅವರಿಂದ ಕಲಿಯಬೇಕು. ಇಂತಹ ತಂದೆ ಎಲ್ಲರಿಗೂ ಸಿಗಲ್ಲ. ಅವರೊಬ್ಬ ಬ್ರಿಲಿಯೆಂಟ್ ಫಾದರ್. ‘ನಿಜಕ್ಕೂ ನಿಮ್ಮನ್ನು ಮೆಚ್ಚಿದ್ದೇನೆ. ನಿಮಗೆ ಸಾಷ್ಟಾಂಗ ನಮಸ್ಕಾರಗಳು. ನಿಮ್ಮಂತಹ ತಂದೆ ಜಗತ್ತಿನಲ್ಲಿ ಯಾರಿಗೂ ಸಿಗುವುದಿಲ್ಲ’. ‘ನಿಮ್ಮ ಮಗನ ರಾಜಕೀಯ ಭವಿಷ್ಯಕ್ಕಾಗಿ ನಾನು ಅಡ್ಡಿಯಾಗಿದ್ದೇನೆ ಎಂದು ನನ್ನ ಮುಗಿಸಲು ಮುಂದಾಗಿದ್ದೀರಾ. ನೀವು ಬ್ರಿಲಿಯೆಂಟ್ ಪೊಲಿಟಿಷಿಯನ್’.
> –ಪ್ರತಾಪ್ ಸಿಂಹ, ಸಂಸದ

ಹನುಮ ಜಯಂತಿ ಸಂದರ್ಭದಲ್ಲಿ ನಾನು ಒಂದು ಹೇಳಿಕೆ ನೀಡಿದ್ದೆ. ಅದಾದ ಎರಡೇ ಗಂಟೆಯಲ್ಲಿ ಪ್ರತಾಪ್ ಸಿಂಹ ಸಹೋದರ ಮರಗಳ್ಳತನ ಮಾಡಿದ್ದಾನೆ ಎಂದು ಕಾಂಗ್ರೆಸ್‌ನವರು ಪೋಸ್ಟ್ ಹಾಕಿದರು. ಎಫ್‌ಐಆರ್‌ನಲ್ಲಿ ನನ್ನ ತಮ್ಮನ ಹೆಸರು ಇಲ್ಲದಿದ್ದರೂ ಅವರನ್ನು ಬಂಧಿಸುವ ಮೂಲಕ ನನ್ನನ್ನು ಮುಗಿಸುವ ಪ್ರಯತ್ನ ಮಾಡಿದ್ದಾರೆ ಎಂದು ಪ್ರತಾಪ್ ಸಿಂಹ ಕಿಡಿಕಾರಿದರು.

ನನ್ನ ತಮ್ಮ ತಲೆಮರೆಸಿಕೊಂಡಿರಲಿಲ್ಲ. ಎರಡು ದಿನ ಮೊದಲೇ ಅರಣ್ಯ ಇಲಾಖೆಗೆ ಹೋಗಿ ಹೇಳಿಕೆ ದಾಖಲಿಸಿದ್ದಾನೆ. ಅವನ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿರಲಿಲ್ಲ. ಆದರೂ ಸಿನಿಮೀಯ ಶೈಲಿಯಲ್ಲಿ ಚೇಸ್ ಮಾಡಿ ನನ್ನ ತಮ್ಮನನ್ನು ಬಂಧಿಸಿದ್ದಾರೆ ಎಂದು ಆರೋಪಿಸಿದರು. ಆರೂವರೆ ಕೋಟಿ ಚೆಕ್ ಬೌನ್ಸ್ ಪ್ರಕರಣದಲ್ಲಿ ಸಚಿವ ಮಧು ಬಂಗಾರಪ್ಪನನ್ನು ಬಂಧಿಸಬೇಕಿತ್ತು ಆದರೆ ವಿನಾಕಾರಣ ನನ್ನ ತಮ್ಮನನ್ನು ಬಂಧಿಸಿದ್ದಾರೆ ಎಂದರು. ನಮ್ಮ ವಯೋವೃದ್ಧ ತಾಯಿ, ತಂಗಿ ಅರೆಸ್ಟ್ ಮಾಡಿ ನಿಮ್ಮ ಕುಟುಂಬ ರಾಜಕಾರಣವೇ ● 7ನೇ ಪುಟಕ್ಕೆ

ವಿಕ್ರಂ ಸಿಂಹಗೆ ಜಾಮೀನು

ಹಾಸನ: ಅಕ್ರಮವಾಗಿ ಮರ ಕಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೀಡಾಗಿದ್ದ ಬಿಜೆಪಿ ಸಂಸದ ಪ್ರತಾಪ್ ಸಿಂಹ ಸಹೋದರ ವಿಕ್ರಮ್ ಸಿಂಹಗೆ ಜಾಮೀನು ಮಂಜೂರಾಗಿದೆ.



ನಂದಗೋಡನಹಳ್ಳಿಯಲ್ಲಿ 126ಕ್ಕೂ ಹೆಚ್ಚು ಮರ ಕಡಿದು ಸಾಗಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಸಂಸದ ಪ್ರತಾಪ್ ಸಿಂಹ ಸಹೋದರ ವಿಕ್ರಂ ಸಿಂಹಗೆ ಜಾಮೀನು ನೀಡಿ ಬೇಲೂರಿನ ಸೀನಿಯರ್ ಸಿವಿಲ್ ಜಡ್ಜ್ ಆದೇಶ ಹೊರಡಿಸಿದೆ. ವಿಕ್ರಂ ಪರ ವಕೀಲ ಚಂದ್ರೇಗೌಡ, ಧರ್ಮೇಗೌಡ ಜಾಮೀನು ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಜಾಮೀನು ಮಂಜೂರು ಮಾಡಿದ್ದಾರೆ. ಹಾಸನ ಜಡ್ಜ್ ಮನೆಯಿಂದ ವಕೀಲರ ಜೊತೆ ವಿಕ್ರಂ ಸಿಂಹ ಹೊರಬಂದಿದ್ದಾರೆ. ಬೇಲೂರು ತಾಲೂಕಿನ ನಂದಗೋಡನಹಳ್ಳಿ ಬಳಿ 126ಕ್ಕೂ ಹೆಚ್ಚು ಮರ ಕಡಿದು ಸಾಗಣೆ ಪ್ರಕರಣದಲ್ಲಿ ನಿನ್ನೆ ಬಂಧಿಸಲಾಗಿತ್ತು. ಪ್ರಕರಣ ಸಂಬಂಧ ರಾಕೇಶ್ ಶೆಟ್ಟಿ, ಜಯಮ್ಮ ವಿರುದ್ಧ ಬೇಲೂರು ತಹಶೀಲ್ದಾರ್ ಮಮತಾ ನೀಡಿದ್ದ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿತ್ತು. ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪ ಹಿನ್ನೆಲೆ ವಿಕ್ರಂ ಸಿಂಹರನ್ನು ಬಂಧಿಸಲಾಗಿತ್ತು.

ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ ನೋಂದಣಿ ಆರಂಭ

ಮೈಸೂರು,ಡಿ.31–ಕರ್ನಾಟಕ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಗಿಗ್ ಕಾರ್ಮಿಕರಿಗೆ ವಿಮಾ ಯೋಜನೆ ದೇಶದಲ್ಲಿಯೇ ಮೊದಲ ಬಾರಿಗೆ ಜಾರಿಯಾಗಿದ್ದು, ಎಲ್ಲಾ ಅರ್ಹ ಗಿಗ್ ಕಾರ್ಮಿಕರು ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬಹುದು. ವಿಮಾ ಸೌಲಭ್ಯವು ಕರ್ತವ್ಯದಲ್ಲಿರುವಾಗ, ಇಲ್ಲದಿರುವಾಗ ಸಂಭವಿಸುವ ಅಪಘಾತಗಳಿಗೂ ಅನ್ವಯವಾಗುತ್ತದೆ. ಯೋಜನೆಯು ಸಂಪೂರ್ಣ ಉಚಿತ, ಯಾವುದೇ ರೀತಿಯ ಪ್ರೀಮಿಯಂ ಪಾವತಿಸುವ ಅಗತ್ಯತೆ ಇರುವುದಿಲ್ಲ.

ಸ್ವಿಗ್ಗಿ, ಜೊಮಾಟೋಗಳಂತಹ ಸಂಸ್ಥೆಗಳಲ್ಲಿ ಫುಡ್ ಡೆಲಿವರಿ ಮಾಡುವ ಹಾಗೂ ಇ–ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಫ್ಕಾರ್ಟ್, ಬಿಗ್‌ಬಾಸ್ಕೆಟ್, ಪೋರ್ಟರ್, ಫಾರ್ಮಸಿ, ಬ್ಲಿಂಕಿಟ್, ಜೆಪ್ಟೋ, ಬಿಗ್ ಬಾಸ್ಕೆಟ್, ಡಾಮಿನೋಜ್ ಮುಂತಾದ ಸಂಸ್ಥೆಗಳಲ್ಲಿ ಡೆಲಿವರಿ ವೃತ್ತಿಯಲ್ಲಿ ತೊಡಗಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಈ ಯೋಜನೆ ನೋಂದಣಿಗೆ ಅರ್ಹ ಕಾರ್ಮಿಕರಾಗಿರುತ್ತಾರೆ. ಅಪಘಾತದಿಂದ ಮರಣ ಹೊಂದಿದಲ್ಲಿ ವಿಮಾ ಪರಿಹಾರ 2 ಲಕ್ಷ ರೂ. ಹಾಗೂ ಜೀವ ವಿಮೆ 2 ಲಕ್ಷ ರೂ. ಸೇರಿ ಒಟ್ಟು 4 ಲಕ್ಷ ರೂ.ಗಳು, ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ 2 ಲಕ್ಷ ರೂ.ವರೆಗೆ, ಆಸ್ಪತ್ರೆ ವೆಚ್ಚ ಮರುಪಾವತಿ 1 ಲಕ್ಷ ರೂ.ವರೆಗೆ (ಅಪಘಾತ ಪ್ರಕರಣಗಳಿಗೆ ಮಾತ್ರ), ಜೀವ ವಿಮಾ 2 ಲಕ್ಷ ರೂ. ಸೌಲಭ್ಯ ದೊರೆಯುತ್ತದೆ.

ನೋಂದಣಿಗೆ ಅರ್ಹತೆ: 18 ರಿಂದ 60 ವಯೋಮಾನದವರು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಭವಿಷ್ಯನಿಧಿ ಹಾಗೂ ಇ.ಎಸ್.ಐ ಫಲಾನುಭವಿಯಾಗಿರಬಾರದು. ಕರ್ನಾಟಕದಲ್ಲಿ ಗಿಗ್ ವೃತ್ತಿ (ಡೆಲಿವರಿ ಕಾರ್ಯ) ನಿರ್ವಹಿಸುತ್ತಿರುವವರು ಮಾತ್ರ ನೋಂದಾಯಿಸಿಕೊಳ್ಳಬಹುದು.

ಅವಶ್ಯಕ ದಾಖಲೆಗಳು: ಆಧಾರ್ ಸಂಖ್ಯೆ, ವೃತ್ತಿ ನಿರ್ವಹಿಸುತ್ತಿರುವ ಸಂಸ್ಥೆಗಳು ವಿತರಿಸಿದ ಗುರುತಿನ ಚೀಟಿ, ಇ–ಶ್ರಮ್ ನೋಂದಣಿ ಸಂಖ್ಯೆ (ಇಲ್ಲವಾದಲ್ಲಿ www.eshram.gov.in ಅಲ್ಲಿ ನೋಂದಾಯಿಸಿ ಪಡೆದುಕೊಳ್ಳುವುದು).

ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಸಹಾಯವಾಣಿ 155214 (24x7), ಕಾರ್ಮಿಕ ಇಲಾಖೆ, ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರ ಕಚೇರಿಗಳನ್ನು ಸಂಪರ್ಕಿಸಬಹುದು ಎಂದು ಸಹಾಯಕ ಕಾರ್ಮಿಕ ಆಯುಕ್ತರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಿಖಿಲ್ ಕುಮಾರಸ್ವಾಮಿ ಅಭಿಮಾನಿಗಳ ಬಳಗದ 2024 ನೂತನ ವರ್ಷದ ಕ್ಯಾಲೆಂಡರ್ ಅನ್ನು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಬಿಡುಗಡೆಗೊಳಿಸಿದರು. ಈ ವೇಳೆ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಗೌರವಾಧ್ಯಕ್ಷ ಶ್ರೀನಿವಾಸ್‌ಗೌಡ, ಖಜಾಂಚಿ ಮೂರ್ತಿ, ಧರ್ಮಪಾಲ್, ಸಂದೀಪ, ಸುಬ್ರಹ್ಮಣ್ಯ, ಉಮೇಶ್, ಎಸ್.ಮಂಜು, ಬಿ.ನವೀನ್ ಉಪಸ್ಥಿತರಿದ್ದರು.



ಮೈಸೂರು ನಗರ ಪಾತ್ರೆ ವ್ಯಾಪಾರಿಗಳ ಸಂಘದ ಅಧ್ಯಕ್ಷ ಕೆ.ತುಕಾರಾಂ ಯಾದವ್ ಹೊರ ತಂದಿರುವ 2024ರ ಕ್ಯಾಲೆಂಡರ್ ಅನ್ನು ಮಾಜಿ ಶಾಸಕ ವಾಸು ಬಿಡುಗಡೆ ಮಾಡಿದರು. ಭಾರತೀಯ ಜೀವ ವಿಮಾ ನಿಗಮದ ನಿವೃತ್ತ ಅಧಿಕಾರಿ ಬೂಕನಕೆರೆ ವಿಜೇಂದ್ರ, ಮಾಜಿ ಕಾರ್ಪೊರೇಟರ್ ವಸಂತ ಶ್ರೀಕಂಠ, ಇ.ಜಗನ್ನಾಥ ಇತರರಿದ್ದರು.

ಅಯೋಧ್ಯೆ ಟ್ರಸ್ಟ್ ಹೆಸರಲ್ಲಿ ವಂಚಕರಿಂದ ಜನರಿಗೆ ಮೋಸ: ವಿಹೆಚ್‌ಪಿ ಆರೋಪ

ನವದೆಹಲಿ,ಡಿ.31–ಅಯೋಧ್ಯೆ ರಾಮ ಮಂದಿರ ಟ್ರಸ್ಟ್‌ನ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ಜನರನ್ನು ವಂಚಿಸುತ್ತಿದ್ದಾರೆ ಎಂದು ವಿಶ್ವಹಿಂದೂ ಪರಿಷತ್ ಆರೋಪಿಸಿದೆ. ಟ್ರಸ್ಟ್‌ನ ಅನುಮತಿ ಇಲ್ಲದೇ ದೇಣಿಗೆ ಸಂಗ್ರಹಿಸುವ ಮೂಲಕ ಹಲವು ವ್ಯಕ್ತಿಗಳು ವಂಚನೆ ಮಾಡುತ್ತಿದ್ದಾರೆ. ಈ ವಿಷಯವನ್ನು ಸಿಎಂ ಯೋಗಿ ಆದಿತ್ಯನಾಥ್, ಕೇಂದ್ರ ಗೃಹ ಸಚಿವಾಲಯದ ಗಮನಕ್ಕೂ ತರಲಾಗಿದ್ದು, ಕ್ರಮಕ್ಕೆ ಆಗ್ರಹಿಸಲಾಗಿದೆ ಎಂದು ವಿಶ್ವ ಹಿಂದೂ ಪರಿಷತ್ ತಿಳಿಸಿದೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ವಿಹೆಚ್‌ಪಿಯ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಾಲ್, ಮಂದಿರ ಟ್ರಸ್ಟ್ ಹೆಸರಿನಲ್ಲಿ ವಂಚನೆ ಮಾಡುತ್ತಿರುವ ಇಂತಹ ವಂಚಕರ ಬಗ್ಗೆ ಎಚ್ಚರದಿಂದ ಇರಲು ಜನತೆಗೆ ಮನವಿ ಮಾಡಿದ್ದಾರೆ. ಅವರು ಉತ್ತರ ಪ್ರದೇಶ ಪೊಲೀಸ್ ಮುಖ್ಯಸ್ಥರಿಗೆ ಕಳುಹಿಸಿದ ದೂರನ್ನು ಮೈಕ್ರೋಬ್ಲಾಗಿಂಗ್ ಸೈಟ್‌ನಲ್ಲಿ ಹಂಚಿಕೊಂಡಿದ್ದಾರೆ, ಅದರ ಪ್ರತಿಯನ್ನು ಆದಿತ್ಯನಾಥ್ ಮತ್ತು ಗೃಹ ಸಚಿವ ಅಮಿತ್ ಶಾ ಅವರಿಗೂ ಕಳಿಸಲಾಗಿದೆ.

ಎಚ್ಚರ! ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ನಕಲಿ ಗುರುತಿನ ಚೀಟಿ ಹೊಂದಿರುವವರು ಜನರನ್ನು ವಂಚಿಸಲು ಪ್ರಯತ್ನಿಸುತ್ತಿದ್ದಾರೆ' ಎಂದು ವಿಎಚ್‌ಪಿ ವಕ್ತಾರ ಬನ್ಸಾಲ್ ತಿಳಿಸಿದ್ದಾರೆ. ಅಯೋಧ್ಯೆಯ ರಾಮ ಮಂದಿರದಲ್ಲಿ ಜ.22ರಂದು ನಡೆಯುವ ಶಂಕುಸ್ಥಾಪನೆ ಸಮಾರಂಭಕ್ಕೆ ಪ್ರತ್ಯೇಕ ಸಮಿತಿ ರಚಿಸಲು ಮತ್ತು ಹಣವನ್ನು ಸಂಗ್ರಹಿಸಲು ಯಾರಿಗೂ ಅನುಮತಿ ನೀಡಲಾಗಿಲ್ಲ ಎಂದು ಎಕ್ಸ್ ಪೋಸ್ಟ್‌ನಲ್ಲಿ ವಿಎಚ್‌ಪಿ ಇತ್ತೀಚೆಗೆ ಹೇಳಿತ್ತು

ಮಾಲೀಕರ ಮನೆಯಲ್ಲಿ ಕಳವು ಮಾಡಿದ್ದ ಮಹಿಳೆ ಬಂಧನ

ಮೈಸೂರು, ಡಿ.31(ಬಿಎಲ್‌ಯು)– ಬಾಡಿಗೆ ಮನೆಯಲ್ಲಿದ್ದ ಮಹಿಳೆಯೊಬ್ಬಳು ಮಾಲೀಕರ ಮನೆಯಲ್ಲಿ ಕಳುವು ಮಾಡಿ ಈಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾಳೆ.

ಮೂಲತಃ ಮಂಡ್ಯದ ಪ್ರಿಯದರ್ಶಿನಿ (35) ಬಂಧನಕ್ಕೊಳಗಾದ ಮಹಿಳೆಯಾಗಿದ್ದು, ಈಕೆ ಮೈಸೂರಿನ ಯರಗನಹಳ್ಳಿಯಲ್ಲಿ ಜ್ಯೋತಿ ಎಂಬುವರ ಮನೆ ಬಾಡಿಗೆ ಪಡೆದು ವಾಸವಿದ್ದಳು. ಈ ವೇಳೆ ಮನೆಯವರ ಮನೆಯ ಕೀ ಕಳುವು ಮಾಡಿದ್ದಳು. ಜ್ಯೋತಿ ಹೊರಗೆ ಹೋಗಿದ್ದ ಸಂದರ್ಭದಲ್ಲಿ ಪ್ರಿಯದರ್ಶಿನಿ ಮನೆಯ ಕೀ ತೆಗೆದು ಬೀರುವಿನಲ್ಲಿದ್ದ 1.45 ಲಕ್ಷ ರೂ. ಮೌಲ್ಯದ 35 ಗ್ರಾಂ ಚಿನ್ನಾಭರಣ ಕಳುವು ಮಾಡಿದ್ದಳು. ಈ ಸಂಬಂಧ ಜ್ಯೋತಿ ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಸ್ಥಳ ಪರಿಶೀಲನೆ ಮಾಡಿ ಜ್ಯೋತಿ ಅವರಿಂದ ಮಾಹಿತಿ ಪಡೆದ ಸಂದರ್ಭದಲ್ಲಿ ಪೊಲೀಸರಿಗೆ ಪ್ರಿಯದರ್ಶಿನಿ ಬಗ್ಗೆ ಅನುಮಾನ ಉಂಟಾಯಿತು. ಈ ವೇಳೆ ಪೊಲೀಸರು ವಿಚಾರಣೆಗೊಳಪಡಿಸಿದಾಗ ತಾನೇ ಕಳುವು ಮಾಡಿರುವುದಾಗಿ ಪ್ರಿಯದರ್ಶಿನಿ ತಪ್ಪು ಒಪ್ಪಿಕೊಂಡಳು.

ಮಂಡ್ಯ ಹಾಗೂ ಶ್ರೀರಂಗಪಟ್ಟಣ ದಲ್ಲಿ ವಾಸವಿದ್ದ ಸಂದರ್ಭದಲ್ಲಿ ಪ್ರಿಯದರ್ಶಿನಿ ಕಳುವು ಪ್ರಕರಣದಲ್ಲಿ ಭಾಗಿಯಾಗಿರುವುದು ಪೊಲೀಸರ ತನಿಖೆ ವೇಳೆ ಬಯಲಾಗಿದೆ.

ಯುವಕರಿಬ್ಬರ ಜಗಳ ನೋಡುತ್ತಿದ್ದ ವೃದ್ಧ ಕೊಲೆ

ಮೈಸೂರು, ಡಿ.31(ಬಿಎಲ್‌ಯು)– ಯುವಕರಿಬ್ಬರ ಜಗಳ ನೋಡುತ್ತಿದ್ದ ವೃದ್ಧನೊಬ್ಬನು ಕೊಲೆಯಾದ ಘಟನೆ ಮೈಸೂರಿನ ಸಿವೇಜ್ ಫಾರಂ ಬಳಿ ಸಂಭವಿಸಿದೆ. ಮೈಸೂರಿನ ಕನಕಗಿರಿ ವಾಸಿ ಲಿಂಗರಾಜು (65) ಕೊಲೆಯಾದವರಾಗಿದ್ದು, ಸಿವೇಜ್ ಫಾರಂ ಸರ್ಕಲ್ ನಲ್ಲಿ ಕನಕಗಿರಿ ವಾಸಿಗಳಾದ ಆಕಾಶ್ ಹಾಗೂ ವೆಂಕಟೇಶ್ ಎಂಬುವರ ನಡುವೆ ಜಗಳ ನಡೆಯುತ್ತಿತ್ತು. ಇಬ್ಬರ ನಡುವಿನ ಮಾತಿನ ಚಕಮಕಿ ಅತಿರೇಕಕ್ಕೆ ಹೋದಾಗ ವೆಂಕಟೇಶ್ ಮನೆಗೆ ಹೋಗಿ ಕ್ರಿಕೆಟ್ ಬ್ಯಾಟ್ ತಂದು ಬೀಸಿದಾಗ ಆಕಾಶ್ ಕೆಳಗೆ ಬಗ್ಗಿದ್ದಾನೆ. ಈ ವೇಳೆ ಜಗಳ ನೋಡುತ್ತಿದ್ದ ಲಿಂಗರಾಜು ತಲೆಗೆ ಬ್ಯಾಟ್ ಅಪ್ಪಳಿಸಿದೆ. ಪರಿಣಾಮ ತೀವ್ರ ರಕ್ತಸ್ರಾವದಿಂದ ಕೆಳಗೆ ಬಿದ್ದ ಲಿಂಗರಾಜುನನ್ನು ಕೂಡಲೇ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಡಿ.28ರಂದು ಈ ಘಟನೆ ನಡೆದಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅಸ್ವಸ್ಥರಾಗಿದ್ದ ಲಿಂಗರಾಜು ನಿನ್ನೆ ರಾತ್ರಿ ಮೃತಪಟ್ಟರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡ ವಿದ್ಯಾರಣ್ಯಪುರಂ ಪೊಲೀಸರು ವೆಂಕಟೇಶ್‌ನನ್ನು ಬಂಧಿಸಿದ್ದಾರೆ.

ಗ್ರಾಮಾಭಿವೃದ್ಧಿ ಯೋಜನೆಯಿಂದ ಮಹಿಳೆಯರು ಮುಖ್ಯವಾಹಿನಿಗೆ

ಮೈಸೂರು, ಡಿ.31(ಎಂಟಿವೈ)– ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಗ್ರಾಮಾಭಿವೃದ್ಧಿ ಯೋಜನೆ ಕಾರ್ಯನಿರ್ವಹಿಸುತ್ತಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಪ್ರಾದೇಶಿಕ ಕಚೇರಿಯ ಆಡಳಿತ ಯೋಜನಾಧಿಕಾರಿ ಲೋಕೇಶ್ ತಿಳಿಸಿದ್ದಾರೆ.



ಮೈಸೂರಿನ ಮಹದೇವಪುರದ ಗುರುಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಜೆ.ಪಿ.ನಗರ ವಲಯವು ಆಯೋಜಿಸಿದ್ದ ಪ್ರಗತಿಬಂಧು ಸ್ವಸಹಾಯಕ ಸಂಘಗಳ ಒಕ್ಕೂಟದ ಸಾಧನಾ ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 6.6 ಲಕ್ಷ ಸ್ವಸಹಾಯ ಸಂಘಗಳಲ್ಲಿ 53.64 ಲಕ್ಷ ಸದಸ್ಯರಿದ್ದಾರೆ. ಅನ್ನ, ಅಭಯ, ವಿದ್ಯೆ ಹಾಗೂ ಔಷಧಿ– ಈ ನಾಲ್ಕಕ್ಕೆ ಟ್ರಸ್ಟ್ ಸಹಾಯ ಮಾಡುತ್ತಿದೆ. ಮನುಷ್ಯನಿಗೆ ನೆಮ್ಮದಿ ಬೇಕು. ಅದನ್ನು ಕೊಳ್ಳಲಾಗುವುದಿಲ್ಲ. ಇದಕ್ಕೆ ಮನಸ್ಥಿತಿ ಮತ್ತು ಮನಸ್ಥಿತಿ ಚೆನ್ನಾಗಿರಬೇಕು. ಚಿಂತೆ ಇದ್ದರೆ ಚಿತೆಗೆ ಹೋಗಬೇಕಾಗುತ್ತದೆ. ಎಲ್ಲರೂ ಚಿಂತೆ ಬಿಟ್ಟು, ಚಿಂತನೆ ಮಾಡುವ ಗುಣ ಬೆಳೆಸಿಕೊಳ್ಳಬೇಕು. ಸಂಘ, ಉಳಿಕೆ, ಪ್ರಗತಿ ಬಗ್ಗೆ ಆಲೋಚಿಸಿ ಸಕಾರಾತ್ಮಕ ಚಿಂತನೆ ಮಾಡುವಂತೆ ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ವಕೀಲೆ ಉಷಾ ಮಾತನಾಡಿ, ಮಹಿಳೆಯರು ಯೋಜನೆಯ ಸದುಪಯೋಗ ಪಡೆದು, ಪರಸ್ಪರ ಸಹಕಾರ ಮನೋಭಾವದಿಂದ ಸ್ವಾವಲಂಬಿಗಳಾಗಬೇಕು. ಆ ಮೂಲಕ ಆರ್ಥಿಕಾಭಿವೃದ್ಧಿ ಹೊಂದಬೇಕು. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಮಹಿಳೆಯರಿಗೆ ಉದ್ಯೋಗ, ಮಕ್ಕಳಿಗೆ ಶಿಕ್ಷಣಕ್ಕೆ ಮಾತ್ರವಲ್ಲದೇ ಕುಟುಂಬಕ್ಕೆ ಕೃಷಿ ಮತ್ತಿತರ ಚಟುವಟಿಕೆಗಳಿಗೂ ಸಾಲ ನೀಡುತ್ತಿದೆ ಎಂದರು.

ಪಟ್ಟಣ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರಮೂರ್ತಿ ಮಾತನಾಡಿ, ಮಹಾತ್ಮ ಗಾಂಧಿಯವರು ಕಂಡಂತಹ ಗ್ರಾಮಾಭಿವೃದ್ಧಿಯ ಕನಸನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನನಸು ಮಾಡಿದೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರಿಗೂ ಸಮಾನತೆ ಸಿಗಬೇಕು. ಆರ್ಥಿಕ ಸಬಲೀಕರಣ ಆಗಬೇಕು ಎಂಬ ಕಾರಣಕ್ಕಾಗಿ ಸ್ವಸಹಾಯ ಸಂಘಗಳನ್ನು ಸ್ಥಾಪಿಸಲಾಗಿದೆ. ಮಹಿಳೆಯರು ಇದರ ಲಾಭ ಪಡೆಯಬೇಕು. ಕುಟುಂಬ ನಿರ್ವಹಣೆಯ ಜೊತೆಗೆ ಆರ್ಥಿಕ ಶಿಸ್ತನ್ನು ರೂಢಿಸಿಕೊಳ್ಳಬೇಕು ಎಂದರು.

ಸಮಾವೇಶವನ್ನು ಗುರುಭವನ ಮಾಲೀಕ ನಾಗರಾಜು ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮುಖ್ಯ ಅತಿಥಿಯಾಗಿದ್ದರು. ಮಹದೇವಪುರ ಬಿ ಕಾರ್ಯಕ್ಷೇತ್ರ ಒಕ್ಕೂಟದ ಅಧ್ಯಕ್ಷೆ ಪುಟ್ಟತಾಯಮ್ಮ ಅಧ್ಯಕ್ಷತೆ ವಹಿಸಿದ್ದರು. ಎ ಕಾರ್ಯಕ್ಷೇತ್ರ ಒಕ್ಕೂಟದ ಅಧ್ಯಕ್ಷೆ ಭಾರತಿ ಮಾತನಾಡಿದರು. ವಿಜಿಲೆನ್ಸ್ ಪ್ರಬಂಧಕ ಚಂದ್ರಶೇಖರ್ ಯೋಜನೆಯ ಬಗ್ಗೆ ಮಾಹಿತಿ ನೀಡಿದರು. ಜೆ.ಪಿ.ನಗರ ವಲಯ ಮೇಲ್ವಿಚಾರಕಿ ಎನ್.ಮಮತಾ ಸ್ವಾಗತಿಸಿದರು. ಸಹಾಯಕ ಆಡಳಿತ ಪ್ರಬಂಧಕಿ ರಶ್ಮಿತಾ ವಂದಿಸಿದರು. ಶಾರದಾದೇವಿನಗರ ವಲಯ ಮೇಲ್ವಿಚಾರಕ ಶಶಿಕುಮಾರ್ ನಿರೂಪಿಸಿದರು. ವಲಯದ ಸೇವಾ ಪ್ರತಿನಿಧಿಗಳು, ಸದಸ್ಯರು ಪಾಲ್ಗೊಂಡಿದ್ದರು.

ಮಾದರಿ ಸಂಘಗಳು, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ನಂತರ ಸದಸ್ಯರು ಹಾಗೂ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಮೈಸೂರಲ್ಲಿ ಅಭಿಮಾನಿಗಳಿಂದ ವಿಷ್ಣು ಪುಣ್ಯಸ್ಮರಣೆ



ಮೈಸೂರು,ಡಿ.31(ಜಿಎ)–ವಿಷ್ಣು ಒಕ್ಕೂಟ ಅಭಿಮಾನಿಗಳ ಸಂಘದಿಂದ ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿರುವ ವಿಷ್ಣುವರ್ಧನ್ ಉದ್ಯಾನವನದಲ್ಲಿ ವಿಷ್ಣುವರ್ಧನ್ ಅವರ 14ನೇ ವರ್ಷದ ಪುಣ್ಯಸ್ಮರಣೆಯನ್ನು ಶನಿವಾರ ಆಚರಿಸಲಾಯಿತು.

ಅಭಿಮಾನಿಗಳು ವಿಷ್ಣುವರ್ಧನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಅನ್ನ ಸಂತರ್ಪಣೆ ಏರ್ಪಡಿಸಿ, ವಿಷ್ಣು ಗ್ರೂಪ್ ವಾದ್ಯಗೋಷ್ಠಿ ವತಿಯಿಂದ ವಿಷ್ಣುವರ್ಧನ್ ನಟಿಸಿರುವ ಚಿತ್ರದ ಹಾಡುಗಳ ರಸಮಂಜರಿ ಕಾರ್ಯಕ್ರಮದ ಮೂಲಕ ಸ್ಮರಿಸಿದರು. ಈ ವೇಳೆ ವಿಷ್ಣು ಒಕ್ಕೂಟ ಅಭಿಮಾನಿಗಳ ಸಂಘ ಅಧ್ಯಕ್ಷದ ಎಂ.ಡಿ. ಪಾರ್ಥಸಾರಥಿ ಮಾತನಾಡಿ, ವಿಷ್ಣುವರ್ಧನ್ ಅವರು ಕನ್ನಡ ಚಿತ್ರರಂಗದ ದಂತಕಥೆ, ಕನ್ನಡ ಚಿತ್ರರಂಗಕ್ಕೆ ಅವರು ನೀಡಿದ ಕಲಾಸೇವೆ ಅವಿಸ್ಮರಣೀಯ, 200ಕ್ಕೂ ಅಧಿಕ ಚಿತ್ರಗಳ ಮೂಲಕ ಕೋಟ್ಯಂತರ ಅಭಿಮಾನಿಗಳ ಮನ ಗೆದ್ದ ಅವರ ಕಲೆ, ಶ್ರಮ ಯುವ ಕಲಾವಿದರಿಗೆ ಸ್ಫೂರ್ತಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುಬಾರಕ್, ಜಿ.ರಾಘವೇಂದ್ರ, ಅಜಯ್ ಶಾಸ್ತ್ರಿ, ಟಿ.ಎಸ್. ಅರುಣ್, ಲೋಕೇಶ್, ಸಿಂಗರ್ ಮಹೇಂದರ್, ಚಂದನ ಶ್ರೀನಿವಾಸ್, ಬಸವರಾಜ್, ಸಿದ್ದಪ್ಪ ಕುಮಾರ್, ಲಲಿತಾದ್ರಿಪುರ ಮಹೇಂದ್ರ, ದೀಪಕ್, ನವೀನ್, ಸುರೇಶ್, ಸಂತೋಷ್, ಮಹದೇವ್, ಸಕಲಿ ಮಹದೇವ್, ಹರೀಶ್ ನಾಯ್ಡು, ನವೀನ್ ಮತ್ತಿತರರು ಉಪಸ್ಥಿತರಿದ್ದರು.

ವಿಷ್ಣುವರ್ಧನ್ ಸ್ಮರಣೆ: ರಕ್ತದಾನ ಶಿಬಿರ

ಮೈಸೂರು,ಡಿ.31–ಸಾಹಸಸಿಂಹ ವಿಷ್ಣುವರ್ಧನ್ ಅವರ 14ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಉದ್ಬೂರು ಗೇಟ್ ಬಳಿರುವ ವಿಷ್ಣುವರ್ಧನ್ ಸ್ಮಾರಕದಲ್ಲಿ ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಶಿಬಿರದಲ್ಲಿ 50ಕ್ಕೂ ಹೆಚ್ಚು ಅಭಿಮಾನಿಗಳು ಸ್ವಯಂಪ್ರೇರಿತ ರಕ್ತದಾನ ಮಾಡಿದರು. ರಕ್ತದಾನ ಶಿಬಿರವನ್ನು ವಿಷ್ಣುವರ್ಧನ್ ಅಳಿಯ ಅನಿರುಧ್ ಉದ್ಘಾಟಿಸಿ ಮಾತನಾಡಿ, ವಿಷ್ಣುವರ್ಧನ್‌ರವರ ಅಭಿಮಾನಿಗಳು ವಿಶ್ವದೆಲ್ಲೆಡೆ ಇದ್ದಾರೆ. ಇಂದು 14ನೇ ವರ್ಷದ ಪುಣ್ಯಸ್ಮರಣೆ. ಅಭಿಮಾನಿಗಳು ವಿವಿಧೆಡೆ ರಸಮಂಜರಿ ಕಾರ್ಯಕ್ರಮ, ಅನ್ನಸಂತರ್ಪಣೆ, ಆರೋಗ್ಯ ತಪಾಸಣೆ ಶಿಬಿರ, ಸಮಾಜಮುಖಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು. ಜೀವಧಾರ ರತ್ನ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ರೋಟರಿ ಕ್ಲಬ್ ಸೌತ್ ಈಸ್ಟ್ ಕಾರ್ಯದರ್ಶಿ ಎನ್.ಟಿ. ಗಿರೀಶ್, ಅಜಯ್ ಶಾಸ್ತ್ರಿ, ಭೈರತಿ ಲಿಂಗರಾಜು, ವಿಷ್ಣುಸೇನಾ ಅಧ್ಯಕ್ಷ ಶ್ರೀಕಂಠೇಗೌಡ, ಮರಟಿಕ್ಯಾತನಹಳ್ಳಿ ಮಂಜು, ವರುಣ ಮಹದೇವ್, ಜಟ್ಟಿಹುಂಡಿ ಗೋಪಾಲ್, ರಶ್ಮಿ, ಪ್ರಭು, ಸುರೇಶ್ ಇನ್ನಿತರರಿದ್ದರು.




ಡಾ.ಅಂಬೇಡ್ಕರ್ ಆದಿದ್ರಾವಿಡ ಪೌರಕಾರ್ಮಿಕರ ಜನಾಂಗದ ಅಭಿವೃದ್ಧಿ ಟ್ರಸ್ಟ್ ಪದಾಧಿಕಾರಿಗಳು

ಮೈಸೂರು,ಡಿ.31–ಅಖಿಲ ಕರ್ನಾಟಕ ಡಾ.ಬಿ.ಆರ್. ಅಂಬೇಡ್ಕರ್ ಆದಿದ್ರಾವಿಡ ಪೌರಕಾರ್ಮಿಕರ ಜನಾಂಗದ ಅಭಿವೃದ್ಧಿ ಟ್ರಸ್ಟ್‌ನ ನೂತನ ಪದಾಧಿಕಾರಿಗಳನ್ನು 3 ವರ್ಷದ ಅವಧಿಗೆ ನೇಮಕ ಮಾಡಲಾಗಿದೆ. ವಿ.ರಾಜು–ಗೌರವ ಸಲಹೆಗಾರ, ಪಳನಿ–ಗೌರವ ಅಧ್ಯಕ್ಷ, ಬಿ.ಎಸ್.ಸುಬ್ರಹ್ಮಣ್ಯ–ಅಧ್ಯಕ್ಷ, ಸಿ.ಆರ್.ವಿಜಯ್–ಉಪಾಧ್ಯಕ್ಷ, ಹೆಚ್.ಎಸ್.ಸುರೇಶ್ ಕುಮಾರ್–ಪ್ರಧಾನ ಕಾರ್ಯದರ್ಶಿ, ಪಳನಿ–ಖಜಾಂಚಿ, ಶಿವ (ಶ್ರೀನಿವಾಸ್), ಜಿ.ಮಾದೇವ, ಎಸ್.ಪಿ.ಮಾದೇವ, ಸುಬ್ರಮಣ್ಯ, ವೆಂಕಟ, ಶಂಕರ್‌ಬಾಬು, ಆರ್.ರಾಜಣ್ಣ, ಗೋಪಾಲ್, ಬಿ.ರಂಗಸ್ವಾಮಿ, ಮಾದೇವು, ಪುಷ್ಪರಾಜ್, ಪ್ರವೀಣ್‌ಕುಮಾರ್, ಆರ್.ಚೆನ್ನಯ್ಯ, ಕೃಷ್ಣ, ನಾಗರಾಜು, ರಂಗ (ನಿರ್ದೇಶಕರು).



ರಾಮಕೃಷ್ಣ ವಿದ್ಯಾಶಾಲೆಯಿಂದ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ಅನಂತಗೀತ ವಿದ್ಯಾಲಯದ 9ನೇ ತರಗತಿ ವಿದ್ಯಾರ್ಥಿ ಪ್ರೇರಣ್‌ಗೆ ರಾಮಕೃಷ್ಣ ಆಶ್ರಮದ ಶ್ರೀ ಯುಕ್ತೇಶಾನಂದ ಸ್ವಾಮೀಜಿ ಬಹುಮಾನ ನೀಡಿ, ಅಭಿನಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.1.2024 ಸೋಮವಾರ, ಮಳೆ ನಕ್ಷತ್ರ: ಪೂಷಾ 29.12.2023ರಿಂದ 15.01.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ –ಶಾಂತಾ ನಾಗರಾಜ್, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ–ಡಾ.ರಾಮಕೃಷ್ಣ, 6.50 ರೈತರಿಗೆ ಸಲಹೆ, 9.00 ನೆನಪಿನಂಗಳ: ಹಿರಿಯ ಸಾಹಿತಿ ಡಾ.ಯು.ಆರ್. ಅನಂತಮೂರ್ತಿ ಅವರೊಂದಿಗೆ ಕೆ.ಎಸ್.ನಿರ್ಮಲಾದೇವಿ ನಡೆಸಿದ್ದ ಸಂವಾದ. ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ, 10.00 ಡಾ.ಮೈಸೂರ್ ಎಂ.ಮಂಜುನಾಥ್–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ದೇವರನಾಮ: ಕವಿತಾ ಕೃಷ್ಣಮೂರ್ತಿ, ಅರುಣ್ ಸಾಯಿರಾಂ, 12.45 ನಮ್ಮ ಆರೋಗ್ಯ: ಆಹಾರ ಸುರಕ್ಷಾ ಮತು ಗುಣಮಟ್ಟ ಕಾಯ್ದೆ ಕುರಿತು ಡಾ.ಪ್ರಸಾದ್ ಪಿ.ಎಂ. ಅವರೊಂದಿಗೆ ಮಾತುಕತೆ, 1.25 ಭಾವಗೀತೆಗಳು, 3.00 ಎ.ಕೆ.ಸಿ.ನಟರಾಜನ್–ಕ್ಲಾರಿಯೋನೆಟ್ ವಾದನ. **ಸಂಜೆ:** 4.00 ಮಹಿಳಾರಂಗ: ಹೊಸ ವರ್ಷದ ಸಂದರ್ಭದಲ್ಲಿ ಗಾಯಕಿಯರಾದ ಜಯಂತಿ ವಿ.ಭಟ್ ಹಾಗೂ ದಿವ್ಯಾ ಸಚಿ ಅವರೊಂದಿಗ್ ಸಂವಾದ, 4.45 ಹಿಂದಿ ಪಾಠ: ಶಾಂತಾ ಡಿ.ಕಿಣಿ, 6.00 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು ಹೊನ್ನು"–ಔಷಧಿ ಹಾಗೂ ಸುಗಂಧ ದ್ರವ್ಯ ಬೆಳೆಗಳ ಬೇಸಾಯ ಕುರಿತು ಸಂವಾದ. ಭಾಗವಹಿಸುತ್ತಾರೆ ಡಾ.ಆರ್.ಸಿದ್ದಪ್ಪ ಹಾಗೂ ಟಿ.ಆರ್.ವಿನಯ್. **ರಾತ್ರಿ:** 9.30 ಮತ್ತೆ ಕೇಳಿ ಹಾದಿಯಲ್ಲಿ ಕಂಡ ಮುಖ: ಯಕ್ಷಗಾನ ಬೊಂಬೆಯಾಟದ ಭಾಗವತರಾದ ಹಲ್ಲರೆಯ ಶಿವಬುದ್ಧಿ, 10.00 ನಾಟಕ: "ಪೈಲ್ವಾನ್ ಪಾಪಣ್ಣ", ರಚನೆ–ಡಿ.ಬಿ.ಕೆ.ರಮೇಶ್, ನಿರ್ದೇಶನ ಹಾಗೂ ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್.

- **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಬಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.
- **ರಮ್ಮನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ :** 2024ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ, ಸ್ಥಳ: ರಮ್ಮನಹಳ್ಳಿ, ಮೈಸೂರು ತಾಲೂಕು, ಬೆಳಗ್ಗೆ 10 ಗಂಟೆಗೆ.
- **ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್ :** ಖ್ಯಾತ ಸಾಹಿತಿ ಡಾ. ಚದುರಂಗ (ಡಾ. ಸುಬ್ರಹ್ಮಣ್ಯರಾಜೇ ಅರಸ್) ಅವರ 109ನೇ ಹುಟ್ಟುಹಬ್ಬ ಆಚರಣೆ, ಉದ್ಘಾಟನೆ: ಅರಸು ಮಂಡಳಿ ಸಂಘದ ಅಧ್ಯಕ್ಷ ಹೆಚ್‌ಎಂಟಿ ಲಿಂಗರಾಜೇ ಅರಸ್, ಅಧ್ಯಕ್ಷತೆ: ಅರಸು ಮಹಿಳಾ ಜಾಗೃತಿ ಸಭಾ ಟ್ರಸ್ಟ್, ಗೌರವ ಅಧ್ಯಕ್ಷೆ ಶ್ರೀಮತಿ ಬಿ. ವಿಜಯ ಅರಸ್, ಸ್ಥಳ: ದಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 10 ಗಂಟೆಗೆ.
- **ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ, ಮೈಸೂರು :** ಕನ್ನಡ ಪತ್ರಿಕೆ ಕೊಂಡು ಓದಿ–ಅಭಿಯಾನ, ಅಭಿಯಾನಕ್ಕೆ ಚಾಲನೆ: ಶಾಸಕ ಹರೀಶ್‌ಗೌಡ, ಅಧ್ಯಕ್ಷತೆ: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸ್ಥಳ: ಗಾಂಧಿ ಚೌಕ, ದೊಡ್ಡ ಗಡಿಯಾರ ಹತ್ತಿರ, ಬೆಳಗ್ಗೆ 10 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ.
- **ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಜಯಂತ್ಯುತ್ಸವ ಸಮಿತಿ :** ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ, ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ: ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಗೌರವ ಉಪಸ್ಥಿತಿ: ಪಶುಸಂಗೋಪನಾ ಸಚಿವ ಕೆ. ವೆಂಕಟೇಶ್, ಅಧ್ಯಕ್ಷತೆ: ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಪ್ರತಾಪ್ ಸಿಂಹ, ಶ್ರೀನಿವಾಸಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಷ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 10.30ಕ್ಕೆ.
- **ಹರಿ ವಿದ್ಯಾಲಯ:** ಹರಿ ಸೌರಭ–2023–24, ಮುಖ್ಯ ಅತಿಥಿ: ಸಿಎಫ್‌ಟಿಆರ್‌ಐ ನಿವೃತ್ತ ಹಿರಿಯ ವಿಜ್ಞಾನಿ ಕೊಳ್ಳೇಗಾಲ ಶರ್ಮ, ಹಿನ್ನೆಲೆ ಗಾಯಕ ಶ್ರೀ ಹರ್ಷ, ಅಧ್ಯಕ್ಷತೆ: ಗೌರವ ಕಾರ್ಯದರ್ಶಿ ಹೆಚ್.ಆರ್. ಭಗವಾನ್, ಸ್ಥಳ: ಶ್ರೀ ವೇದಾಂತ ದೇಶಿಕ ಮಂಟಪ, ಹರಿ ವಿದ್ಯಾಲಯ, ಬೋಗಾದಿ, ಸಂಜೆ 4.30ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಉಪನ್ಯಾಸ: ಕೊಳ್ಳೇಗಾಲ ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿ ಮಹದೇವ ಕುಮಾರ್ ಡಿ., ವಿಷಯ: 'ಭಾರತದ ಸಂವಿಧಾನ ಮತ್ತು ಸಮಕಾಲೀನ ಶೈಕ್ಷಣಿಕ ವ್ಯವಸ್ಥೆ', ಅಧ್ಯಕ್ಷತೆ: ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ನಿಲಯ ಪಾಲಕರಾದ ಕಮಲಾಕ್ಷಿ ಹೆಚ್.ಎಂ., ಸ್ಥಳ: ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ, ರಾಮಕೃಷ್ಣನಗರ, ಸಂಜೆ 5.30ಕ್ಕೆ.
- **ಕಾಫಿ ಸಿಟಿ, ನೆರಳು–ಬೆಳಕು ಆರ್ಟ್ ಗ್ಯಾಲರಿ :** ಭೂದೃಶ್ಯ ಪ್ರದರ್ಶನ, ಉದ್ಘಾಟನೆ: ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಜುವಲ್ ಆರ್ಟ್‌ನ ಅನ್ವಯಿಕ ಕಲೆ ವಿಭಾಗದ ಮುಖ್ಯಸ್ಥ ಸಿ. ಚಿಕ್ಕಣ್ಣ, ಜಲವರ್ಣ ಕಲಾವಿದರಾದ ಮೈಸೂರಿನ ಹೆಚ್. ಶಿವಕುಮಾರ್, ಚಾಮರಾಜನಗರದ ಬಿ.ಸಿ. ದೇವರಾಜ್, ಸ್ಥಳ: ಕಾಫಿ ಸಿಟಿ, ವಾಟರ್ ಟ್ಯಾಂಕ್ ಸರ್ಕಲ್, ವಿಜಯನಗರ, ಸಂಜೆ 6.30ಕ್ಕೆ.
- **ಹೆಬ್ಬಾರ್ ಶ್ರೀ ವೈಷ್ಣವ ಸಭಾ, ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಹೆಸರಾಂತ ಉಪನ್ಯಾಸಕರಾದ ವಿದ್ವಾನ್ ಎಂ.ಕೆ. ಶೆಲ್ವ ನಾರಾಯಣ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಕೃಷ್ಣಮೂರ್ತಿಪುರಂ ಶ್ರೀರಾಮ ಮಂದಿರ, ಸಂಜೆ 6.45ರಿಂದ.

ಸಾರ್ವಜನಿಕ ಪ್ರಕಟಣೆ

ಮೈಸೂರು ತಾಲ್ಲೂಕು ದಟ್ಟಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 15/1–2, 18/4, 19/1–2, 20/1–2–3, 27/1–2–3–4, 32, 38/1–2, 40/1–2–3 ಮತ್ತು 41/2ಕ್ಕೆ ಸಂಬಂಧಿಸಿದಂತೆ ದಿನಾಂಕ 30.12.2023ರಂದು ಕೆಲವು ದೈನಂದಿನ ಪತ್ರಿಕೆಗಳಲ್ಲಿ ಬಂದಂತಹ ವರದಿಗೆ ಪ್ರತಿಯಾಗಿ ಚಾಮುಂಡೇಶ್ವರಿ ನಗರ ಸರ್ವೋದಯ ಸಂಘ (ರಿ.) ನಂ.1131/1, ಕೇರ್ ಆಫ್ ಶಾಂತ ಸೋಮಶೇಖರ್, 9ನೇ ಮುಖ್ಯ ರಸ್ತೆ, ಎಸ್‌ಜೆಹೆಚ್ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು–570008, ಇದರ ಸದಸ್ಯರ ಪರವಾಗಿ ಈ ಪತ್ರಿಕಾ ಪ್ರಕಟಣೆಯನ್ನು ಸಾರ್ವಜನಿಕವಾಗಿ ನೀಡಲಾಗುತ್ತಿದೆ.

ಮುಂದುವರೆದು, ಸದರಿ ಮೇಲೆ ನಮೂದಿಸಿರುವ ಸಂಘದ ಸದಸ್ಯರು ನಮ್ಮ ಕಕ್ಷಿದಾರರಾಗಿದ್ದು, ಸದಸ್ಯರುಗಳು ಮಧ್ಯಮ ಮತ್ತು ಕೆಳ ಮಧ್ಯಮ ವರ್ಗಕ್ಕೆ ಸೇರಿದ 65–95 ವರ್ಷದ ವಯೋಮಾನದ ಹಿರಿಯ ನಾಗರಿಕರಾಗಿದ್ದು, ಕಳೆದ 40 ವರ್ಷಗಳಿಂದ ಮೇಲೆ ತಿಳಿಸಿರುವ ಸರ್ವೆ ನಂಬರ್‌ಗಳಲ್ಲಿ ನಿವೇಶನ ಪಡೆಯುವ ಸಂಬಂಧ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದಿರುತ್ತಾರೆ. ಸದರಿ ಸರ್ವೆ ನಂಬರ್‌ಗಳಲ್ಲಿ ನಿರ್ಮಿಸಿದ್ದ ಬಡಾವಣೆಯಲ್ಲಿ ನಿವೇಶನ ಪಡೆದು ನೆಮ್ಮದಿಯ ಬದುಕು ಕಟ್ಟಿಕೊಳ್ಳುವ ಹೊತ್ತಿನಲ್ಲಿ, ವಿಶ್ವಮಾನವ ಜೋಡಿ ರಸ್ತೆಯನ್ನು ನಿರ್ಮಿಸುವ ಸಲುವಾಗಿ ಸರ್ಕಾರಿ ಅಧಿಕಾರಿಗಳು / ಇಲಾಖೆಯವರು ಸದರಿ ಜಾಗದಲ್ಲಿ ಜಂಟಿ ಮಹಜರ್ ನಡೆಸಿ, ನಮ್ಮ ಕಕ್ಷಿದಾರರನ್ನು ಸ್ವಯಂ ನಿವೇಶನಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ಕೋರಿರುತ್ತಾರೆ. ಅಲ್ಲದೇ, ಅದೇ ಜಾಗದಲ್ಲಿ ಬದಲಿ ನಿವೇಶನವನ್ನು ನೀಡುವ ಭರವಸೆಯನ್ನೂ ನಮ್ಮ ಕಕ್ಷಿದಾರರಿಗೆ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ, ಸರ್ಕಾರಿ ಅಧಿಕಾರಿಗಳ / ಇಲಾಖೆಯವರ ಭರವಸೆಯನ್ವಯ ನಮ್ಮ ಕಕ್ಷಿದಾರರು ನಿವೇಶನಗಳನ್ನು ತಮ್ಮ–ತಮ್ಮ ನಿವೇಶನಗಳನ್ನು ವಿಶ್ವಮಾನವ ಜೋಡಿ ರಸ್ತೆ ನಿರ್ಮಾಣ ಕಾರ್ಯಕ್ಕಾಗಿ ನಿವೇಶನಗಳನ್ನು ಬಿಟ್ಟುಕೊಟ್ಟಿರುತ್ತಾರೆ.

ಸರ್ಕಾರದ ವಿವಿಧ ಅಧಿಕಾರಿಗಳು / ಇಲಾಖೆಯವರ ನೀಡುವ ಭರವಸೆಯನ್ವಯ ತಮಗೆ ಅದೇ ಜಾಗದಲ್ಲಿ ಬದಲಿ ನಿವೇಶನ ದೊರೆಯುತ್ತದೆ ಎಂಬ ಅಚಲವಾದ ನಂಬಿಕೆಯಲ್ಲಿ ನಮ್ಮ ಕಕ್ಷಿದಾರ ಸದಸ್ಯರುಗಳಿರುತ್ತಾರೆ.

ಮುಂದುವರೆದು, ನಮ್ಮ ಕಕ್ಷಿದಾರರು ವಿವಿಧ ನ್ಯಾಯಾಲಯಗಳಲ್ಲಿ ಹೂಡಲ್ಪಟ್ಟಂತಹ ಪ್ರಕರಣಗಳಲ್ಲಿನ ಅರ್ಜಿದಾರರಾಗಿದ್ದು, ಮೇಲೆ ತಿಳಿಸಿರುವ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ಸತ್ಯಕ್ಕೆ ದೂರವಾದ ವರದಿಯಿಂದ ಅನಗತ್ಯ ಗೊಂದಲಕ್ಕೆ ಈಡಾಗಬಾರದೆಂಬ ಉದ್ದೇಶದಿಂದ ನಮ್ಮ ಕಕ್ಷಿದಾರರ ಸೂಚನೆಯನ್ವಯ ಸಾರ್ವಜನಿಕರಿಗೆ ಈ ಮೂಲಕ ತಿಳಿಸಲು ಇಚ್ಛಿಸುವುದೇನೆಂದರೆ, ಸದರಿ ಜಾಗಕ್ಕೆ ಯಾವುದೇ ಸಂಬಂಧವಿಲ್ಲದೇ ಇದ್ದರೂ ಸಹ, ಶ್ರೀ ವೀರ್ ಕುಮಾರ್ ಜೈನ್, ಬಿನ್ ಲೇಟ್ ಶ್ರೀ ಬಿ. ಸಿ. ಜೈನ್, ವಯಸ್ಸು ಸುಮಾರು 72 ವರ್ಷ, ಕೇರ್ ಆಫ್ ಎಎಸ್‌ಡಬ್ಲ್ಯೂಎಂಎಲ್, ಸಿದ್ಧಲಿಂಗಪುರ ಪೋಸ್ಟ್, ಬಿ.ಎಂ. ರಸ್ತೆ, ಮೈಸೂರು, ಇವರ ಪವರ್ ಆಫ್ ಅಟಾರ್ನಿಯಾಗಿರುವ ಶ್ರೀ ಆರ್. ಯತೀಶ್ ಚಂದ್ರ, ಬಿನ್ ಪಿ. ರಾಮಾನುಜ, ವಯಸ್ಸು ಸುಮಾರು 54 ವರ್ಷ, ನಂ. 23, 6ನೇ ಅಡ್ಡರಸ್ತೆ, ಶಿವಾಜಿ ರಸ್ತೆ, ಎನ್ ಆರ್ ಮೊಹಲ್ಲಾ, ಮೈಸೂರು – 570 007, ಇವರ ಪರವಾಗಿ ನಿಲ್ಲುವ ಸಲುವಾಗಿ, ಸದರಿ ಜಾಗಕ್ಕೆ ಸಂಬಂಧವೇ ಇಲ್ಲದ ಜವಾಬ್ದಾರಿಯುತ ಸ್ಥಾನದಲ್ಲಿರುವ ಕೆಲವು ಜನಪ್ರತಿನಿಧಿಗಳು ಕಾನೂನುಬಾಹಿರವಾಗಿ ಮಾಲೀಕತ್ವವನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಇಲ್ಲ–ಸಲ್ಲದ ಆರೋಪಗಳನ್ನು ಮಾಡುತ್ತಿರುತ್ತಾರೆ.

ನಮ್ಮ ಕಕ್ಷಿದಾರರು ಸಾರ್ವಜನಿಕವಾಗಿ ತಿಳಿಸುವುದೇನೆಂದರೆ, ಸದರಿ ಜಾಗವು ಡಿನೋಟಿಫೈ ಆದ ನಂತರದಲ್ಲಿ ಭೂ ಮಾಲೀಕರಿಂದ ಶ್ರೀ ವೀರ್ ಕುಮಾರ್ ಜೈನ್‌ರವರು ಜಾಗವನ್ನು ಖರೀದಿಸಿರುತ್ತಾರೆ. ಆದಾಗಿ, ಮೇಲೆ ನಮೂದಿಸಿರುವ ಜಾಗವು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ, ಸದರಿ ಡಿನೋಟಿಫಿಕೇಷನ್ ಸ್ಥಗಿತಗೊಂಡಿತು. ಮುಂದುವರೆದು, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸ್ವಾಧೀನ ಪ್ರಕ್ರಿಯೆಯನ್ನು ಪ್ರಶ್ನಿಸಿ, ಶ್ರೀ ವೀರ್ ಕುಮಾರ್ ಜೈನ್‌ರವರು ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 32714/2010 ಮತ್ತು ರಿಟ್ ಅರ್ಜಿ ಸಂಖ್ಯೆ 32792/2010 ಅನ್ನು ದಾಖಲಿಸಿರುತ್ತಾರೆ. ಆದಾಗಿ, ಸದರಿ ಪ್ರಕರಣವನ್ನು ಘನ ಉಚ್ಚ ನ್ಯಾಯಾಲಯವು ವಜಾಗೊಳಿಸಿತು. ನಂತರ, ಸದರಿ ಶ್ರೀ ವೀರ್ ಕುಮಾರ್ ಜೈನ್‌ರವರು ಘನ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಅರ್ಜಿ ಸಂಖ್ಯೆ 437/2014 ಅನ್ನು ದಾಖಲಿಸಿರುತ್ತಾರೆ.

ಮುಂದುವರೆದು, ನಮ್ಮ ಕಕ್ಷಿದಾರರಾದ ಸದಸ್ಯರುಗಳಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 25.10.2014 ಮತ್ತು 21.01.2015ರಂದು ನೀಡಿರುವ ಹಿಂಬರಹವನ್ನು ಪ್ರಶ್ನಿಸಿ, ಕಕ್ಷಿದಾರ ಸದಸ್ಯರುಗಳು ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 51523–662/2015 ಅನ್ನು ದಾಖಲಿಸಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ದಿನಾಂಕ 27.11.2014ರಂದು ಕಕ್ಷಿದಾರ ಸದಸ್ಯರುಗಳು ಸಲ್ಲಿಸಿರುವ ಮನವಿ ಪತ್ರವನ್ನು ಪರಿಗಣಿಸಿ, ಸದರಿ ಮೈಸೂರು ತಾಲ್ಲೂಕು, ದಟ್ಟಗಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 15/1–2, 18/4, 19/1–2, 20/1–2–3, 27/1–2–3–4, 32, 38/1–2, 40/1–2–3 ಮತ್ತು 41/2ಕ್ಕೆ ಸೇರಿದ ಚಾಮುಂಡೇಶ್ವರಿ ನಗರ ಬಡಾವಣೆಯ ಜಾಗದಲ್ಲಿ ನಿವೇಶನಗಳನ್ನು ಮಂಜೂರು ಮಾಡಿ ಕಾನೂನಾತ್ಮಕವಾಗಿ ನೀಡಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಘನ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠವು ಸದರಿ ಕೋರಿಕೆ ಅರ್ಜಿಯನ್ನು ಆಲಿಸುವ ಸಂದರ್ಭದಲ್ಲಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಸದರಿ ಜಾಗದಲ್ಲಿ ನಮ್ಮ ಕಕ್ಷಿದಾರ ಸದಸ್ಯರುಗಳಿಗೆ ಸೂಕ್ತ ದರವನ್ನು ನಿಗದಿ ಪಡಿಸಿ, ಹಣವನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು ನಿವೇಶನಗಳನ್ನು ನೀಡಬಹುದೆಂದು ಪಡೆದಂತಹ ಕಾನೂನು ಸಲಹೆಯ ಆಧಾರದ ಮೇಲೆ ನಕ್ಷೆಯನ್ನು ತಯಾರಿಸಿ ದಿನಾಂಕ 22.02.1997ರಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಕಾರ್ಯದರ್ಶಿಯವರಿಗೆ, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿರುವ ಪತ್ರವನ್ನು ಮಂಡಿಸಿರುತ್ತಾರೆ.

ಅದೇ ರೀತಿ, ಸದರಿ ಪ್ರಕರಣವನ್ನು ಏಕ ಸದಸ್ಯ ಪೀಠವು ವಿಚಾರಣೆ ನಡೆಸುವ ಸಂದರ್ಭದಲ್ಲಿ, ಶ್ರೀ ವೀರ್ ಕುಮಾರ್ ಜೈನ್‌ರವರು ಸದರಿ ಜಾಗದ ಮೇಲೆ ಮಾಲೀಕತ್ವವನ್ನು ಪಡೆಯುವ ಸಂಬಂಧ ಹೂಡಿದ್ದ ರಿಟ್ ಅರ್ಜಿ ಸಂಖ್ಯೆ 32174/2010 ಹಾಗೂ ಸದರಿ ಪ್ರಕರಣದಲ್ಲಿ ಬಂದಂತಹ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಅರ್ಜಿ 437/2014 ಅನ್ನು ಹೂಡಿದ್ದು, ಸದರಿ ಮೇಲ್ಮನವಿಯು ಇನ್ನು ವಿಚಾರಣಾ ಹಂತದಲ್ಲಿರುತ್ತದೆ ಎಂಬ ವಿಷಯವನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಘನ ಉಚ್ಚ ನ್ಯಾಯಾಲಯದ ಸಮ್ಮುಖಕ್ಕೆ ಮಂಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ಘನ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದಲ್ಲಿ ಮೇಲ್ಮನವಿ ಅರ್ಜಿ 437/2014 ವಿಚಾರಣೆಯಲ್ಲಿದ್ದು, ಸದರಿ ಜಾಗದ ಕುರಿತು ಮಾಲೀಕತ್ವದ ಬಗ್ಗೆ ಇನ್ನೂ ತೀರ್ಮಾನವಾಗದ ಹಿನ್ನೆಲೆಯಲ್ಲಿ, ನಮ್ಮ ಕಕ್ಷಿದಾರ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಚಿಸಿ ಆದೇಶ ಹೊರಡಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ, ದಿನಾಂಕ 06.12.2016ರಂದು ಘನ ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠವು ನಮ್ಮ ಕಕ್ಷಿದಾರ ಸದಸ್ಯರುಗಳು ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ 51523–662/2015 ಅನ್ನು ವಜಾಗೊಳಿಸಿರುತ್ತದೆ.

ಮುಂದುವರೆದು, ರಿಟ್ ಅರ್ಜಿ ಸಂಖ್ಯೆ 51523–662/2015 ದಿನಾಂಕ 06.12.2016ರ ಆದೇಶವನ್ನು ಪ್ರಶ್ನಿಸಿ, ನಮ್ಮ ಕಕ್ಷಿದಾರ ಅರ್ಜಿದಾರರು ಘನ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಅರ್ಜಿ ಸಂಖ್ಯೆ 568/2017 ಅನ್ನು ದಾಖಲಿಸಿರುತ್ತದೆ. ಆದಾಗಿ, ಸದರಿ ಜಾಗದ ಕುರಿತು ಘನ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠದಲ್ಲಿ ಮೇಲ್ಮನವಿ ಅರ್ಜಿ ಸಂಖ್ಯೆ 437/2014 ವಿಚಾರಣೆ ಹಂತದಲ್ಲಿರುವುದನ್ನು ಪರಿಗಣಿಸಿ, ನಮ್ಮ ಕಕ್ಷಿದಾರ ಅರ್ಜಿದಾರರು ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ಸಂಖ್ಯೆ 568/2017 ಅನ್ನು ದಿನಾಂಕ 27.02.2023ರಂದು ಘನ ಉಚ್ಚ ನ್ಯಾಯಾಲಯವು ವಜಾಗೊಳಿಸಿರುತ್ತದೆ. ಆದಾಗಿ, ಅದೇ ದಿನ ಅಂದರೆ ದಿನಾಂಕ 27.02.2023 ರಂದು ಘನ ಉಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠ ಶ್ರೀ ವೀರ್ ಕುಮಾರ್ ಜೈನ್ ರವರು ಸಲ್ಲಿಸಿದ್ದಂತಹ ಮೇಲ್ಮನವಿ ಅರ್ಜಿ ಸಂಖ್ಯೆ 437/2014 ಅನ್ನು ವಜಾಗೊಳಿಸಿರುವ ವಿಷಯವನ್ನು ಸದರಿ ಘನ ಉಚ್ಚ ನ್ಯಾಯಾಲಯದ ಮುಂದೆ ನಮ್ಮ ಕಕ್ಷಿದಾರ ಅರ್ಜಿದಾರರು ಮಂಡಿಸಿರುತ್ತಾರೆ.

ಮೇಲ್ಮನವಿ ಅರ್ಜಿ ಸಂಖ್ಯೆ 437/2014ರ ಪ್ರಕರಣವು ವಜಾಗೊಂಡ ಹಿನ್ನೆಲೆಯಲ್ಲಿ, ನಮ್ಮ ಕಕ್ಷಿದಾರ ಅರ್ಜಿದಾರರು ಸದರಿ ಮೇಲೆ ನಮೂದಿಸಿರುವ ಜಾಗದಲ್ಲಿ ನಿವೇಶನ ಹಂಚಿಕೆ ಸಂಬಂಧ ಸೂಕ್ತ ದರವನ್ನು ನಿಗದಿಪಡಿಸಿ, ಪ್ರಾಧಿಕಾರಕ್ಕೆ ಪಾವತಿಸಿಕೊಂಡು, ನಿವೇಶನಗಳನ್ನು ಹಂಚಿಕೆ ಮಾಡಿ ಕಾನೂನಾತ್ಮಕವಾಗಿ ಹಸ್ತಾಂತರ ಮಾಡಬೇಕೆಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸವಿಸ್ತಾರವಗಿ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ. ಅದೇ ರೀತಿ, ನಮ್ಮ ಕಕ್ಷಿದಾರ ಅರ್ಜಿದಾರರಲ್ಲಿ ಕೆಲವರು ಘನ ಉಚ್ಚ ನ್ಯಾಯಾಲಯದಲ್ಲಿ ಮರುಪರಿಶೀಲನಾ ಅರ್ಜಿ ಸಂಖ್ಯೆ 135/2023 ಅನ್ನು ದಾಖಲಿಸಿ, ಮೇಲ್ಮನವಿ ಅರ್ಜಿ ಸಂಖ್ಯೆ 5681/2017 ದಿನಾಂಕ 27.02.2023ರ ಆದೇಶವನ್ನು ಮರಿಪರಿಶೀಲಿಸಬೇಕಾಗಿ ಕೋರಿರುತ್ತಾರೆ.

ಮುಂದುವರೆದು, ಘನ ಉಚ್ಚ ನ್ಯಾಯಾಲಯವು ಸದರಿ ಜಾಗಕ್ಕೆ ಸಂಬಂಧಿಸಿದಂತೆ ಮೈಸೂರು ಅಭಿವೃದ್ಧಿ ಪ್ರಾಧಿಕಾರವು ರಿಟ್ ಅರ್ಜಿ ಸಂಖ್ಯೆ 51523/2015ರಲ್ಲಿನ ಅರ್ಜಿದಾರರಿಗೆ ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳುವ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿ, ಸದರಿ ಸೂಚನೆಯನ್ವಯ ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ ನಆಇ 113 ಭೂಬದಿ 97 ಬೆಂಗಳೂರು ದಿನಾಂಕ 11.07.1997 ಹಾಗೂ ಪ್ರಾಧಿಕಾರ ಸಭೆ ದಿನಾಂಕ 21.03.2023ರ ನಡುವಳಿಗಳನ್ವಯ 8 ವಾರದ ಒಳಗಾಗಿ ನಮ್ಮ ಕಕ್ಷಿದಾರ ಅರ್ಜಿದಾರರಿಗೆ ನಿವೇಶನ ಹಂಚಿಕೆ ಸಂಬಂಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಘನ ಉಚ್ಚ ನ್ಯಾಯಾಲಯದ ಮುಂದೆ ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಒಪ್ಪಿದ ಹಿನ್ನೆಲೆಯಲ್ಲಿ, ಸದರಿ ಮರುಪರಿಶೀಲನಾ ಅರ್ಜಿ ಸಂಖ್ಯೆ 135/2023 ಅನ್ನು ಘನ ಉಚ್ಚ ನ್ಯಾಯಾಲಯವು ಇತ್ಯರ್ಥಗೊಳಿಸಿರುತ್ತದೆ.

ಮುಂದುವರೆದು, ಮರುಪರಿಶೀಲನಾ ಅರ್ಜಿ ಸಂಖ್ಯೆ 135/2023 ರಲ್ಲಿ ಪ್ರತಿವಾದಿಯಾಗಿದ್ದಂತಹ ಶ್ರೀ ವೀರ್ ಕುಮಾರ್ ಜೈನ್‌ರವರು ಸದರಿ ಮರುಪರಿಶೀಲನಾ ಅರ್ಜಿಯನ್ನು ಪ್ರಶ್ನಿಸಿ, ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಸ್ಪೆಷಲ್ ಲೀವ್ ಪಿಟೀಷನ್ (ಸಿ) ಸಂಖ್ಯೆ 14868/2023 ಅನ್ನು ದಾಖಲಿಸಿರುತ್ತಾರೆ. ಸದರಿ ಸ್ಪೆಷಲ್ ಲೀವ್ ಪಿಟೀಷನ್ ಅನ್ನು ಘನ ಸರ್ವೋಚ್ಚ ನ್ಯಾಯಾಲಯವು ಅರ್ಜಿದಾರರಾದ ಶ್ರೀ ವೀರ್ ಕುಮಾರ್ ಜೈನ್‌ರವರಿಗೆ ಜುಲ್ಮಾನೆ (ದಂಡ) ವಿಧಿಸಿ ವಜಾಗೊಳಿಸಿರುತ್ತದೆ. ಅದೇ ರೀತಿ, ಶ್ರೀ ವೀರ್ ಕುಮಾರ್ ಜೈನ್‌ರವರು ಮೇಲ್ಮನವಿ ಅರ್ಜಿ ಸಂಖ್ಯೆ 437/2014ರ ಆದೇಶವನ್ನು ಪ್ರಶ್ನಿಸುವ ಬದಲಾಗಿ, ನಮ್ಮ ಕಕ್ಷಿದಾರ ಅರ್ಜಿದಾರರು ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿ ಸಂಖ್ಯೆ 135/2023 ಅನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದು, ಈ ಮೂಲಕ ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಮಾಡಿರುವ ಭೂ ಸ್ವಾಧೀನ ಪ್ರಕ್ರಿಯೆಯು ಅಂತಿಮಗೊಂಡಿದ್ದು, ಸದರಿ ಜಾಗವು ಪ್ರಾಧಿಕಾರದ ಸ್ವತ್ತಾಗಿರುತ್ತದೆ ಎಂಬುದನ್ನು ಸಾಬೀತಾಗಿರುತ್ತದೆ.

ಮುಂದುವರೆದು, ನಮ್ಮ ಕಕ್ಷಿದಾರ ಅರ್ಜಿದಾರರು ಸಾರ್ವಜನಿಕವಾಗಿ ತಿಳಿಸುವುದೇನೆಂದರೆ, ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಮರುಪರಿಶೀಲನಾ ಅರ್ಜಿ ಸಂಖ್ಯೆ 135/2023ರ ಆದೇಶದ ನಿರ್ದೇಶನಗಳಂತೆ ಕ್ರಮ ಕೈಗೊಂಡಿದ್ದು, ಸದರಿ ಜಾಗಕ್ಕೆ ಸೂಕ್ತ ದರವನ್ನು ನಿಗದಿಪಡಿಸಿ, ಹಣವನ್ನು ಪ್ರಾಧಿಕಾರಕ್ಕೆ ಪಾವತಿಸಿಕೊಂಡು, ನಿವೇಶನಗಳನ್ನು ನಮ್ಮ ಕಕ್ಷಿದಾರ ಅರ್ಜಿದಾರರಿಗೆ ಹಂಚಿಕೆ ಮಾಡಿರುತ್ತದೆಯೇ ವಿನಃ ಯಾವುದೇ ಮೂರನೇ ವ್ಯಕ್ತಿಗಳಿಗೆ ಹಂಚಿಕೆ ಮಾಡಿರುವುದಿಲ್ಲ ಎಂಬ ವಿಷಯವನ್ನು ಸಾರ್ವಜನಿಕವಾಗಿ ನಮ್ಮ ಕಕ್ಷಿದಾರ ಅರ್ಜಿದಾರು ತಿಳಿಸಲು ಇಚ್ಛಿಸುತ್ತಾರೆ.

ಮುಂದುವರೆದು, ನಮ್ಮ ಕಕ್ಷಿದಾರ ಅರ್ಜಿದಾರರು ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ಸಂಖ್ಯೆ 870/2023 ಅನ್ನು ದಾಖಲಿಸಿ, ಸದರಿ ಜಾಗಕ್ಕೆ ಸಂಬಂಧಿಸಿದಂತೆ ಯಾವುದೇ ಮಾಧ್ಯಮಗಳಲ್ಲಿ, ದಿನಪತ್ರಿಕೆಗಳಲ್ಲಾಗಲೀ, ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಾಗಲೀ ಸುದ್ದಿಯನ್ನು ಭಿತ್ತಿರಿಸುವಂತಿಲ್ಲ ಎಂಬ ಆದೇಶವನ್ನು ಪಡೆದಿದ್ದು, ಸದರಿ ಆದೇಶವನ್ನು ಧಿಕ್ಕರಿಸಿ, ದಿನಾಂಕ 30.12.2023ರಂದು ಕೆಲವು ದೈನಂದಿನ ಪತ್ರಿಕೆಯಲ್ಲಿ ಸದರಿ ವಿಷಯದ ಕುರಿತು ಸಂಪೂರ್ಣ ಮಾಹಿತಿ ಪಡೆಯದೇ ಇಲ್ಲ–ಸಲ್ಲದ, ಸತ್ಯಕ್ಕೆ ದೂರವಾದ ಮಾಹಿತಿಗಳನ್ನೊಳಗೊಂಡ ವರದಿಯನ್ನು ಪ್ರಕಟಿಸಿರುವುದು ಕಾನೂನು ಉಲ್ಲಂಘನೆ ಆಗಿರುತ್ತದೆ. ಈ ಕುರಿತು ನಮ್ಮ ಕಕ್ಷಿದಾರ ಅರ್ಜಿದಾರರು ಕಾನೂನು ರೀತಿಯಲ್ಲಿ ಮುಂದಿನ ಕ್ರಮ ಕೈಗೊಳ್ಳುತ್ತಾರೆ ಎಂಬ ವಿಷಯವನ್ನು ತಿಳಿಸಲು ಇಚ್ಛಿಸುತ್ತೇವೆ.

ಮುಂದುವರೆದು, ನಮ್ಮ ಕಕ್ಷಿದಾರ ಅರ್ಜಿದಾರರು ಸೂಚಿಸಿರುವ ರೀತ್ಯ, ಸದರಿ ಮೇಲೆ ತಿಳಿಸಿರುವ ಸರ್ವೆ ನಂಬರ್‌ಗಳಲ್ಲಿನ ಜಾಗವು ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸುಪರ್ದಿಯಲ್ಲಿರುವ ಆಸ್ತಿಯಾಗಿದ್ದು, ಇದು ಸದರಿ ಹಂಚಿಕೆಯು ಘನ ಉಚ್ಚ ನ್ಯಾಯಾಲಯದ ಮರುಪರಿಶೀಲನಾ ಅರ್ಜಿ ಸಂಖ್ಯೆ 135/2023ರ ಆದೇಶದಂತೆ ಹಾಗೂ ಪ್ರಾಧಿಕಾರದ ಸಭೆ ದಿನಾಂಕ 21.03.2023ರ ನಿರ್ಣಯದಂತೆ, ಮರುಪರಿಶೀಲನಾ ಅರ್ಜಿಯಲ್ಲಿರುವ ಅರ್ಜಿದಾರರಿಗೆ ಹಂಚಿಕೆ ಮಾಡುತ್ತಿರುತ್ತದೆ.

ಮುಂದುವರೆದು, ಸದರಿ ಜಾಗಕ್ಕೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರ ಅರ್ಜಿದಾರರು ಮರುಪರಿಶೀಲನಾ ಅರ್ಜಿ ಸಂಖ್ಯೆ 135/2023ರ ಆದೇಶವನ್ನು ಪಾಲಿಸುತ್ತಿಲ್ಲವೆಂದು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಇವರ ವಿರುದ್ಧ ನ್ಯಾಯಾಲಯ ನಿಂದನಾ ಪ್ರಕರಣ ಸಂಖ್ಯೆ 655/2023 ಅನ್ನು ದಾಖಲಿಸಿರುತ್ತದೆ. ಸದರಿ ಪ್ರಕರಣವನ್ನು ಘನ ಉಚ್ಚ ನ್ಯಾಯಾಲಯವು ವಿಚಾರಣೆ ನಡೆಸಿ, ದಿನಾಂಕ 21.12.2023ರಂದು ನಾಲ್ಕರಿಂದ ಐದು (4–5) ವಾರಗಳ ಒಳಗಾಗಿ ಕಕ್ಷಿದಾರ ಅರ್ಜಿದಾರರಿಗೆ ಕ್ರಯಪತ್ರ ಮತ್ತು ಇತರೆ ಪೂರಕ ದಾಖಲಾತಿಗಳನ್ನು ಮಾಡಿಕೊಡಬೇಕೆಂದು ಮತ್ತು ಭೌತಿಕವಾಗಿ ನಿವೇಶನವನ್ನು ಹಸ್ತಾಂತರಿಸಬೇಕೆಂದು ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಆದೇಶವಿತ್ತಿರುತ್ತದೆ.

ಅಂತಿಮವಾಗಿ ನಮ್ಮ ಕಕ್ಷಿದಾರ ಅರ್ಜಿದಾರರು ಸಾರ್ವಜನಿಕರಿಗೆ ಹಾಗೂ ಕೆಲವು ಜನಪ್ರತಿನಿಧಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಸದರಿ ವಿಷಯದ ಕುರಿತು ಪೂರ್ಣ ಮಾಹಿತಿಯನ್ನು ಪಡೆಯದೇ, ಇಲ್ಲ–ಸಲ್ಲದ, ಸತ್ಯಕ್ಕೆ ದೂರವಾದ ಆರೋಪಗಳನ್ನು ಮಾಡುತ್ತಾ, ಜನರಲ್ಲಿ ಗೊಂದಲ ಸೃಷ್ಟಿಸಬಾರದೆಂದು ಕಳಕಳಿಯ ಪ್ರಾರ್ಥನೆ. ಆದಾಗಿ, ಸದರಿ ಜಾಗದ ಕುರಿತು ಯಾವುದೇ ವ್ಯಕ್ತಿಗಳಿಗೆ ಮಾಲೀಕತ್ವದ ಬಗ್ಗೆ ತಕರಾರುಗಳಿದ್ದಲ್ಲಿ, ಪತ್ರಿಕೆ, ಸೋಷಿಯಲ್ ಮೀಡಿಯಾ, ಎಲೆಕ್ಟ್ರಾನಿಕ್ ಮೀಡಿಯಾಗಳಲ್ಲಿ ಸತ್ಯಕ್ಕೆ ದೂರವಾದ ಮಾಹಿತಿಗಳನ್ನು ನೀಡಿ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಸುವ ಬದಲಾಗಿ, ಕಾನೂನು ಮೊರೆ ಹೋಗಬಹುದಾಗಿರುತ್ತದೆ. ಮುಂದುವರೆದು, ಒಂದು ವೇಳೆ ಮುಂದಿನ ದಿನಗಳಲ್ಲಿ ಇದೇ ರೀತಿ ಮುಂದುವರೆದ್ದಲ್ಲಿ, ಕಾನೂನು ಉಲ್ಲಂಘನೆ ಮಾಡಿದ್ದಲ್ಲಿ, ನಮ್ಮ ಕಕ್ಷಿದಾರ ಅರ್ಜಿದಾರರು ನ್ಯಾಯಾಲಯ ನಿಂದನಾ ಪ್ರಕರಣವನ್ನು ದಾಖಲಿಸಿ ಸೂಕ್ತ ರೀತಿಯಲ್ಲಿ ಕ್ರಮ ಜರುಗಿಸಲು ಬದ್ಧರಾಗಿರುತ್ತಾರೆ.

ಎಂ. ಎಸ್. ವಿಜಯಸಾರಥಿ, ವಕೀಲರು ಮೆ॥ ಲೆಕ್ಸ್ ನೆಕ್ಸಸ್
'ಗಿರಿಯಮ್ಮ', ನಂ.405, 7ನೇ ಮುಖ್ಯ, 2ನೇ ಹಂತ, ಎ ಬ್ಲಾಕ್, ಮಲ್ಲೇಶ್ವರಂ ವೆಸ್ಟ್ ಪೋಸ್ಟ್, ಬೆಂಗಳೂರು – 560055 ಕರ್ನಾಟಕ, ಭಾರತ
ದೂರವಾಣಿ: 91–80–23474616. ಮೊಬೈಲ್ +91 9845381000. ಇ–ಮೇಲ್: **vijayasar144@yahoo.com.** ಸ್ಥಳ: ಮೈಸೂರು, ದಿನಾಂಕ: 31.12.2023

ನಕ್ಕರೆ ಅದೇ ಸ್ವರ್ಗ

ಗುಂಡ : ಹೆಂಡತಿನ ಎಷ್ಟು ಚಂದ ನೋಡ್ಕಬೇಕ ಅಂದ್ರ ಅವರ ಅಪ್ಪ–ಅವ್ವ ಅನಬೇಕ?
ತಿಮ್ಮ : ಏನಂತ?
ಗುಂಡ : ನಮ್ಮ ಎರಡನೇ ಮಗಳನ್ನು ಇವನಿಗೆ ಕೊಟ್ಟು ಮದುವಿ ಮಾಡಬೇಕಂತ !

ಮೈಸೂರು ಮಿತ್ರ
ಸೋಮವಾರ, 1 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನಮ್ಮ ನಮ್ಮ ಮನಸ್ಸೆ ನಮಗೆ ದೇವರು, ಇನ್ನ್ಯಾವ್ದೂ ಅಲ್ಲ, ಇನ್ನ್ಯಾರೂ ಅಲ್ಲ...
– ಕುವೆಂಪು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಗಣಿಯುವನ ಸ್ನೇಹಕ್ಕಿಂತ ಗಂಧದವನ ಜೊತೆ ಗುದ್ದಾಟ ಮೇಲು

ನಿಮ್ಮ ಪತ್ರಗಳು

ಸರ್ಕಾರದ ನಡೆಯಿಂದ ಗತಿಸುತ್ತಿರುವ ಕಾಲೇಜು ಶಿಕ್ಷಣ

ಮಾನ್ಯರೆ,

ಅತಿಥಿ ಉಪನ್ಯಾಸಕರ ಪ್ರತಿಭಟನೆ ಆರಂಭವಾಗಿ ಸರಿಯಾಗಿ ಒಂದು ತಿಂಗಳ ನಂತರ ಉನ್ನತ ಶಿಕ್ಷಣ ಸಚಿವರು ಸಭೆ ನಡೆಸಿ ಅವರ ಬೇಡಿಕೆಗಳಲ್ಲಿ ಕೆಲವನ್ನು ಈಡೇರಿಸಿದಂತೆ ಮಾಡಿ ನಂತರ ಅವರು ಮುಷ್ಕರ ಕೈ ಬಿಡದಿದ್ದರೆ ಪರ್ಯಾಯ ವ್ಯವಸ್ಥೆ ಮಾಡುವ ಧಮ್ಕಿ ಹಾಕಿದ್ದಾರೆ. ಒಟ್ಟಾರೆ ತಿಪ್ಪೆ ಸಾರಿಸುವ ಕೆಲಸ ಮಾಡಿದ್ದಾರೆ. ಈ ಯಾವುದೇ ಕ್ರಮಗಳು ಕಾಲೇಜು ಶಿಕ್ಷಣವನ್ನು ಸುಧಾರಿಸುವಲ್ಲಿ ವಿಫಲವಾಗಿದೆ. ಸರ್ಕಾರ ಇನ್ನಷ್ಟು ಜವಾಬ್ದಾರಿ ಮತ್ತು ನಾಗರಿಕವಾಗಿ ನಡೆದುಕೊಳ್ಳಬೇಕಿದೆ.

ಮುಖ್ಯವಾಗಿ ಗ್ರಾಮೀಣ ಪ್ರದೇಶದ ಒಬಿಸಿ ಮತ್ತು ದಲಿತ ಸಮುದಾಯಗಳಿಗೆ ಸೇರಿದ ಅಷ್ಟೇನೂ ಆರ್ಥಿಕವಾಗಿ ಅನುಕೂಲವಿಲ್ಲದ ಕುಟುಂಬಗಳ ಮಕ್ಕಳೇ ಸರ್ಕಾರಿ ಕಾಲೇಜಿನ ಶಿಕ್ಷಣ ಅವಲಂಬಿಸಿದ್ದಾರೆ. ರಾಜ್ಯ ಸರ್ಕಾರ ಬಿಜೆಪಿಯ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿರೋಧಿಸುತ್ತಾ ತಾನು ಕಾಲೇಜುಗಳ ಬಗ್ಗೆ ಸರಿಯಾದ ಅಗತ್ಯವಾದ ಕ್ರಮ ಕೈಗೊಳ್ಳುತ್ತಿಲ್ಲ ಎಂಬುದು ಅದರ ನಡೆ ನೀತಿಗಳಿಂದ ತಿಳಿಯುತ್ತಿದೆ. ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳಾದ ಸುಭದ್ರ ಕಟ್ಟಡ, ಹೆಣ್ಣುಮಕ್ಕಳಿಗೆ ವಿಶ್ರಾಂತಿ ಮತ್ತು ಶೌಚಾಲಯ, ಪ್ರತಿ ಕಾಲೇಜಿನಲ್ಲಿ ಇಂದಿರಾ ಕ್ಯಾಂಟೀನ್ ಆರಂಭಿಸಿ ಕಾಲೇಜು ಶಿಕ್ಷಣಕ್ಕೆ ಬಲ ತುಂಬಬೇಕು.

ಯುಜಿಸಿ ನಿಯಮದಂತೆ ಪ್ರಥಮ ದರ್ಜೆ ಕಾಲೇಜು ಉಪನ್ಯಾಸಕರಿಗೆ ಪೂರ್ತಿ ಗೌರವಧನ ಕೊಡಬೇಕು. ಇದರಿಂದ ಮಾತ್ರ ಅವರು ಗೌರವಯುತ ಜೀವನ ಮತ್ತು ಪಾಠ ಪ್ರವಚನಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯ.ಉಪನ್ಯಾಸಕರ ಅಗತ್ಯ ಪರೀಕ್ಷೆ ಮತ್ತು ಮೌಲ್ಯ ಮಾಪನಕ್ಕೆ ಅನಿವಾರ್ಯ. ಅದಕ್ಕಾಗಿ ಹತ್ತು ತಿಂಗಳ ಸೇವೆಯ ಚೌಕಾಶಿ ಬುದ್ಧಿ ತೋರಬಾರದು.ಇವನ್ನೆಲ್ಲ ಕೊರತೆಯಿಲ್ಲದೆ ನಿರ್ವಹಿಸಿದರೆ ಮಾತ್ರ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ತನ್ನ ಬದ್ಧತೆ ತೋರಿದಂತಾಗುತ್ತದೆ.

– ಉಗ್ರನರಸಿಂಹೇಗೌಡ, ಸರ್ವೋದಯ ಕರ್ನಾಟಕ, ಮೈಸೂರು ಘಟಕ ಅಧ್ಯಕ್ಷ

ಮನೆ ಮುಂದೆ ಹರಿಯುತ್ತಿದೆ ಕಲುಷಿತ ನೀರು



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರದ ರಾಷ್ಟ್ರೀಯ ಹೆದ್ದಾರಿ ಬಳಿ ಮೈಸೂರಿಗೆ ಹೋಗುವ ಮಾರ್ಗದ ಬಲಭಾಗದಲ್ಲಿ ಹಲವು ವಾಸದ ಮನೆಗಳು, ವಾಣಿಜ್ಯ ಮಳಿಗೆಗಳಿದ್ದು, ಇಲ್ಲಿ ಹಲವಾರು ದಿನಗಳಿಂದ ಕಲುಷಿತ ನೀರನ್ನು ರಸ್ತೆಬದಿ ಪಾದಚಾರಿಗಳು ಓಡಾಡುವ ಜಾಗದಲ್ಲಿ ಹರಿಯುತ್ತಿದ್ದು, ಕೆಲವರು ಉದ್ದೇಶಪೂರ್ವಕವಾಗಿ ಮಾಡುತ್ತಿದ್ದಾರೆ. ಇದರಿಂದ ವ್ಯಾಪಾರಕ್ಕೆ ಹಾಗೂ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿದೆ. ಜೊತೆಗೆ ಸರ್ಕಾರಿ ಪ್ರೌಢಶಾಲೆಯೂ ಇದೇ ಮಾರ್ಗದಲ್ಲಿದ್ದು, ಶಾಲೆಗೆ ತೆರಳುವ ವಿದ್ಯಾರ್ಥಿಗಳು, ಶಿಕ್ಷಕರು ಹರಿಯುತ್ತಿರುವ ಈ ಕಲುಷಿತ ನೀರನ್ನು ತುಳಿದುಕೊಂಡು ಸಾಗುವ ದುಸ್ಥಿತಿ ಬಂದಿದೆ.ಬೇಸಿಗೆ ಕಾಲವೂ ಆದ್ದರಿಂದ ಸಾಂಕ್ರಾಮಿಕ ರೋಗ ಹರಡುವ ಭೀತಿಯೂ ಕಾಡುತ್ತಿದೆ. ಆದ್ದರಿಂದ ಸಂಬಂಧಪಟ್ಟ ಗ್ರಾಮ ಪಂಚಾಯಿತಿಯವರು ಯಾರು ಕಲುಷಿತ ನೀರು ಬಿಡುತ್ತಿದ್ದಾರೋ ಅವರ ಮೇಲೆ ಕ್ರಮ ಕೈಗೊಂಡು ದುರ್ವಾಸನೆಯಿಂದ ಮುಕ್ತಿಗೊಳಿಸಿಕೊಡಬೇಕೆಂದು ಕೋರುತ್ತೇನೆ.

– ಎಂ. ರಮೇಶ್, ಎಪಿಎಂಸಿ ಮಾಜಿ ಅಧ್ಯಕ್ಷ

ಚಾಮುಂಡಿಬೆಟ್ಟಕ್ಕೆ ರೋಪ್ ವೇ ಬೇಕೆ?

ಮಾನ್ಯರೆ,

ಮೈಸೂರಿನ ಪ್ರಮುಖ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಚಾಮುಂಡಿಬೆಟ್ಟವು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಈ ಬೆಟ್ಟದಲ್ಲಿ ಕಳೆದ ಕೆಲ ವರ್ಷದಿಂದ ಆಗಾಗ ಮತ್ತು ಮಳೆಗಾಲದಲ್ಲಿ ಭೂಕುಸಿತಗಳು ಉಂಟಾಗುತ್ತಿದೆ. ಈಗಾಗಲೇ ಬೆಟ್ಟದ ನಂದಿ ವಿಗ್ರಹ ಮಾರ್ಗದಲ್ಲಿ ಸಂಚರಿಸುವ ರಸ್ತೆಯಲ್ಲಿ ಭೂಕುಸಿತ ಸಂಭವಿಸಿ ರಸ್ತೆ ಬಂದ್ ಆಗಿದೆ. ರಾಜಕೀಯ ಲಾಭಕ್ಕಾಗಿ ಮತ್ತು ಹಣದ ಆಸೆಗೆ ಒಳಗಾಗಿ, ರೋಪ್ ವೇ ನಿರ್ಮಾಣ ಮಾಡುವುದಾಗಿ ಸರ್ಕಾರ ಹೇಳುತ್ತಿದೆ. ಇದು ಎಷ್ಟರ ಮಟ್ಟಿಗೆ ಸರಿ. ರೋಪ್ ವೇ ನಿರ್ಮಾಣದಿಂದ ಮೈಸೂರಿನ ಹೆಚ್ಚು ಹಸಿರಿನಿಂದ ಕಂಗೊಳಿಸುವ ಸುಂದರ ಪರಿಸರ ತಾಣವಾದ ಬೆಟ್ಟವನ್ನು ನಾಶ ಪಡಿಸುವುದು ಸರಿಯೇ..? ರೋಪ್ ವೇ ಅಗತ್ಯವೆನಿಸಿದರೆ ಮೈಸೂರಿನ ಪರಿಸರ ಸಂರಕ್ಷಣೆ ಪ್ರೇಮಿಗಳು, ಸಾಹಿತಿಗಳು, ಹಿರಿಯರು, ವಿದ್ಯಾರ್ಥಿಗಳು , ಹಾಗೂ ಇತರರು ಸೇರಿ ಮೈಸೂರಿನ ನಾಗರಿಕರ ಸಭೆ ಕರೆದು ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯರವರ ರಾಜ್ಯ ಸರ್ಕಾರಕ್ಕೆ ಈ ಮೂಲಕ ಮನವಿ.

– ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಮತ್ತೆ ಮತ್ತೆ ಮರುಕಳಿಸುತ್ತಿರುವ ಅಮಾನವೀಯ ಘಟನೆಗಳು

ಮಾನ್ಯರೆ,

ಆಗಾಗ ಕೆಲವು ಶಾಲೆಗಳಲ್ಲಿ ಮಕ್ಕಳಿಂದ ಶೌಚಾಲಯ ಸ್ವಚ್ಛತೆ ಮಾಡಿಸುವ ಅಮಾನವೀಯ ಘಟನಾವಳಿಗಳು ನಡೆಯುತ್ತಿರುವುದು ನಾಗರಿಕರ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಯಲವಳ್ಳಿಯ ಮುರಾರ್ಜಿ ದೇಸಾಯಿಯ ವಸತಿ ಶಾಲೆಯ ನಂತರ ಬೆಂಗಳೂರಿನ ಆಂದ್ರಹಳ್ಳಿಯಲ್ಲಿ, ಇವೆರಡೂ ಘಟನೆ ಮಾಸುವ ಮುನ್ನ ಮತ್ತೊಂದು ಘಟನೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ತವರು ಜಿಲ್ಲೆಯ ಭದ್ರಾವತಿ ತಾಲೂಕಿನ ಗುಡ್ಡದ ನೇರಲೆಕೆರೆ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸಂಭವಿಸಿದೆ. ವಿದ್ಯಾರ್ಥಿಗಳು ಶೌಚಗೃಹ ಸ್ವಚ್ಛಗೊಳಿಸುತ್ತಿರುವ ಅಮಾನವೀಯ ವಿಡಿಯೋ ದೃಶ್ಯ ವೈರಲ್ ಆಗಿದೆ. ಈ ತರಹದ ಘಟನೆಗಳು ಮತ್ತೆ ಮರುಕಳಿಸದಂತೆ ಶಿಕ್ಷಣ ಸಚಿವರು ಎಲ್ಲಾ ಜಿಲ್ಲೆಯ ಶಿಕ್ಷಣಾಧಿಕಾರಿಗಳ ಜೊತೆ ಸರಿಯಾದ ಕಾನೂನಿನ ಕ್ರಮದ ಸುತ್ತೋಲೆ ಹೊರಡಿಸಿ ಘಟನೆಗೆ ಸಂಬಂಧಿಸಿದವರ ಮೇಲೆ ಸರಿಯಾದ ಕ್ರಮ ಕೈಗೊಂಡಿದ್ದರೆ ಇಂತಹ ಅಮಾನವೀಯ ಘಟನಾವಳಿಗಳು ನಡೆಯುತ್ತಿರುತ್ತಿರಲಿಲ್ಲ.

– ಪಿ.ಸಿ. ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866–77284

ಬೆರಗು

ಸರ್ವರಿಗೂ ನೂತನ ಕ್ಯಾಲೆಂಡರ್ ವರ್ಷದ ಶುಭಾಶಯಗಳು.

ಹರುಷದ ಭರಾಟೆಯಲ್ಲಿ ವರುಷದ ಬದುಕಿಗೆ ಪೆಟ್ಟಾಗದಿರಲಿ...!

ನಮ್ಮ ದೇಶದಲ್ಲಿ ಹಬ್ಬಗಳಿಂದ ಉಂಟಾಗುವ ಸಂಭ್ರಮಕ್ಕೆ ಕೊನೆಯಿಲ್ಲ. ಪ್ರಕೃತಿಯಲ್ಲಿನ ಬದಲಾವಣೆಗೆ ಅನುಗುಣವಾಗಿ ಯುಗಾದಿಯನ್ನು ಹೊಸವರ್ಷ ಎಂದು ಆಚರಿಸುವ ಪರಂಪರೆ ಹೊಂದಿರುವ ನಮ್ಮ ರಾಷ್ಟ್ರದಲ್ಲಿ ಜಾಗತೀಕರಣದ ಕಾರಣಕ್ಕೋ ಏನೋ ಕ್ಯಾಲೆಂಡರ್ ವರ್ಷದ ಮೊದಲ ದಿನವಾದ ಜನವರಿ ತಿಂಗಳ ಮೊದಲ ದಿನವನ್ನು ಹಳ್ಳಿ–ನಗರ ಪ್ರದೇಶ ಎನ್ನದೇ ಎಲ್ಲೆಡೆ ಆಚರಿಸುವ ಪರಿಪಾಠ ಇತ್ತೀಚೆಗೆ ಹೆಚ್ಚಾಗುತ್ತಿದೆ. ಜನವರಿ 1 ಎಂದರೆ ಬಹುತೇಕ ಎಲ್ಲರಿಗೂ ಎಲ್ಲಿಲ್ಲದ ಹರುಷ. ವರುಷದ ಮೊದಲ ದಿನವನ್ನು ವಿಧವಿಧವಾಗಿ ಆಚರಿಸುವ ಹುಮ್ಮಸ್ಸು, ಉತ್ಸಾಹ ಎಲ್ಲೆಡೆ ಕಾಣಬಹುದು. ಹೊಸಹೊಸ ನಿರ್ಧಾರಗಳನ್ನು ತೆಗೆದುಕೊಳ್ಳುವ ದಿನ ಎಂದು ಕೆಲವರು ನಂಬಿದ್ದಾರೆ. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಅವರದೇ ಆದ ರೀತಿಯಲ್ಲಿ ಈ ಆಚರಣೆ ನಡೆಯುತ್ತದೆ. ಕೆಲವರು ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿದರೆ, ಮತ್ತೆ ಕೆಲಸವರು ಹೊಸ ಬಟ್ಟೆ ಧರಿಸಿ ಸಂಭ್ರಮಿಸುತ್ತಾರೆ. ಹಣಕಾಸಿನ ಸೌಲಭ್ಯಕ್ಕೆ ಅನುಗುಣವಾಗಿಯೂ ಈ ಆಚರಣೆ ಇರುತ್ತದೆ. ಕೆಲವರು ವಿದೇಶಿ ಪ್ರವಾಸ ಸ್ಥಳಗಳಿಗೆ ಹೋದರೆ, ಮತ್ತೆ ಕೆಲವರು ಹೋಟೆಲ್, ಪಬ್, ರೆಸಾರ್ಟ್‌ಗಳಲ್ಲಿ ಏರ್ಪಡಿಸುವ ಆಚರಣೆಗೆ ಹೋಗಲು ಇಚ್ಛಿಸುತ್ತಾರೆ. ಮನೆಯಲ್ಲಿ ಕೇಕ್ ಕತ್ತರಿಸಿ, ಕಚೇರಿಯಲ್ಲಿ ಸಿಹಿ ಹಂಚಿ ಕೆಲವರು ಈ ದಿನವನ್ನು ವಿಶೇಷ ದಿನವನ್ನಾಗಿಸುತ್ತಾರೆ. ಕೆಲವು ಯುವ ಸಮೂಹವಂತೂ ಡಿಸೆಂಬರ್ ಮೂವತ್ತೊಂದು ಹಾಗೂ ಜನವರಿ ಒಂದರ ನಡುವೆ ಹಗಲು ರಾತ್ರಿಯ ವ್ಯತ್ಯಾಸ ತಿಳಿಯದೆ ಆಚರಿಸುತ್ತಾರೆ. ಧೂಮಪಾನದ ಹೊಗೆ ಏರುತ್ತದೆ, ಮದ್ಯ ಹರಿಯುತ್ತದೆ, ಇವುಗಳ ಮತ್ತಿನಲ್ಲಿ ಹೊತ್ತುಗೊತ್ತಿಲ್ಲದೆ ತೇಲುವವರು ಅದೆಷ್ಟು ಜನರೋ?



"'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲಲುಬಾರದು' ಎಂದು ಶರಣರು ಹಾಗೂ ವಚನಕಾರರೂ ಆದ ಬಸವಣ್ಣನವರು ತಮ್ಮ ವಚನವೊಂದರಲ್ಲಿ ಉಲ್ಲೇಖಿಸಿದ್ದಾರೆ. ಇಂದು ಜಾಗತಿಕ ತಾಪಮಾನ ಊಹೆಗೂ ಮೀರಿ ಏರುತ್ತಿರುವುದಕ್ಕೆ ಈ ಸಾಲುಗಳು ಅನ್ವಯವಾಗಬಹುದು. ಮನುಷ್ಯ ಎಲ್ಲೆಯಿಲ್ಲದೆ ಬಳಸುತ್ತಿರುವ ಯಂತ್ರೋಪಕರಣಗಳು, ವಾಹನಗಳು, ಸ್ಥಾಪಿಸುತ್ತಿರುವ ಕಾರ್ಖಾನೆಗಳು ಮತ್ತಿತರ ಕಾರಣಕ್ಕೆ ಧರೆಯೇ ಹತ್ತಿ ಉರಿದಂತಾಗುತ್ತಿದೆ. ಮನುಷ್ಯನ ದುರಾಸೆಯಿಂದ ಇಂದು ಭೂಮಿಯು ನಲುಗುತ್ತಿದೆ. ತನ್ನ ಇಚ್ಛೆಗಳನ್ನು ಈಡೇರಿಕೊಳ್ಳಲು ಭೂಮಿಯ ಸೂಕ್ಷ್ಮ ಭಾಗಗಳನ್ನು ಬಿಡದೆ ಆವಿಷ್ಕರಿಸಿ ಪೆಟ್ಟನ್ನು ಕೊಡುತ್ತಲೇ ಇದ್ದಾನೆ. ಮಹಾತ್ಮ ಗಾಂಧೀಜಿಯವರ ಈ ಮಾತು ಎಚ್ಚರಿಕೆಯ ಗಂಟೆಯಾಗಬೇಕು. 'ಭೂಮಿಗೆ ಮನುಷ್ಯನ ಅಗತ್ಯಗಳನ್ನು ಪೂರೈಸುವಷ್ಟು ಸಂಪನ್ಮೂಲಗಳಿವೆ, ಆದರೆ ಮನುಷ್ಯನ ದುರಾಸೆಗಳನ್ನು ಪೂರೈಸುವಷ್ಟು ಇಲ್ಲ' ಎಂದು ಗಾಂಧಿ ಹೇಳಿದ್ದಾರೆ. ಇನ್ನಾದರೂ ಮನುಷ್ಯ ಜಾಗೃತನಾಗಿ ತಾನು ಬದುಕಲು ಇರುವ ಒಂದೇ ತಾಣವಾದ ಭೂಮಿಯನ್ನು ರಕ್ಷಿಸುವ ಅಗತ್ಯವಿದೆ.

ಇಂದಿನ ಲೇಖನ ವರ್ಷಾಚರಣೆ ಸಂಭ್ರಮದಲ್ಲಿ ಪ್ರಕೃತಿಗೆ ಮಾಡುತ್ತಿರುವ ಅಪಚಾರದ ಕುರಿತದ್ದಾಗಿದೆ. ಆಚರಣೆ ಅಂಗವಾಗಿ ವನ್ಯಜೀವಿಗಳಿಗೆ ನೀಡುತ್ತಿರುವ ಹಿಂಸಾಚಾರ, ಪರಿಸರ ನಾಶ, ನದಿಗಳ ಮಾಲಿನ್ಯ, ಬೆಟ್ಟಗುಡ್ಡಗಳಿಗೆ ಹಾನಿ... ಹೀಗೆ ಅನೇಕ ರೀತಿಯಲ್ಲಿ ನಿಸರ್ಗ ಮಾತೆಗೆ ಇನ್ನಿಲ್ಲದ ತೊಂದರೆ ನೀಡಿ ಪ್ರಾಕೃತಿಕ ಅಸಮತೋಲನಕ್ಕೆ ಕಾರಣವಾಗುತ್ತಿರುವುದು ವಿದ್ಯಾವಂತ ಸಮುದಾಯದಿಂದಲೇ ಎಂಬುದು ದುರದೃಷ್ಟಕರ. ಮನುಷ್ಯ 'ಹರ್ಷದ ಕೂಳಿಗೆ ವರ್ಷದ ಕೂಳನ್ನು ಕಳೆದುಕೊಂಡ' ಎಂಬ ಮಾತಿಗೆ ಇಂಬು ಕೊಡುವಂತೆ ತನ್ನ ಕೃತ್ಯಗಳಿಂದ ಅತಿವೃಷ್ಟಿ, ಅನಾವೃಷ್ಟಿಯಂತಹ ಪ್ರಕೃತಿ ವಿಕೋಪಗಳನ್ನು ಅನುಭವಿಸುತ್ತಿದ್ದಾನೆ. ಕಳೆದ ವಾರ ವರ್ಷಾಂತ್ಯದ ರಜೆ ಕಳೆಯಲು ನಗರ ಪ್ರದೇಶದ ಜನ ಬೆಟ್ಟಗುಡ್ಡಗಳ ಪ್ರದೇಶ ಅರಸಿ ಹೊರಟ ಕಾರಣಕ್ಕೆ ಮಡಿಕೇರಿ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಟ್ರಾಫಿಕ್ ಜಾಮ್ ಆಗಿದ್ದ ಸುದ್ದಿ ಕೇಳಿ ಗಾಬರಿಯಾಯಿತು. ಈ ಜಿಲ್ಲೆಗಳಿಗೆ ಹೆಚ್ಚು ಜನ ಭೇಟಿ ನೀಡುತ್ತಿರುವ ಕಾರಣ ಅಲ್ಲಿ ಬೆಟ್ಟ ಗುಡ್ಡಗಳನ್ನು ಕಡಿದು ರೆಸಾರ್ಟ್ ಹಾಗೂ ಹೋಂ ಸ್ಟೇಗಳನ್ನು ನಿರ್ಮಿಸಲಾಗುತ್ತಿದ್ದು, ಇದರಿಂದ ಮಳೆಗಾಲದಲ್ಲಿ ಲ್ಯಾಂಡ್ ಸ್ಲೈಡಿಂಗ್ ಆಗುವ ಸಾಧ್ಯತೆ ಇದೆ. ಕೆಲವೇ ವರ್ಷಗಳ ಹಿಂದೆ ಮಡಿಕೇರಿ ಹಾಗೂ ಕೇರಳ ರಾಜ್ಯಗಳಲ್ಲಿ ಆದ ಹೆಚ್ಚಿನ ಮಳೆಗೆ ಇಡೀ ಊರೇ ಬೆಟ್ಟದಿಂದ ಇಳಿದು ಬಂದ ಮಣ್ಣಿಗೆ ಮುಚ್ಚಿ ಹೋದ ಉದಾಹರಣೆ ಇನ್ನೂ ಹಸಿರಾಗಿಯೇ ಇದೆ.

ನಗರ ಪ್ರದೇಶಗಳಲ್ಲಿ ವಾಯುಮಾಲಿನ್ಯ ಅಪಾಯದ ಅಂಚನ್ನು ತಲುಪಿರುವುದನ್ನು ಗಮನಿಸಬಹುದು. ದೆಹಲಿಯಂತಹ ರಾಜಧಾನಿ ನಗರ ಇನ್ನು ಕೆಲವೇ ವರ್ಷಗಳಲ್ಲಿ ವಾಸಯೋಗ್ಯ ನಗರವಲ್ಲ ಎಂಬ ಘೋಷಣೆಯಾದರೆ ಆಶ್ಚರ್ಯವಿಲ್ಲ. ಅಂತಹ ಪರಿಸ್ಥಿತಿ ಇರುವಾಗ ನಗರ ಪ್ರದೇಶದ ಜನರು ಸಂಭ್ರಮಾಚರಣೆಗೆ ಪ್ರಕೃತಿ ಮಡಿಲನ್ನು ಆಯ್ದುಕೊಳ್ಳುವುದು ಸಹಜ. ಆದರೆ ಪ್ರಕೃತಿ ಮಡಿಲಿಗೆ ಹೋದ ಜನ ಅಲ್ಲಿ ಕುಡಿದ ಬಾಟಲಿಯನ್ನು ಬಿಸಾಕುವುದು, ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆದು ಬರುವುದು, ನದಿಗಳ ಮಲಿನ ಮಾಡುವುದು ಸರ್ವೇ ಸಾಮಾನ್ಯವಾಗಿದೆ. ವಿದ್ಯಾವಂತ ಸಮುದಾಯಕ್ಕೆ ಪರಿಸರ ನಾಶ ಮಾಡಬಾರದು ಎಂಬ ಕನಿಷ್ಠ ಜ್ಞಾನವೂ ಇಲ್ಲದೇ ಇರುವುದು ವಿಷಾದನೀಯ ಸಂಗತಿ. ಮನುಷ್ಯ ಪ್ರಕೃತಿಗೆ ಸೇರಿಸುತ್ತಿರುವ ತ್ಯಾಜ್ಯದಿಂದ ಜಲಚರಗಳು ಅನೇಕ ನೋವುಗಳನ್ನು ಅನುಭವಿಸುತ್ತವೆ. ಪ್ಲಾಸ್ಟಿಕ್ ಕವರ್, ವೈಯರ್‌ಗಳಿಂದ ಅವುಗಳ ಜೀವಕ್ಕೆ ಕುತ್ತು ಬರುತ್ತಿದೆ. ನದಿಗೆ ದೇವರ ಹೆಸರಿಟ್ಟು ಪೂಜಿಸುವ ನಮ್ಮ ದೇಶದ ಜನ ಅದೇ ನದಿಗೆ ತ್ಯಾಜ್ಯವನ್ನು ಹಾಕಿ ಕಲುಷಿತ ಮಾಡುತ್ತಿರುವುದು ಅರ್ಥವಿಲ್ಲದ ಸಂಗತಿಯಾಗಿದೆ. ಪ್ರತಿ ದಿನ 60 ಪ್ರಮುಖ ನಗರಗಳಿಂದ ದಕ್ಷಿಣ ಏಷ್ಯಾದ ಸಮುದ್ರಗಳಿಗೆ ನದಿಗಳ ಮೂಲಕ ಸಮುದ್ರಕ್ಕೆ 15,343 ಟನ್‌ನಷ್ಟು ತ್ಯಾಜ್ಯ ಸೇರುತ್ತಿದೆ ಎಂದರೆ ಪರಿಸರ ಹಾನಿ ಎಷ್ಟಾಗುತ್ತಿದೆ ಊಹಿಸಿ !

ಶಿಕ್ಷಣದ ಪ್ರಮಾಣ ಹೆಚ್ಚಾದಷ್ಟು ಪರಿಸರ ಹಾನಿ ಕಡಿಮೆಯಾಗಬೇಕಿತ್ತು. ಆದರೆ ಶಿಕ್ಷಣದ ಮಟ್ಟ ಹೆಚ್ಚಾದಷ್ಟು ನಿಸರ್ಗಕ್ಕೆ ಹೆಚ್ಚು ಹಾನಿಯಾಗುತ್ತಿರುವುದು ಅನಾಹುತಕಾರಿ ಬೆಳವಣಿಗೆಯಾಗಿದೆ. ಸಂರಕ್ಷಿತ ಅರಣ್ಯ ಪ್ರದೇಶಕ್ಕೆ ಮನುಷ್ಯನ ದಾಳಿಯಿಂದ ಅಲ್ಲಿನ ವ್ಯವಸ್ಥೆಯೇ ಬುಡಮೇಲಾಗುತ್ತಿದೆ. ಜವಾಬ್ದಾರಿಯುತ ಪ್ರಜೆಗಳ ಬೇಜವಾಬ್ದಾರಿ ನಡೆಯಿಂದ ಅರಣ್ಯಗಳಲ್ಲಿ ಪ್ರಾಣಿಗಳ ಬದುಕು ಅರಣ್ಯರೋದನವಾಗಿದೆ. ಸಫಾರಿ ಮತ್ತಿತರ ಚಟುವಟಿಕೆಗಳಿಂದ ಅವುಗಳ ಖಾಸಗಿ ಬದುಕಿಗೆ ಲಗ್ಗೆ ಇಟ್ಟು ಅವುಗಳ ಜೀವನ ಕ್ರಮಕ್ಕೆ ಕೊಳ್ಳಿ ಇಡುತ್ತಿದ್ದಾನೆ. ಅಷ್ಟರ ನಡುವೆ ಕೆಲವು ಕಿಡಿಗೇಡಿಗಳು, ಕಾಡಂಚಿನ ಗ್ರಾಮಗಳ ಅನಾಗರಿಕರು ಅರಣ್ಯಾಧಿಕಾರಿಗಳ ಮೇಲಿನ ಸಿಟ್ಟಿಗೆ ಅರಣ್ಯಕ್ಕೆ ಬೆಂಕಿ ಹಾಕುವ ಕೆಲಸ ಮಾಡಿ, ಅದನ್ನು ಕಾಡ್ಗಿಚ್ಚು ಎಂದು ಸುದ್ದಿ ಹಬ್ಬಿಸುತ್ತಾರೆ. ಅರಣ್ಯ ಪ್ರದೇಶ ಕಡಿಮೆಯಾಗುತ್ತಿರುವ ಕಾರಣಕ್ಕೆ ಮನುಷ್ಯ ಹಾಗೂ ವನ್ಯಜೀವಿಗಳ ಸಂಘರ್ಷ ಹೆಚ್ಚಾಗುತ್ತಿದೆ. ಕಾಡಂಚಿನ ಗ್ರಾಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಆನೆ, ಚಿರತೆ, ಹುಲಿ, ಕರಡಿಗಳು ಈಗ ನಗರ ಪ್ರದೇಶಗಳಿಗೆ ಬರುತ್ತಿರುವುದು ಸಹಜ ಸುದ್ದಿಯಾಗಿಬಿಟ್ಟಿದೆ. ಕಾಡುಮೃಗಗಳಿಂದ ಉಪಟಳ ಎಂದು ಮನುಷ್ಯ ಬೊಬ್ಬೆ ಇಡುತ್ತಿದ್ದಾನೆ. ಆದರೆ ಮನುಷ್ಯ ಕಾಡಿಗೆ ಹೋಗಿ ಮಾಡಿಬರುತ್ತಿರುವ ಉಪಟಳದ ಮುಂದೆ ಕಾಡುಮೃಗಗಳು ನಾಡಿಗೆ ಬಂದು ಮಾಡುತ್ತಿರುವ ಉಪಟಳ ಏನೇನೂ ಅಲ್ಲ. ಮನುಷ್ಯ ಆಹಾರಕ್ಕೆ ಮೃಗಗಳನ್ನು ಬೇಟೆಯಾಡುವುದು ಇರಲಿ ಮೋಜು ಮಸ್ತಿಗೆ, ಶೋಕಿಗೆ ಬೇಟೆಯಾಡುತ್ತಿರುವುದು ಅಪಾಯಕಾರಿ ಬೆಳವಣಿಗೆ ಅಲ್ಲವೇ? ಅಳಿವಿನಂಚಿನಲ್ಲಿರುವ ಅನೇಕ ಪ್ರಾಣಿಗಳನ್ನು, ಸಾವಿರಾರು ಕಿಲೋಮೀಟರ್ ದೂರ ಕ್ರಮಿಸಿ ಗೂಡು ಕಟ್ಟಿ, ಮೊಟ್ಟೆ ಇಟ್ಟು ಮರಿ ಮಾಡಿಕೊಂಡು ಹೋಗಲು ಬರುವ ಕೆಲವು ಅಪರೂಪದ ಪಕ್ಷಿ ಪ್ರಭೇದಗಳನ್ನು ಬಿಡದಂತೆ ಬೇಟೆಯಾಡುತ್ತಿರುವುದು ಅಕ್ಷಮ್ಯ ಅಪರಾಧವೇ ಸರಿ.

ಮನುಷ್ಯನ ಶೋಕಿಗೆ ಹಲವು ಪ್ರಾಣಿಗಳು ತಮ್ಮ ಜೀವವನ್ನು ಬಲಿಕೊಡುತ್ತಿರುವುದು ವಿಷಾದಕರ. ಆನೆಯ ದಂತದಿಂದ ಮಾಡಿದ ಕಲಾಕೃತಿಗಳಿಗೆ ಬೇಡಿಕೆ ಇರುವ ಕಾರಣ, ಕೇವಲ ದಂತಕ್ಕಾಗಿ ಆನೆಗಳನ್ನು ಸಂಹರಿಸುವುದು, ಹುಲಿ ಉಗುರು, ಚರ್ಮಕ್ಕಾಗಿ ಅವುಗಳನ್ನು ಬೇಟೆಯಾಡುವುದು, ಜಿಂಕೆ ಮಾಂಸ, ಚರ್ಮ, ಕೊಂಬಿಗಾಗಿ ಕೊಲ್ಲುವುದು, ಬೆಲ್ಟ್, ವ್ಯಾನಿಟಿ ಬ್ಯಾಗ್‌ಗಳಿಗಾಗಿ ಮೊಸಳೆಗಳನ್ನೇ ಸಾಯಿಸುವುದು... ಹೀಗೆ, ಒಂದೇ... ಎರಡೇ ಮನುಷ್ಯನ ಆಟೋಟಾಪಕ್ಕೆ ಕೊನೆಯೇ ಇಲ್ಲ ಎಂದು ಹೇಳಬಹುದು. ಹೊಲದಲ್ಲಿ ಮನೆಕಟ್ಟಿ ಮನೆಯೊಳಗೆ ಹಾವು ಬಂತು ಎಂದು ಬೊಬ್ಬೆ ಇಡುವ ಮನುಷ್ಯ, ತಾನು ಹಾವು ವಾಸಿಸುವ ಜಾಗದಲ್ಲಿ ಮನೆ ಕಟ್ಟಿದ್ದೇನೆ ಎಂಬ ಕನಿಷ್ಠ ಜ್ಞಾನವೂ ಇಲ್ಲದೇ ಇರುವುದು ವಿಡಂಭನೆ ಎನಿಸುತ್ತದೆ.


ಪರಿಸರ ಅಸಮತೋಲನದಿಂದ ಜೇನ್ನೊಣಗಳು, ಇತರೆ ದುಂಬಿಗಳ, ಕೆಲವು ಚಿಟ್ಟೆಗಳ ಬದುಕಿಗೆ ಸಂಚಕಾರ ಬಂದೊದಗಿದೆ. ಭೂಮಿಯ ಮೇಲೆ ಸುಮಾರು 20,000 ಬಗೆಯ ನೊಣಗಳಿವೆ. ಇವುಗಳಿಂದಲೇ ಪರಾಗಸ್ಪರ್ಶವಾಗಿ ಬೆಳೆಗಳು ತೆನೆ ಕಟ್ಟಿ ಮನುಷ್ಯನ ಆಹಾರ ಉತ್ಪತ್ತಿಯಾಗುತ್ತಿರುವುದು. ಜೇನ್ನೊಣಗಳು ಭೂಮಿಯಿಂದ ಮರೆಯಾದರೆ ಮನುಷ್ಯ ಸಂಕುಲ ಭೂಮಿಯಿಂದ ಮರೆಯಾಗಲು ಬಹಳ ವರ್ಷಗಳು ಹಿಡಿಸುವುದಿಲ್ಲ. ಕೆಲವೇ ವರ್ಷಗಳಲ್ಲಿ ಪಳಯುಳಿಕೆಯಾಗಿಬಿಡುವ ಸಂಭವವಿದೆ. ಹಾಗೆಯೇ ಅನೇಕ ಅಪರೂಪದ ಕೀಟ ಹಾಗೂ ಸಣ್ಣ ಪ್ರಾಣಿ ಪ್ರಭೇದಗಳನ್ನು ತಿಂದು ಮುಗಿಸುವ ಜಾಯಮಾನ ಹೊಂದಿರುವ ಮನುಷ್ಯನ ಹಸಿವಿಗೆ ಕೊನೆಯೇ ಇಲ್ಲವೇನೋ ಎಂಬ ಅನುಮಾನ ಮೂಡುತ್ತದೆ. ಇವೆಲ್ಲವನ್ನು ಪರಾಮರ್ಶಿಸಿದರೆ ಭೂಮಿಯ ಮೇಲೆ ಮನುಷ್ಯನಷ್ಟು ಕ್ರೂರಮೃಗ ಮತ್ತೊಂದಿಲ್ಲ ಎನಿಸುತ್ತದೆ!


ಮಾನವ ಕುಲದ ಅಂತ್ಯಕ್ಕೆ ಯಾರೂ ಭಾಷ್ಯ ಬರೆಯಬೇಕಿಲ್ಲ. ತನಗೆ ತಾನೆ ಮನುಷ್ಯ ಗುಂಡಿ ತೋಡಿಕೊಳ್ಳುತ್ತಿದ್ದಾನೆ. ಮನುಷ್ಯ ತನ್ನ ಸ್ವಯಂಕೃತ ತಪ್ಪುಗಳಿಂದ ಸ್ವರ್ಗ ಸದೃಶವಾದ ಭೂಮಿಯನ್ನು ಅಕ್ಷರಶಃ ನರಕ ಮಾಡಲು ಟೊಂಕಕಟ್ಟಿ ನಿಂತಂತೆ ಇದೆ. ಮುಂದಿನ ಪೀಳಿಗೆಗೆ ವಾಸಯೋಗ್ಯವಲ್ಲದ ಭೂಮಿಯನ್ನು ಕೊಡುಗೆಯಾಗಿ ಕೊಡುತ್ತಿರುವುದು ದುರದೃಷ್ಟಕರ. ಚಂದ್ರ/ ಮಂಗಳನ ಮೇಲೆ ಇಲ್ಲದಿರುವ ನೀರನ್ನು ಹುಡುಕಿ ಬೆಳೆ ಬೆಳೆಯಲು ಚಿಂತಿಸಿ ಪ್ರಯತ್ನಿಸುತ್ತಿರುವುದು ಆವಿಷ್ಕಾರ ಎನಿಸಿದರೂ ಒಂದು ದೃಷ್ಟಿಕೋನದಲ್ಲಿ ಹಾಸ್ಯಾಸ್ಪದ ಎನಿಸುತ್ತದೆ. ಏಕೆಂದರೆ ಭೂಮಿಯ ಮೇಲೆ ಪ್ರಾಕೃತಿಕ ಖನಿಜಗಳಿಂದ ಕೂಡಿದ ನದಿಯಲ್ಲಿ ದೊರಕುವ ಅಮೃತ ಸಮಾನವಾದ ನೀರನ್ನು ಕಲುಷಿತ ಮಾಡಿ, ಕುಡಿಯಲು ಯೋಗ್ಯವಲ್ಲ ದಂತೆ ಮಾಡಿ, ಮತ್ತೆ ಅದನ್ನು ಶುದ್ಧೀಕರಿಸಿ ಕುಡಿಯಲು ಮೆಷಿನ್ ಅಳವಡಿಸುತ್ತಿರುವುದನ್ನು ಅಜ್ಞಾನ ಎನ್ನಬೇಕೋ? ವಿಜ್ಞಾನ ಎನ್ನಬೇಕೋ? ತಿಳಿಯದು.

'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದಡೆ ನಿಲಲುಬಾರದು' ಎಂದು ಶರಣರು ಹಾಗೂ ವಚನಕಾರರೂ ಆದ ಬಸವಣ್ಣನವರು ತಮ್ಮ ವಚನವೊಂದರಲ್ಲಿ ಉಲ್ಲೇಖಿಸಿದ್ದಾರೆ. ಇಂದು ಜಾಗತಿಕ ತಾಪಮಾನ ಊಹೆಗೂ ಮೀರಿ ಏರುತ್ತಿರುವುದಕ್ಕೆ ಈ ಸಾಲುಗಳು ಅನ್ವಯವಾಗಬಹುದು. ಮನುಷ್ಯ ಎಲ್ಲೆಯಿಲ್ಲದೆ ಬಳಸುತ್ತಿರುವ ಯಂತ್ರೋಪಕರಣಗಳು, ವಾಹನಗಳು, ಸ್ಥಾಪಿಸುತ್ತಿರುವ ಕಾರ್ಖಾನೆಗಳು ಮತ್ತಿತರ ಕಾರಣಕ್ಕೆ ಧರೆಯೇ ಹತ್ತಿ ಉರಿದಂತಾಗುತ್ತಿದೆ. ಮನುಷ್ಯನ ದುರಾಸೆಯಿಂದ ಇಂದು ಭೂಮಿಯು ನಲುಗುತ್ತಿದೆ. ತನ್ನ ಇಚ್ಛೆಗಳನ್ನು ಈಡೇರಿಕೊಳ್ಳಲು ಭೂಮಿಯ ಸೂಕ್ಷ್ಮ ಭಾಗಗಳನ್ನು ಬಿಡದೆ ಆವಿಷ್ಕರಿಸಿ ಪೆಟ್ಟನ್ನು ಕೊಡುತ್ತಲೇ ಇದ್ದಾನೆ. ಮಹಾತ್ಮ ಗಾಂಧೀಜಿಯವರ ಈ ಮಾತು ಎಚ್ಚರಿಕೆಯ ಗಂಟೆಯಾಗಬೇಕು. 'ಭೂಮಿಗೆ ಮನುಷ್ಯನ ಅಗತ್ಯಗಳನ್ನು ಪೂರೈಸುವಷ್ಟು ಸಂಪನ್ಮೂಲಗಳಿವೆ, ಆದರೆ ಮನುಷ್ಯನ ದುರಾಸೆಗಳನ್ನು ಪೂರೈಸುವಷ್ಟು ಇಲ್ಲ' ಎಂದು ಗಾಂಧಿ ಹೇಳಿದ್ದಾರೆ. ಇನ್ನಾದರೂ ಮನುಷ್ಯ ಜಾಗೃತನಾಗಿ ತಾನು ಬದುಕಲು ಇರುವ ಒಂದೇ ತಾಣವಾದ ಭೂಮಿಯನ್ನು ರಕ್ಷಿಸುವ ಅಗತ್ಯವಿದೆ. ಇಲ್ಲವಾದಲ್ಲಿ ಸಾವಿರಾರು ವರ್ಷಗಳ ನಂತರ ಮನುಷ್ಯ ಭೂಮಿಯ ಮೇಲೆ ಜೀವಿಸಿದ್ದ ಎಂದು ಪಳೆಯುಳಿಕೆಗಳಿಂದ ತಿಳಿಯುವ ಸ್ಥಿತಿ ನಿರ್ಮಾಣವಾಗಬಹುದು. ಏನಂತೀರಿ?

ಪದ ತಾಂಬೂಲ :
ಬಸ್‌ನಲ್ಲಿ ರಶ್ ಆಗಿ ಉಸಿರುಗಟ್ಟಿದರೆ
ಇಳಿದು ಬೇರೆ ಬಸ್ ಹತ್ತಬಹುದು,
ಭೂಮಿಯಲ್ಲಿ ಉಸಿರುಗಟ್ಟಿದರೆ ಬಿಟ್ಟು
ಹೋಗಲು ಇನ್ನೊಂದು ಭೂಮಿಯಿಲ್ಲ


ವರ್ಷಾಚರಣೆಗಾಗಿ ಮೈಸೂರಿಗೆ ಹರಿದು ಬಂದ ಜನಸಾಗರ





ಹೊಸ ವರ್ಷ ಆಚರಣೆಗಾಗಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಭಾನುವಾರವೇ ಸಾಗರೋಪಾದಿಯಲ್ಲಿ ಪ್ರವಾಸಿಗರ ದಂಡು ಹರಿದು ಬಂದಿತ್ತು. ಮೈಸೂರು ಅರಮನೆಗೆ ಸಾವಿರಾರು ಮಂದಿ ಪ್ರವಾಸಿಗರು ಭೇಟಿ ನೀಡಿದ್ದು, ಸಂಜೆ ಮೈಸೂರು ಅರಮನೆಯ ವರ್ಣರಂಜಿತ ವಿದ್ಯುತ್ ದೀಪಾಲಂಕಾರದ ಬೆಳಕಿನೊಂದಿಗೆ ಆಕರ್ಷಕ ಫಲಪುಷ್ಪ ಪ್ರದರ್ಶನವನ್ನು ಕಣ್ತುಂಬಿಕೊಂಡರು. ಹೊಸ ವರ್ಷದ ದಿನ ಸಂಜೆ ಚಾಮುಂಡಿಬೆಟ್ಟಕ್ಕೆ ಪ್ರವಾಸಿಗರ ಪ್ರವೇಶ ನಿಷೇಧಿಸಿದ್ದರಿಂದ ಭಾನುವಾರ ಬೆಳಗ್ಗೆಯಿಂದಲೇ ಪ್ರವಾಸಿಗರು ಹಾಗೂ ಭಕ್ತರ ದಂಡು ಚಾಮುಂಡಿಬೆಟ್ಟಕ್ಕೆ ಲಗ್ಗೆ ಇಟ್ಟು, ತಾಯಿ ಶ್ರೀ ಚಾಮುಂಡೇಶ್ವರಿಯ ದರ್ಶನ ಪಡೆದರು. ಭಾನುವಾರ ರಜಾ ದಿನವು ಆಗಿದ್ದರಿಂದ ಮೈಸೂರಿಗೆ ಲಕ್ಷಾಂತರ ಪ್ರವಾಸಿಗರು ಆಗಮಿಸಿದ್ದು, ನಗರದ ರಸ್ತೆಗಳಲ್ಲೂ ಟ್ರಾಫಿಕ್ ಜಾಮ್ ಆಗಿತ್ತು. ಮೈಸೂರು ಹಾಗೂ ಸುತ್ತಮುತ್ತಲಿನ ಪ್ರವಾಸಿ ತಾಣಗಳು ಪ್ರವಾಸಿಗರಿಂದ ತುಂಬಿ ತುಳುಕುತ್ತಿತ್ತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

	ರಾಹುಕಾಲ	ಯಮಗಂಡ	ಗುಳಿಕಕಾಲ
ಭಾನು	4.30 – 6.00	12.00 – 1.30	3.00 – 4.30
ಸೋಮ	7.30 – 9.00	10.30 – 12.00	1.30 – 3.00
ಮಂಗಳ	3.00 – 4.30	9.00 – 10.30	12.00 – 1.30
ಬುಧ	12.00 – 1.30	7.30 – 9.00	10.30 – 12.00
ಗುರು	1.30 – 3.00	6.00 – 7.30	9.00 – 10.30
ಶುಕ್ರ	10.30 – 12.00	3.00 – 4.30	7.30 – 9.00
ಶನಿ	9.00 – 10.30	1.30 – 3.00	6.00 – 7.30



ಜನವರಿ					2024
ಭಾನು		7	14	21	28
ಸೋ	1	8	15	22	29
ಮಂ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

ಫೆಬ್ರವರಿ					2024
ಭಾನು		4	11	18	25
ಸೋ		5	12	19	26
ಮಂ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	
ಶನಿ	3	10	17	24	

ಮಾರ್ಚ್					2024
ಭಾನು	31	3	10	17	24
ಸೋ		4	11	18	25
ಮಂ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

ಏಪ್ರಿಲ್					2024
ಭಾನು		7	14	21	28
ಸೋ	1	8	15	22	29
ಮಂ	2	9	16	23	30
ಬುಧ	3	10	17	24	
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

ಮೇ					2024
ಭಾನು		5	12	19	26
ಸೋ		6	13	20	27
ಮಂ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	

ಜೂನ್					2024
ಭಾನು	30	2	9	16	23
ಸೋ		3	10	17	24
ಮಂ		4	11	18	25
ಬುಧ		5	12	19	26
ಗುರು		6	13	20	27
ಶುಕ್ರ		7	14	21	28
ಶನಿ	1	8	15	22	29

ಜುಲೈ					2024
ಭಾನು		7	14	21	28
ಸೋ	1	8	15	22	29
ಮಂ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

ಆಗಸ್ಟ್					2024
ಭಾನು		4	11	18	25
ಸೋ		5	12	19	26
ಮಂ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31

ಸೆಪ್ಟೆಂಬರ್					2024
ಭಾನು	1	8	15	22	29
ಸೋ	2	9	16	23	30
ಮಂ	3	10	17	24	
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

ಅಕ್ಟೋಬರ್					2024
ಭಾನು		6	13	20	27
ಸೋ		7	14	21	28
ಮಂ	1	8	15	22	29
ಬುಧ	2	9	16	23	30
ಗುರು	3	10	17	24	31
ಶುಕ್ರ	4	11	18	25	
ಶನಿ	5	12	19	26	

ನವೆಂಬರ್					2024
ಭಾನು		3	10	17	24
ಸೋ		4	11	18	25
ಮಂ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

ಡಿಸೆಂಬರ್					2024
ಭಾನು	1	8	15	22	29
ಸೋ	2	9	16	23	30
ಮಂ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

ರಜಾ ದಿನಗಳು

ಜನವರಿ
01 ನೂತನ ವರ್ಷಾರಂಭ
15 ಮಕರ ಸಂಕ್ರಾಂತಿ
26 ಗಣರಾಜ್ಯೋತ್ಸವ

ಮಾರ್ಚ್
08 ಮಹಾ ಶಿವರಾತ್ರಿ
25 ಹೋಳಿ ಹಬ್ಬ
29 ಗುಡ್ ಫ್ರೈಡೇ
30 ಹೋಲಿ ಸಾಟರ್ಡೆ

ಏಪ್ರಿಲ್
09 ಚಾಂದ್ರಮಾನ ಯುಗಾದಿ
11 ಕುತುಬ್-ಏ-ರಂಜಾನ್
13 ದೇವರ ದಾಸಿಮಯ್ಯ ಜ., ಸೌರ ಯುಗಾದಿ
14 ಡಾ. ಅಂಬೇಡ್ಕರ್ ಜಯಂತಿ
17 ಚಾಂದ್ರ ಶ್ರೀರಾಮನವಮಿ
21 ಮಹಾವೀರ ಜಯಂತಿ

ಮೇ
01 ಕಾರ್ಮಿಕರ ದಿನ
10 ಬಸವ ಜಯಂತಿ
12 ರಾಮಾನುಜಾಚಾರ್ಯರ ಜ., ಶಂಕರ ಜ.
23 ಬುದ್ಧ ಪೂರ್ಣಿಮಾ

ಜೂನ್
18 ಬಕ್ರೀದ್

ಜುಲೈ
17 ಮೊಹರಂ 10ನೇ ದಿನ

ಆಗಸ್ಟ್
15 ಸ್ವಾತಂತ್ರ್ಯ ದಿನಾಚರಣೆ
16 ವರಮಹಾಲಕ್ಷ್ಮಿ ವ್ರತ
19 ಋಗ್ ಯಜುರ್ ಉಪಾಕರ್ಮ
20 ನಾರಾಯಣಗುರು ಜಯಂತಿ
26 ಶ್ರೀ ಕೃಷ್ಣ ಜನ್ಮಾಷ್ಟಮಿ

ಸೆಪ್ಟೆಂಬರ್
06 ಸ್ವರ್ಣಗೌರಿ ವ್ರತ
07 ಗಣೇಶ ಚತುರ್ಥಿ
08 ಸಂತ ಮೇರಿ ಹಬ್ಬ
15 ತಿರು ಓಣಂ
16 ಈದ್-ಮಿಲಾದ್, ಅನಂತಪದ್ಮನಾಭ ವ್ರತ
17 ವಿಶ್ವಕರ್ಮ ಜಯಂತಿ

ಅಕ್ಟೋಬರ್
02 ಗಾಂಧಿ ಜಯಂತಿ, ಮಹಾಲಯ ಅಮಾವಾಸ್ಯೆ
11 ಮಹಾನವಮಿ / ಆಯುಧ ಪೂಜೆ
12 ವಿಜಯದಶಮಿ
17 ವಾಲ್ಮೀಕಿ ಜಯಂತಿ, ತುಲಾ ಸಂಕ್ರಮಣ
31 ನರಕ ಚತುರ್ದಶಿ

ನವೆಂಬರ್
01 ಕನ್ನಡ ರಾಜ್ಯೋತ್ಸವ
02 ಬಲಿಪಾಡ್ಯಮಿ
15 ಗುರುನಾನಕ್ ಜಯಂತಿ
18 ಕನಕದಾಸ ಜಯಂತಿ

ಡಿಸೆಂಬರ್
24 ಕ್ರಿಸ್‌ಮಸ್ ಈವ್
25 ಕ್ರಿಸ್‌ಮಸ್

ಅಪಘಾತ ತಡೆಗೆ ಅಗತ್ಯ ಕ್ರಮ ಕೈಗೊಳ್ಳಿ

ತಡೆಗೋಡೆ ನಿರ್ಮಾಣ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚನೆ



ಮಂಡ್ಯ, ಡಿ.31–ಇತ್ತೀಚಿನ ದಿನಗಳಲ್ಲಿ ವಿ.ನಾಲಾ ವ್ಯಾಪ್ತಿಯಲ್ಲಿ ಅಪಘಾತಗಳು ಹೆಚ್ಚುತ್ತಿದ್ದು, ಅವುಗಳನ್ನು ತಡೆಗಟ್ಟಲು ತಾಂತ್ರಿಕ ವರದಿಯೊಂದಿಗೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ನಾಲೆಗಳು ಹಾಗೂ ಕೆರೆಗಳ ಬದಿಯಲ್ಲಿ ತಡೆಗೋಡೆ ನಿರ್ಮಾಣ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಇತ್ತೀಚೆಗೆ ನಾಲೆಗಳ ಭಾಗದಲ್ಲಿ ಶಿವಳ್ಳಿ, ಗಮನಹಳ್ಳಿ ಹಾಗೂ ಬಾನಘಟ್ಟದಲ್ಲಿ ಒಟ್ಟು 3 ರಸ್ತೆ ಅಪಘಾತ ಸಂಭವಿಸಿ 11 ಜನ ಮೃತಪಟ್ಟಿದ್ದಾರೆ. ಅಪಘಾತಗಳನ್ನು ತಡೆಗಟ್ಟಲು ಜಿಲ್ಲಾ ವ್ಯಾಪ್ತಿಯ ನಾಲೆ, ಕೆರೆಗಳ ಬದಿಗಳಲ್ಲಿ ತಡೆಗೋಡೆ ಹಾಗೂ ಬ್ಯಾರಿಯರ್ ನಿರ್ಮಿಸಿ ನಿರ್ವಹಣೆ ಮಾಡಲು ಸಮಿತಿ ರಚಿಸಲಾಗಿತ್ತು ಸಮಿತಿ ತಡೆಗೋಡೆ ನಿರ್ಮಾಣ ಸಂಬಂಧಿಸಿದಂತೆ ವರದಿ ಸಲ್ಲಿಸಿದೆ ಎಂದರು.

ರಸ್ತೆ ಉಬ್ಬುಗಳಿರುವ ಕೆಲ ಕಡೆ ಎಚ್ಚರಿಕೆ ಫಲಕ ಅಳವಡಿಸಿಲ್ಲ. ಪೊಲೀಸರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹಾಗೂ ಲೋಕೋಪಯೋಗಿ ಅಧಿಕಾರಿಗಳು ಜಂಟಿ ಸಮೀಕ್ಷೆ ನಡೆಸಿ ಈ ಬಗ್ಗೆ ಕ್ರಮ ವಹಿಸಬೇಕು. ಅಪಘಾತ ಹೆಚ್ಚು ಉಂಟಾಗುವ ಸ್ಥಳಗಳಲ್ಲಿ ರಸ್ತೆ ಉಬ್ಬು (ಹಂಪ್) ನಿರ್ಮಾಣ, ಸಂಚಾರಿ ನಿಯಮಗಳ ಸೂಚನಾ ಫಲಕಗಳ ಅಳವಡಿಕೆ, ತಡೆಗೋಡೆ ನಿರ್ಮಾಣ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಸಮಿತಿ ವರದಿ ನೀಡಿದೆ. ಇದನ್ನು ತಾಂತ್ರಿಕ ತಜ್ಞರು ಪರಿಶೀಲಿಸಿ ಸಂಪೂರ್ಣ ವರದಿ ನೀಡಬೇಕು ಎಂದು ಸೂಚಿಸಿದರು.

ರಾಜ್ಯದ ಇತರ ಜಿಲ್ಲೆಗಳಿಗೆ ಹೋಲಿಸಿದರೆ ನಮ್ಮ ಜಿಲ್ಲೆಯ ವಿ.ನಾಲಾ ವ್ಯಾಪ್ತಿಯಲ್ಲಿ ಅಪಘಾತಗಳು ಸಂಭವಿಸುತ್ತಿವೆ. ಅದನ್ನು ತಡೆಗಟ್ಟಲು ವರದಿಯನ್ನು ಬೇಗನೆ ಸಿದ್ಧಪಡಿಸಬೇಕು. ಬೈಕ್, ಕಾರು, ಆಟೋ, ವ್ಯಾನ್‌ಗಳಲ್ಲಿ ಅನೇಕ ಜನ ಸಾಮಾನ್ಯರು ದಿನನಿತ್ಯ ಸಂಚರಿಸುತ್ತಿರುತ್ತಾರೆ. ಅವರಿಗೆ ಗೋಚರಿಸುವಂತೆ ಸಂಚಾರಿ ನಿಯಮಗಳ ಜಾಗೃತಿ ಫಲಕ ಅಳವಡಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಹರ್ಷ, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ಡಾ. ಸಿದ್ದೇಗೌಡ, ಸಿ.ಶಂಕರ್, ಎಂ.ಶಿವಕುಮಾರ್, ನಂದಕುಮಾರ್, ಮನೋಜ್, ರಾಕೇಶ್, ಹನುಮಂತ್, ವಿಜಯಕುಮಾರ್, ಮನು ಕುಮಾರ್, ಸಿಂಚನಾ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಕನ್ನಡಪರ ಸಂಘಟನೆಗಳಿಂದ ಪಂಜಿನ ಮೆರವಣಿಗೆ



ಕೆ.ಆರ್.ಪೇಟೆ, ಡಿ.31– ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಸೇರಿದಂತೆ ನೂರಾರು ಕನ್ನಡಪರ ಹೋರಾಟಗಾರರನ್ನು ಬಂಧಿಸಿರುವ ರಾಜ್ಯ ಸರ್ಕಾರದ ವರ್ತನೆ ಖಂಡಿನೀಯ. ಅವರನ್ನು ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿ ತಾಲೂಕಿನ ವಿವಿಧ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಶನಿವಾರ ಸಂಜೆ ಪಟ್ಟಣದಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ತಾಲೂಕು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಸೇನೆ, ಜಯ ಕರ್ನಾಟಕ ಸಂಘಟನೆ, ಕರುನಾಡು ಯುವಜನ ವೇದಿಕೆ, ಕೆಆರ್‌ಎಸ್ ಪಕ್ಷ ಕನ್ನಡ ವಿಭಾಗ ಹಾಗೂ ಮಾತೃಭೂಮಿ ವೃದ್ಧಾಶ್ರಮ ಘಟಕಗಳ ಪದಾಧಿಕಾರಿಗಳು, ಪಟ್ಟಣದ ಪ್ರವಾಸಿ ಮಂದಿರದಿಂದ ಬೊಮ್ಮೇಗೌಡ ವೃತ್ತದವರೆಗೆ ಪಂಜಿನ ಮೆರವಣಿಗೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿಸಿದರು.

ಬೆಂಗಳೂರಿನಲ್ಲಿ ಪರಭಾಷಿಕರ ಹಾವಳಿ ಜಾಸ್ತಿಯಾಗಿದ್ದು, ಕನ್ನಡಿಗರು ತಬ್ಬಲಿಗಳಂತೆ ಜೀವನ ನಡೆಸುತ್ತಿದ್ದಾರೆ. ಪರಭಾಷಿಕರು ಬೆಂಗಳೂರನ್ನು ಕೇಂದ್ರಾಡಳಿತ ಪ್ರದೇಶ ಮಾಡಲು ಹುನ್ನಾರ ನಡೆಸುತ್ತಿದ್ದಾರೆ. ಕನ್ನಡಗರನ್ನು ಕಡೆಗಣಿಸಿ ಹಿಂದಿ, ಇಂಗ್ಲಿಷ್ ಭಾಷೆ ವಿಜೃಂಭಿಸುತ್ತಿದೆ. ಇದರ ವಿರುದ್ಧ ಅಭಿಯಾನ ನಡೆಸಿ, ಶೇ.60ರಷ್ಟು ಕನ್ನಡ ಭಾಷಾ ನಾಮಫಲಕಕ್ಕೆ ಹೋರಾಟ ನಡೆಸುತ್ತಿರುವ ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಸೇರಿದಂತೆ ನೂರಾರು ಹೋರಾಟಗಾರರನ್ನು ಬಂಧಿಸಿ ಹೋರಾಟವನ್ನು ಹತ್ತಿಕ್ಕುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದು ಪ್ರಿಭಟನಾಕಾರರು ಆರೋಪಿಸಿದರು.

ಕರವೇ ಸ್ವಾಭಿಮಾನಿ ಸೇನೆಯ ಜಿಲ್ಲಾ ಉಪಾಧ್ಯಕ್ಷ ಎ.ಸಿ.ಕಾಂತರಾಜು, ತಾಲೂಕು ಅಧ್ಯಕ್ಷ ಸಮೀರ್, ಅಜ್ಜು, ಜಮೀಲ್, ಜಾವಿದ್, ಪದವೀದರ ಘಟಕದ ಅಧ್ಯಕ್ಷ ಅನುವಿನಕಟ್ಟೆ ಸೋಮು, ಜಯಕರ್ನಾಟಕ ಸಂಘಟನೆಯ ತಾಲೂಕು ಕಾರ್ಯಾಧ್ಯಕ್ಷ ಕೆರೆಕೋಡಿ ಆನಂದ್, ಯುವ ಘಟಕದ ಅಧ್ಯಕ್ಷ ಕೆ.ಎಲ್.ಮಹೇಶ್, ಉಪಾಧ್ಯಕ್ಷ ಹೊಸಹೊಳಲು ಹರೀಶ್, ವಿದ್ಯಾರ್ಥಿ ಘಟಕದ ಅಧ್ಯಕ್ಷ ಶಿವು, ಕರುನಾಡು ಯುವಜನ ವೇದಿಕೆಯ ಜಿಲ್ಲಾಧ್ಯಕ್ಷ ಎಸ್.ರವಿ, ತಾಲೂಕು ಅಧ್ಯಕ್ಷ ಯುವರಾಜ್, ರಾಜ್ಯ ಉಪಾಧ್ಯಕ್ಷ ವಿ.ಲೋಕೇಶ್, ಮಾತೃಭೂಮಿ ವೃದ್ಧಾಶ್ರಮದ ಮುಖ್ಯಸ್ಥ ನಾಗಣ್ಣ, ಕೆಆರ್‌ಎಸ್ ಪಕ್ಷದ ಮುರುಗೇಶ್, ಅಶ್ವತ್ ನೂರಾರು ಹೋರಾಟಗಾರರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಸಾಂಸ್ಕೃತಿ ಸೌರಭ ಕಾರ್ಯಕ್ರಮ ರದ್ದು

ಮೇಲುಕೋಟೆ, ಡಿ.31– ಕ್ಷೇತ್ರದ ಶಾಸಕರನ್ನು ಆಹ್ವಾನಿಸದೆ ಮೇಲುಕೋಟೆಯ ಪು.ತಿ.ನ ಕಲಾಮಂದಿರದಲ್ಲಿ ಆಯೋಜಿಸಿದ್ದ ಕನ್ನಡ ಸಂಸ್ಕೃತಿ ಇಲಾಖೆಯ ಸಾಂಸ್ಕೃತಿ ಸೌರಭ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ.



ಮಂಡ್ಯದ ಸಹಾಯಕ ನಿರ್ದೇಶಕ ಉದಯಕುಮಾರ್, ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರನ್ನು ಆಹ್ವಾನಿಸದೆ ಕನಿಷ್ಠ ಅವರ ಗಮನಕ್ಕೂ ತರದೆ ನಿರ್ಲಕ್ಷ್ಯಮಾಡಿ, ಮೇಲುಕೋಟೆಯಲ್ಲಿ ಡಿ.28ರಂದು ಪು.ತಿ.ನ ಕಲಾಮಂದಿರದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಕಾರ್ಯಕ್ರಮದ ಬಗ್ಗೆ ಯಾವುದೇ ಪ್ರಚಾರವಿ ಲ್ಲದೆ ತಮಗೆ ಬೇಕಾದ ಕಲಾವಿದರಿಗಷ್ಟೇ ಅವಕಾಶ ನೀಡಿ ಆಹ್ವಾನ ಪತ್ರಿಕೆ ಮಾಡಿದ್ದರು. ಜೊತೆಗೆ ವಿಶೇಷ ಕಾರ್ಯಕ್ರಮದ ಬಗ್ಗೆ ಮೇಲುಕೋಟೆಯಲ್ಲಿ ಪ್ರಚಾರವನ್ನೂ ಮಾಡಿರಲಿಲ್ಲ.

ಕರ್ನಾಟಕ ಸಂಭ್ರಮ–50ರ ಅಂಗವಾಗಿ ಸರ್ಕಾರ ರಾಜ್ಯದ ಪ್ರಮುಖ ಸ್ಥಳಗಳಲ್ಲಿ ಕಾರ್ಯಕ್ರಮ ನಡೆಸಲು ತೀರ್ಮಾನಿಸಿದ್ದ ಪರಿಣಾಮ ಮೇಲುಕೋಟೆಯಲ್ಲೂ ಕಾರ್ಯಕ್ರಮ ಆಯೋಜಿಸಲು ಕನ್ನಡ ಸಂಸ್ಕೃತಿ ಇಲಾಖೆ ಆದೇಶ ನೀಡಿತ್ತು. ಕಾರ್ಯಕ್ರಮ ಆಯೋಜನೆಗೂ ಮುನ್ನ ಸ್ಥಳೀಯ ಶಾಸಕರ ಗಮನಕ್ಕೆ ತಂದು ನಾಡು ನುಡಿಯ ಮಹತ್ವ ಬಿಂಬಿಸುವ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ಆಯೋಜಿಸಬೇಕಿದ್ದ ಅಧಿಕಾರಿಗಳು ಉಡಾಫೆ ಮಾಡಿ, ಆಹ್ವಾನ ಪತ್ರಿಕೆಯಲ್ಲೂ ಶಾಸಕರ ಹೆಸರನ್ನು ಮುದ್ರಿಸದೆ ಕರ್ತವ್ಯ ಲೋಪಗೊಳಿಸಿ ಕಾರ್ಯಕ್ರಮ ಆಯೋಜಿಸಿ ಕೊನೆಗಳಿಗೆಯಲ್ಲಿ ರದ್ದುಗೊಳಿಸಿರುವುದು ವಿವಾದ ಹುಟ್ಟುಹಾಕಿದೆ.

ಹೆಣ್ಣು, ಭೂಮಿತಾಯಿ ಸ್ವರ್ಗಕ್ಕಿಂತ ಮಿಗಿಲು

ಚಿನಕುರಳಿ, ಡಿ.31–ಜನ್ಮಕೊಟ್ಟ ಹೆಣ್ಣು ಮತ್ತು ಆಶ್ರಯಕೊಟ್ಟ ಭೂಮಿತಾಯಿ ಇವೆರಡು ಸ್ವರ್ಗಕ್ಕಿಂತ ಮಿಗಿಲಾದವು ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಜಯರಾಮ್ ಬಿ.ನೆಲ್ಲಿತ್ತಾಯ ಹೇಳಿದರು.

ತಾಲೂಕಿನ ಚಿನಕುರಳಿ ಗ್ರಾಮದ ಜಯಲಕ್ಷ್ಮಿ ಕಾಳೇಗೌಡ ಕಲ್ಯಾಣ ಮಂಟಪದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನವಿಕಾಶಸ ಕಾರ್ಯಕ್ರಮದ ನಡೆದ ತಾಲೂಕು ಮಟ್ಟದ 'ಮಹಿಳಾ ವಿಚಾರ ಗೋಷ್ಠಿ'ಯಲ್ಲಿ ಮಾತನಾಡಿದ ಅವರು, ಸಮಾಜ ಹಾಗೂ ಪ್ರತಿ ಕುಟುಂಬದಲ್ಲಿ ಹೆಣ್ಣಿಗೆ ಒಂದು ವಿಶೇಷ ಸ್ಥಾನಮಾನ ನೀಡಲಾಗಿದೆ. ಹೆಣ್ಣನ್ನು ಮನೆಯ ಗೃಹಲಕ್ಷ್ಮೀ ಎಂದು ಕರೆಯುತ್ತೇವೆ. ಪ್ರತಿ ಮನೆಗಳಲ್ಲೂ ಮಹಿಳೆ ವಿಶೇಷ ಜವಾಬ್ದಾರಿ ಹೊತ್ತು ನಿರ್ವಹಣೆ ಮಾಡುತ್ತಿದ್ದಾಳೆ ಎಂದು ಬಣ್ಣಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮಹಿಳಾ ಸಬಲೀಕರಣಕ್ಕೆ ಮುನ್ನುಡಿ ಬರೆದು ಕೆಲಸ ಮಾಡುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಲಕ್ಷಾಂತರ ಮಹಿಳೆಯರ ಆರ್ಥಿಕ ಸಬಲೀಕರಣ ಮಾಡಿದ್ದು, ಮಹಿಳೆಯರಿಗೆ ಸಾಲ ಸೌಲಭ್ಯ ನೀಡಿ ಪ್ರೋತ್ಸಾಹಿಸುವ ಮೂಲಕ ಮಹಿಳೆಯರು ಒಂದಲ್ಲಾ ಒಂದು ಉದ್ಯಮದಲ್ಲಿ ತೊಡಗಿಸಿಕೊಂಡು ಕೆಲಸ ಮಾಡಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಕಾರಿಯಾಗಿದೆ ಎಂದರು. ಜಿಪಂ ಮಾಜಿ ಸದಸ್ಯೆ ನಾಗಮ್ಮಪುಟ್ಟರಾಜು ಮಾತನಾಡಿದರು. ಸಮಾರಂಭದಲ್ಲಿ ಜಾನಪದ ವಿದ್ವಾಂಸೆ ಜಯಲಕ್ಷ್ಮೀ ಸೀತಾಪುರ, ಗ್ರಾಪಂ ಅಧ್ಯಕ್ಷೆ ಗಾಯತ್ರಿ ಕುಮಾರ್, ಜಿಪಂ ಮಾಜಿ ಸದಸ್ಯೆ ಶಾಂತಲಾ ರಾಮಕೃಷ್ಣೇಗೌಡ, ಧಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಯಶವಂತ್, ಪದಾಧಿಕಾರಿಗಳು ಹಲವರು ಭಾಗವಹಿಸಿದ್ದರು.



ನಾಳೆ ಸಾವಯವ ಸಿರಿಧಾನ್ಯ ಮೇಳ

ಮಂಡ್ಯ, ಡಿ.31–ಅಂತಾರಾಷ್ಟ್ರೀಯ ಸಾವಯವ ಸಿರಿಧಾನ್ಯ ಮೇಳವನ್ನು ಜ.2ರಂದು ನಗರದ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಿರಿಧಾನ್ಯ ಹಬ್ಬದ ಅಂಗವಾಗಿ ಅಂದು ಬೆಳಗ್ಗೆ 10 ಗಂಟೆಗೆ ಸಿರಿಧಾನ್ಯ ಪಾಕ ಸ್ಪರ್ಧೆ ಹಾಗೂ ಮಧ್ಯಾಹ್ನ 12 ಗಂಟೆಗೆ ರಾಗಿಮುದ್ದೆ, ನಾಟಿಕೋಳಿ ಸಾರು ಊಟದ ಸ್ಪರ್ಧೆ ಆಯೋಜಿಸಲಾಗಿದೆ. ಸಂಜೆ 4.30ಕ್ಕೆ ಗಾಯಕ ವಾಸುಕಿ ವೈಭವ್ ಹಾಡಿರುವ ಸಿರಿಧಾನ್ಯ ಗೀತೆ ಬಿಡುಗಡೆ, ನಂತರ ಗಾಯನ ರಸಸಂಜೆ ಕಾರ್ಯಕ್ರಮ ನಡೆಯಲಿದೆ.

ಸಾವಯವ ಸಿರಿಧಾನ್ಯಗಳಿಂದ ತಯಾರಿಸಿದ ಆಹಾರ ತಿನಿಸುಗಳನ್ನು ಸ್ಥಳದಲ್ಲೇ ತಯಾರಿಸಿ ಮಾರಾಟ ಮಾಡಲು ಮಳಿಗೆ ವ್ಯವಸ್ಥೆ, ಆಹಾರ ಮೇಳ ಆಯೋಜಿಸಲಾಗಿದ್ದು, ಕಾರ್ಯಕ್ರಮದಲ್ಲಿ ಮೈಸೂರಿನ ನಿವೃತ್ತ ಪ್ರಾಂಶುಪಾಲ ಪ್ರೊ.ಕೃಷ್ಣೇಗೌಡ ವಿಚಾರ ಮಂಡಣೆ ಮಾಡಲಿದ್ದಾರೆ.



ಪ್ರವಾಸಿ ತಾಣಗಳಿಗೆ ಪ್ರವಾಸಿಗರ ದಂಡು

ಶ್ರೀರಂಗಪಟ್ಟಣ, ಡಿ.31– ಹೊಸವರ್ಷ ಆಚರಣೆ ಹಿನ್ನೆಲೆಯಲ್ಲಿ ಭಾನುವಾರ ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಸ್ಥಾನ, ಗಂಜಾಂನ ನಿಮಿಷಾಂಬ ದೇವಸ್ಥಾನ, ಬೇಸಿಗೆ ಅರಮನೆ, ತಾಲೂಕಿನ ಕೆಆರ್‌ಎಸ್, ರಂಗನತಿಟ್ಟು ಸೇರಿದಂತೆ ಇತರ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿ ಕಂಡು ಬಂತು.

ಕೆಆರ್‌ಎಸ್‌ನ ಬೃಂದಾವನ ವೀಕ್ಷಣೆಗೆ ಸುಮಾರು 10 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಭೇಟಿ ನೀಡಿದರು. ಪಟ್ಟಣದ ರಂಗನಾಥ ಹಾಗೂ ನಿಮಿಷಾಂಬ ದೇವಾಲಯಗಳಿಗೆ ಸುಮಾರು 10 ರಿಂದ 15 ಸಾವಿರ ಭಕ್ತರು ಹಾಗೂ ಪ್ರವಾಸಿಗರು ಆಗಮಿಸಿ ದೇವರ ದರ್ಶನ ಪಡೆದಿದರು. ವಿದ್ಯಾರ್ಥಿಗಳು, ಓಂ ಶಕ್ತಿ ದೇವಾಲಯದಲ್ಲೂ ಭಕ್ತರ ಸಂಖ್ಯೆ ಹೆಚ್ಚಾಗಿ ಕಂಡುಬಂತು.

ಡಾ.ವಿಷ್ಣುವರ್ಧನ್‌ರ ಆದರ್ಶಗಳ ಪಾಲಿಸಲು ಅಭಿಮಾನಿಗಳಿಗೆ ಕಲಾವಿದ ಅನಿರುದ್ ಕರೆ



ಮೈಸೂರು, ಡಿ.31– ನಗರದ ಡಾ.ವಿಷ್ಣುವರ್ಧನ್ ಸ್ಮಾರಕ ಭವನದಲ್ಲಿ ಏರ್ಪಡಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಖ್ಯಾತ ಕಲಾವಿದರಾದ ಅನಿರುಧ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ವಿಷ್ಣುವರ್ಧನ್ ಅವರು ಕಲಾವಿದರಾಗಿ ಸಮಾಜ ಸೇವೆ ಮಾಡುತ್ತಿದ್ದರು. ಅವರು ಮಾಡಿದ ಉಪಕಾರಗಳನ್ನು ಯಾರಿಗೂ ಹೇಳುತ್ತಿರಲಿಲ್ಲ. ಬಡವರಿಗೆ, ಸಂಘ ಸಂಸ್ಥೆಗಳಿಗೆ ನೆರವಾಗಿದ್ದರು. ಅವರ ಆದರ್ಶಗಳನ್ನು ಅಭಿಮಾನಿಗಳು ಮತ್ತು ಸಾರ್ವಜನಿಕರು ಮಾದರಿಯಾಗಿಟ್ಟುಕೊಂಡು ಎಲ್ಲರಿಗೂ ನೆರವಾಗಬೇಕೆಂದು ಮನವಿ ಮಾಡಿದರು.

ರೋಟರಿ ಸಂಸ್ಥೆಯವರು ಮಾಡುತ್ತಿರುವ ಈ ಬೃಹತ್ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಜನ ಅಪಾರ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಉಚಿತವಾಗಿ ರಕ್ತದಾನ ಮಾಡುತ್ತಿದ್ದಾರೆ. ಸಂಗ್ರಹವಾದ ರಕ್ತವನ್ನು ಅಗತ್ಯವಿರುವವರಿಗೆ ಉಚಿತವಾಗಿ ನೀಡುತ್ತಿದ್ದಾರೆ. ಈ ಕಾರ್ಯ ಮಾಡುತ್ತಿರುವ ರೋಟರಿ ಸಂಸ್ಥೆಯ ಎಲ್ಲ ಪದಾಧಿಕಾರಿಗಳನ್ನು ಅಭಿನಂದಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯ ಜಿಲ್ಲಾ ಪಾಲಕರಾದ ರೊ.ವಿ. ಶ್ರೀನಿವಾಸ ಮೂರ್ತಿ, ಜಿಲ್ಲಾ ಪಾಲಕರಾದ ರೊಹೆಚ್.ಆರ್. ಕೇಶವ್, ಮಾಜಿ ಜಿಲ್ಲಾ ಪಾಲಕರಾದ ರೊ.ಬಿ. ಎಲ್.ನಾಗೇಂದ್ರ ಪ್ರಸಾದ್, ರೋಟರಿ ಪದಾಧಿಕಾರಿಗಳಾದ ರೊ.ಮುರುಳಿ ಮತ್ತು ರೊ.ಸೆಲ್ವಕುಮಾರ್ ಉಪಸ್ಥಿತರಿದ್ದರು. ಆರೋಗ್ಯ ತಪಾಸಣಾ ಶಿಬಿರದಲ್ಲಿ ಸಹಕರಿಸುತ್ತಿರುವ ಮೈಸೂರಿನ ಸುಯೋಗ್ ಆಸ್ಪತ್ರೆ, ಜೆಎಸ್‌ಎಸ್ ಆಸ್ಪತ್ರೆ, ರೆಡ್‌ಕ್ರಾಸ್ ಸಂಸ್ಥೆ, ನಾರಾಯಣ ಹೃದಯಾಲಯದ ಮುಖ್ಯಸ್ಥರನ್ನು ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ಕೊಡಗಿನ ಕುಟ್ಟದಲ್ಲಿ ನಿರ್ಮಾಣವಾಗುತ್ತಿದೆ ಶ್ರೀಕೃಷ್ಣನ ದೇವಸ್ಥಾನ

▸ ಕಾರ್ಕಳದ ಶಿಲ್ಪಿಗಳ ಕೈಚಳಕದಲ್ಲಿ ಮನಸೂರೆಗೊಳ್ಳಲಿದೆ ಕೃಷ್ಣಮಂದಿರ

▸ ನಾಲ್ಕು ದಶಕದ ಕನಸು ನನಸಾಗಿಸಲು ಪಣತೊಟ್ಟಿರುವ ಸಮಿತಿ



ಮೈಸೂರು, ಡಿ.31(ಪಿಎಂ)– ಶ್ರೀಕೃಷ್ಣ ಹಿಂದೂ ಧರ್ಮೀಯರ ಆರಾಧ್ಯ ದೈವ. ಇಂತಹ ದೈವಕ್ಕೊಂದು ವಿಶಿಷ್ಟ ದೇವಾಲಯವು ಕೊಡಗು–ಕೇರಳ ಗಡಿಭಾಗದ ಕುಟ್ಟ ಪಟ್ಟಣದ ಹೃದಯ ಭಾಗದಲ್ಲಿ ಆಕರ್ಷಕ ಶೈಲಿಯಲ್ಲಿ ನಿರ್ಮಾಣಗೊಳ್ಳುತ್ತಿದೆ.

ಧರ್ಮ ಮತ್ತು ನಿಷ್ಠೆಯ ಬದುಕಿನ ಪಾಠ ಹೇಳಿಕೊಟ್ಟ ದೈವವೆಂದು ಹೆಸರುವಾಸಿ ಆದ ಶ್ರೀಕೃಷ್ಣನಿಗೊಂದು ಗುಡಿ ಕಟ್ಟಿ ಪೂಜಿಸಿ ಆರಾಧಿಸಲು ಇಲ್ಲಿ ಸಿದ್ಧತೆ ನಡೆಯುತ್ತಿದೆ. ಕುಟ್ಟದ ಹೃದಯ ಭಾಗದಲ್ಲಿ ಇಂತಹ ಧಾರ್ಮಿಕ ಕೇಂದ್ರ ತಲೆ ಎತ್ತುತ್ತಿದೆ. ಇಲ್ಲಿನ ರಮಣೀಯ ನಿಸರ್ಗದ ನಡುವೆ ನಂದಕಿಶೋರನಿಗೊಂದು ದೇವಾಲಯ ಸ್ಥಾಪನೆಗೆ ಅವಿರತ ಶ್ರಮಿಸಲಾಗುತ್ತಿದೆ.

ಅಂದಾಜು ಮೂರೂವರೆ ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ದೇವಸ್ಥಾನ ಇದಾಗಿದ್ದು, ಕೇರಳ ಗಡಿಭಾಗವಾದ ಕುಟ್ಟ ಪಟ್ಟಣದಲ್ಲಿ ಸುಂದರವಾದ ಧಾರ್ಮಿಕ ತಾಣವೊಂದು ಶೀಘ್ರದಲ್ಲಿ ತಲೆ ಎತ್ತಲಿದೆ. ಕುಟ್ಟದ ಎತ್ತರ ಪ್ರದೇಶದಲ್ಲಿ ಸುಂದರ ಪ್ರಕೃತಿಯ ನಡುವೆ 1 ಎಕರೆ ವಿಸ್ತೀರ್ಣದಲ್ಲಿ ಈ ದೇವಾಲಯ ನಿರ್ಮಿಸುತ್ತಿದ್ದು, ಕಾಮಗಾರಿ ಭರದಿಂದ ಸಾಗಿದೆ.

ಕಳೆದ 40 ವರ್ಷಗಳ ಹಿಂದೆ ಸ್ಥಳೀಯ ದಾನಿಗಳು ನೀಡಿದ್ದ ಈ ಸ್ಥಳದಲ್ಲಿ ದೇವಸ್ಥಾನ ನಿರ್ಮಿಸಲು ಗ್ರಾಮಸ್ಥರು ತೀರ್ಮಾನಿಸಿದ್ದರು. ಇದೀಗ ಎಲ್ಲರೂ ಒಟ್ಟುಗೂಡಿ ಹಲವು ಸುತ್ತಿನ ಸಭೆಗಳನ್ನು ನಡೆಸಿ, ಒಂದು ಧಾರ್ಮಿಕ ಕೇಂದ್ರವಾಗಿ ಸದರಿ ಸ್ಥಳವನ್ನು ರೂಪಿಸುವ ಉದ್ದೇಶದಿಂದ ದೇವಸ್ಥಾನ ನಿರ್ಮಾಣ ಕೈಗೆತ್ತುಕೊಳ್ಳಲಾಗಿದೆ.



ನಿರ್ಮಾಣಗೊಳ್ಳುತ್ತಿರುವ ಶ್ರೀಕೃಷ್ಣ ದೇವಾಲಯದ ಮುಂದೆ ದೇವಸ್ಥಾನ ಸಮಿತಿ ಪದಾಧಿಕಾರಿಗಳು.

'ಇಲ್ಲಿ ನಾವು ತುಂಬ ವರ್ಷಗಳಿಂದ ದೇವಸ್ಥಾನ ಕಟ್ಟಲು ಮಾಡಿದ ಪ್ರಯತ್ನ ಇದೀಗ ಕೈಗೂಡಿದೆ. ಸ್ಥಳೀಯ ಜನತೆಯ ಸಹಕಾರದಿಂದ ದೇವಸ್ಥಾನ ನಿರ್ಮಿಸಲಾಗುತ್ತಿದೆ. ದಾನಿಗಳ ಸಹಕಾರ ಇನ್ನಷ್ಟು ಅಗತ್ಯವಿದ್ದು, ಕೃಷ್ಣನ ಭಕ್ತರು ಸಹಕಾರ ನೀಡಬೇಕು' ಎಂದು ಶ್ರೀಕೃಷ್ಣ ದೇವಸ್ಥಾನ ಸಮಿತಿ ಅಧ್ಯಕ್ಷ ಚೆಕ್ಕೆರ ಗಣಪತಿ ಮನವಿ ಮಾಡುತ್ತಾರೆ.

ಹಿರಿಯರ ಮಾರ್ಗದರ್ಶನದೊಂದಿಗೆ ಶ್ರೀಕೃಷ್ಣ ದೇವಾಲಯದ ಸಮಿತಿ ಉತ್ಸಾಹದಿಂದ ತಮ್ಮ ಕೈಯಿಂದಲೇ ಲಕ್ಷಾಂತ ಹಣವನ್ನು ದೇವಸ್ಥಾನ ನಿರ್ಮಾಣಕ್ಕೆ ವಿನಿಯೋಗಿಸಿದೆ. ಈ ಹಣದಿಂದ ನಿರ್ಮಾಣ ಕಾರ್ಯ ಯಶಸ್ವಿಯಾಗಿ ನಡೆಯುತ್ತಿದೆ. ನಿಗದಿತ ಸಮಯ ದೊಳಗೆ ದೇವಾಲಯದ ಲೋಕಾರ್ಪಣೆಗೆ ದೇವಸ್ಥಾನ ಸಮಿತಿಯು ಶ್ರಮ ವಹಿಸಿ ದುಡಿಯುತ್ತಿದೆ.

ಶ್ರೀಕೃಷ್ಣ ದೇವಸ್ಥಾನ ಸಮಿತಿ ಅಧ್ಯಕ್ಷ ಚೆಕ್ಕರೆ ಗಣಪತಿ, ಉಪಾಧ್ಯಕ್ಷ ತೀತಿರ ನರೇನ್ ಬಾಲಕೃಷ್ಣ, ಜಿಪಂ ಮಾಜಿ ಸದಸ್ಯೆಯೂ ಆದ ಕಾರ್ಯದರ್ಶಿ ಜೋಡು ಮಾಡ ಶೆರಿನ್ ಸುಬ್ಬಯ್ಯ, ಖಜಾಂಚಿ ದುಗಂಡ ರವಿ ನೇತೃತ್ವದಲ್ಲಿ ನಿರ್ದೇಶಕರಾದ ತೀತಿರ ಕುಶಾಲಪ್ಪ, ಮಚ್ಚಮಾಡ ಸುಬ್ರಮಣಿ, ತೀತಿರ ತೀರ್ಥ ಮಂಜುನಾಥ್, ಕಟ್ಟೇರ ರಮೇಶ್, ಮಚ್ಚಮಾಡ ಕಾಶಿ ಕಾರ್ಯಪ್ಪ, ಧ್ಯಾನ್ ದರ್ಶನ್, ಚಂದ್ರಕುಟ್ಟಿನ್, ಪ್ರಶಾಂತ್, ಜಾನ್ಸನ್, ಅಜ್ಜಿಕುಟೀರ ಬೋಪಣ್ಣ ಹಾಗೂ ಮುಕ್ಕಾಟೀರ ನವೀನ್ ದೇವಾಲಯ ನಿರ್ಮಾಣದ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದಾರೆ.

ಸಮಿತಿ ಉಪಾಧ್ಯಕ್ಷ ತೀತರ ನರೇನ್ ಬಾಲಕೃಷ್ಣ ಮಾತನಾಡಿ, 2024ರ ಮಾರ್ಚ್‌ಗೆ ದೇವಸ್ಥಾನ ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಕುಟ್ಟ ಭಾಗದಲ್ಲಿ ಸುಂದರ ಧಾರ್ಮಿಕ ಕೇಂದ್ರ ಇಲ್ಲದಿರುವ ಹಿನ್ನೆಲೆಯಲ್ಲಿ ಶ್ರೀಕೃಷ್ಣ ದೇವಾಲಯ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಈ ಭಾಗದ ಭಕ್ತರಿಗೆ ಶ್ರೀಕೃಷ್ಣ ದೇವಾಲಯ ದರ್ಶನ ಭಾಗ್ಯ ಶೀಘ್ರ ಲಭ್ಯವಾಗಲಿದೆ. ನುರಿತ ಶಿಲ್ಪಿಗಳಿಂದ ದೇವಸ್ಥಾನ ನಿರ್ಮಾಣ ನಡೆಯುತ್ತಿದೆ ಎಂದು ತಿಳಿಸಿದರು.

ಸಮಿತಿ ಕಾರ್ಯದರ್ಶಿ ಶರೀನ್ ಸುಬ್ಬಯ್ಯ ಮಾತನಾಡಿ, ಗ್ರಾಮಸ್ಥರು ಸೇರಿ ಸಮಿತಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದಾರೆ. ಈ ಭಾಗದಲ್ಲಿ ಹಿಂದೂ ಸಮುದಾಯದವರಿಗೆ ಧಾರ್ಮಿಕ ಕೇಂದ್ರಗಳು ಇರಲಿಲ್ಲ. ಹಾಗಾಗಿ ಈ ಕಾರ್ಯ ಕೈಗೆತ್ತಿಕೊಂಡಿದ್ದೇವೆ. ದೇವಸ್ಥಾನದ ನಿರ್ಮಾಣದಲ್ಲಿ ಕಾರ್ಕಳದ ಶಿಲ್ಪಿಗಳು ನಿರತರಾಗಿದ್ದಾರೆ. ವಿಶೇಷವಾಗಿ ಸ್ಥಳೀಯರು ಮತ್ತು ಸುತ್ತಮುತ್ತಲಿನವರು ಈ ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಕ್ಷೇತ್ರದ ಮಾಜಿ ಶಾಸಕ ಕೆ.ಜಿ. ಬೋಪಯ್ಯ, ಶಾಸಕ ಎ.ಎಸ್.ಪೊನ್ನಣ್ಣ ಹಾಗೂ ಸಂಸದ ಪ್ರತಾಪ್ ಸಿಂಹ ಅವರು ತಮ್ಮ ಅನುದಾನವನ್ನೂ ಕಲ್ಪಿಸಿದ್ದಾರೆ. ದೇವಸ್ಥಾನ ನಿರ್ಮಾಣ ಕಾರ್ಯದಲ್ಲಿ ಸಮಿತಿಯ 17 ಮಂದಿ ಒಮ್ಮತದಿಂದ ಕೆಲಸ ಮಾಡುತ್ತಿದ್ದೇವೆ. ದೇಣಿಗೆ ಸಂಬಂಧ ಪಾರದರ್ಶಕವಾಗಿ ಆಡಿಟ್ ವ್ಯವಸ್ಥೆ ಮಾಡಲಾಗಿದೆ. ಕೊಡಗು ಜಿಲ್ಲೆ ಮಾತ್ರವಲ್ಲದೆ, ಇಡೀ ರಾಜ್ಯದ ಕೃಷ್ಣನ ಭಕ್ತರು ತಮ್ಮ ಕೈಯಲಾದ ದೇಣಿಗೆ ನೀಡ ಬೇಕೆಂಬುದು ನಮ್ಮ ಅಪೇಕ್ಷೆಯಾಗಿದೆ ಎಂದರು.

ಕುವೆಂಪು ಸ್ಮರಣೆ: ಮತ ಮನುಜ ಮತವಾಗಲಿ ಪಥ ವಿಶ್ವಪಥವಾಗಲಿ

ಮೈಸೂರು, ಡಿ.31– ಪ್ರಸ್ತುತ ಸಮಾಜದಲ್ಲಿ ಇಂದು ಮತ ಮತ್ತು ಪಥದ ಅರಿವು ಹೆಚ್ಚು ಅವಶ್ಯಕ . ಕುವೆಂಪು ಅವರು ಮಾನವ ಕುಲಕ್ಕೆ ನೀಡಿದ ಆದರ್ಶಗಳು ಸರ್ವಕಾಲಿಕ. ಕುವೆಂಪುರವರ ವಿಶ್ವಮಾನವ ಸಂದೇಶವು ಇಂದು ಎಲ್ಲಾ ಮಾನವರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ನಂಜನಗೂಡಿನ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಾಲೇಜು ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷ ರಾವ್ ಪ್ರಸಾದ್ ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.



ವಿಶ್ವಮಾನವ ದಿನಾಚರಣೆಯ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಲಯನ್ ಸಿ.ಆರ್ ದಿನೇಶ್ ಮಾತನಾಡಿ, ಯಾವುದೇ ವ್ಯಕ್ತಿ ಜಾತಿಯಿಂದ ಮುಖ್ಯನಾಗಬಾರದು ನೈತಿಕ ವ್ಯಕ್ತಿತ್ವದಿಂದ ಮುಖ್ಯನಾಗಬೇಕು. ಬುದ್ಧ ಬಸವಣ್ಣನವರ ಹಾಗೆ ಸಮಾಜದಲ್ಲಿ ವ್ಯಕ್ತಿ ಸ್ವತಂತ್ರವಾಗಿ ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು. ಮಹಾರಾತ್ರಿ ನಾಟಕದಲ್ಲಿ ಬುದ್ಧರಾಗುವ ಹಾದಿಯತ್ತ ಹೊರಟ ಸಿದ್ದಾರ್ಥನಿಗೆ ಕಾಣಿಸಿದ ಚೆನ್ನ ನ ನಿದ್ರೆ ಮತ್ತು ಮಹರಾತ್ರಿಯ ಧ್ವನಿಯನ್ನು ಕುವೆಂಪುರವರ ದರ್ಶನದೊಂದಿಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ವರ್ಣಿಸಿದರು.

ಕನ್ನಡ ಉಪನ್ಯಾಸಕರಾದ ಡಾ. ಮಾಲತಿ ಮಾತನಾಡಿ, ವಿಶ್ವಮಾನವ ಸಂದೇಶದ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಆಂಗ್ಲ ಭಾಷೆಯ ಉಪನ್ಯಾಸಕರಾದ ಶ್ರೀರಂಗಸ್ವಾಮಿ ರವರು ರವಿಂದ್ರನಾಥ್ ಠಾಗೂರ್ ರವರ ಗೀತಾಂಜಲಿಯ ಪ್ರಭಾವ ಕುವೆಂಪುರವರ ಮೇಲೆ ಬೀರುವ ಮೂಲಕ ಅವರ ಅಪ್ರತಿಮ ಸಾಧನೆಗೆ ಕಾರಣವಾಯಿತು ಎಂದು ಹೇಳಿದರು.

ಉಪನ್ಯಾಸಕರಾದ ಅಶ್ವಥ್ ನಾರಾಯಣ ಗೌಡ, ಜುಡಿತ್ ಲಿಂಗಸ್ವಾಮಿ, ಸ್ವಾಮಿಗೌಡ, ನಾಗರಾಜು, ಮೀನಾ, ಡಾ. ಟಿ.ಕೆ. ರವಿ, ಸುಮಿತ್ರ, ಹರೀಶ್, ಮಲ್ಲಿಕಾರ್ಜುನ್ ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಯೊಬ್ಬರೂ ವಿಶ್ವಮಾನವರಾಗಬೇಕು

ಮೈಸೂರು, ಡಿ.31– ಹಿಮಾಲಯ ಪ್ರತಿಷ್ಠಾನ, ಯೂನಿವರ್ಸಲ್ ಅಕಾಡೆಮಿ ವತಿಯಿಂದ ಶುಕ್ರವಾರ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನ ಆಚರಿಸಲಾಯಿತು.

ಕುವೆಂಪುನಗರದ ವಿಶ್ವಮಾನವ ಜೋಡಿ ರಸ್ತೆಯಲ್ಲಿರುವ ಕುವೆಂಪು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸಮಾಜ ಸೇವಕ ಕೆ. ರಘುರಾಂ, ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಕುವೆಂಪು ಅವರ ವಿಶ್ವಮಾನವ ಸಂದೇಶ ಬಿಡುಗಡೆ ಮಾಡಿದರು. ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್. ಅನಂತ, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಎಚ್.ಕೆ. ರಾಮು, ಅರವಿಂದ ಶರ್ಮ ಇತರರು ಉಪಸ್ಥಿತರಿದ್ದರು.

ಯೂನಿವರ್ಸಲ್ ಅಕಾಡೆಮಿ ಅಧ್ಯಕ್ಷ ಪ್ರಕಾಶ್ ಜಿ.ಎಸ್. ಹಳ್ಳಿ ವಿಶ್ವಮಾನವ ಸಂದೇಶ ಬೋಧಿಸಿದರು.

ಮನುಷ್ಯಜಾತಿ ತಾನೊಂದೆ ವಲಂ ಎಂಬುದನ್ನು ನಿರಪಾಧಿಕವಾಗಿ ಸ್ವೀಕರಿಸಬೇಕು. ವರ್ಣಾಶ್ರಮವನ್ನು ತಿದ್ದುವ ಬದಲು ಪೂರ್ಣವಾಗಿ ತೊಲಗಿಸಬೇಕು. ಜಾತಿ ಪದ್ಧತಿ ವಿನಾಶಗೊಳಿಸಬೇಕು. ಮತ ತೊಲಗಿ, ಆಧ್ಯಾತ್ಮ ಮಾತ್ರ ವೈಜ್ಞಾನಿಕವಾಗಿ ತತ್ವ ಪಡೆಯಬೇಕು. ಮತ ಮನುಜ ಮತ, ಪಥ ವಿಶ್ವಪಥ, ಮನುಷ್ಯ ವಿಶ್ವಮಾನವನಾಗಬೇಕು ಎಂದು ಆಗ್ರಹಿಸಲಾಯಿತು.

ಮತ ಗುಂಪು ಕಟ್ಟುವ ವಿಷಯವಾಗಬಾರದು. ಯಾರೂ ಯಾವ ಒಂದು ಮತಕ್ಕೂ ಸೇರದೆ ಪ್ರತಿಯೊಬ್ಬರೂ ತಾನು ಕಂಡುಕೊಳ್ಳುವ ಮತಕ್ಕೆ ಮಾತ್ರ ಸೇರಬೇಕು. ಯಾವ ಗ್ರಂಥವೂ ಏಕೈಕ ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬರೂ ತಮಗೆ ಸಾಧ್ಯವಾದವುಗಳನ್ನು ಓದಿ, ತನ್ನ ದರ್ಶನವನ್ನು ತಾನೇ ನಿರ್ಣಯಿಸಿ, ಕಟ್ಟಿಕೊಳ್ಳಬೇಕು ಎಂದು ಒತ್ತಾಯಿಸಲಾಯಿತು.

ಹಿಮಾಲಯ ಪ್ರತಿಷ್ಠಾನ, ಯೂನಿವರ್ಸಲ್ ಅಕಾಡೆಮಿಯಿಂದ ಕುವೆಂಪು ಜನ್ಮದಿನ



ಒಂದನೇ ಪುಟದಿಂದ

ಹೊಸ ವರ್ಷಕ್ಕೆ ಅದ್ಧೂರಿ ಸ್ವಾಗತ

ಇದಕ್ಕೂ ಮುನ್ನ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಿದ್ದ 'ಕರ್ನಾಟಕ ಮತ್ತು ಆಂಗ್ಲ ಬ್ಯಾಂಡ್' ಕೇಳುಗರ ಎದೆಯಲ್ಲಿ ಸಂಗೀತದೋಕುಳಿ ಚೆಲ್ಲಿತು. ಒಂದು ಗಂಟೆ ಕಾಲ ನಡೆದ ಸಂಗೀತ ಪರಿಕರಗಳ ನಾದ-ನಿನಾದವು ಮೈಸೂರು ಸಾಂಸ್ಕೃತಿಕ ನಗರಿ ಎಂಬುದನ್ನು ಸಾಕ್ಷೀಕರಿಸಿತು. ಹಾಗೆಯೇ ನೂತನ ವರ್ಷಕ್ಕೆ ಸಂಗೀತದ ಮೂಲಕವೂ ಸ್ವಾಗತ ಕೋರಲಾಯಿತು.

ಹೊಸ ವರ್ಷಾಚರಣೆ ಕೇಂದ್ರವಾಗಿರುವ ಹೋಟೆಲ್ ಹಾಗೂ ಕ್ಲಬ್‌ಗಳಲ್ಲಿ ಮೋಜು-ಮಸ್ತಿಯೊಂದಿಗೆ 2024 ಅನ್ನು ವೆಲ್‌ಕಂ ಮಾಡಲಾಯಿತು. ಕಳೆದೊಂದು ವಾರದಿಂದಲೂ ವರ್ಷಾಚರಣೆಯ ಪೂರ್ವ ಸಿದ್ಧತೆ ನಡೆಸಿದ್ದ ನಗರದ 25ಕ್ಕೂ ಹೋಟೆಲ್‌ಗಳು, ಕ್ಲಬ್‌ಗಳಲ್ಲಿ ಕುಣಿದು ಕುಪ್ಪಳಿಸಿದ ಯುವ ಸಮೂಹ ಸಂತಸದ ಮತ್ತಿನಲ್ಲಿ ತೇಲಿದರು. ಬಗೆ ಬಗೆಯ ಖಾದ್ಯಗಳನ್ನು ಸವಿದು ಸಂಭ್ರಮಿಸಿದರು. ವರ್ಷಾಂತ್ಯದ ಸಾಲು ಸಾಲು ರಜೆಗಳಿಂದ ಭರ್ತಿಯಾಗಿದ್ದ ಹೋಟೆಲ್‌ಗಳು, ಪ್ರವಾಸಿ ಸ್ಥಳಗಳು ಮಸ್ತ್ ಮನರಂಜನೆಯ ತಾಣಗಳಾಗಿದ್ದವು. ಸಂಗೀತ ಸಂಜೆ, ಹಾಸ್ಯಗೋಷ್ಠಿ, ಪಾರ್ಟಿಯಲ್ಲೂಗಳು ಭರ್ಜರಿಯಾಗಿ ನಡೆದವು.

ಜನಜಾತ್ರೆ: 2023ನೇ ವರ್ಷದ ಕೊನೆ ದಿನವಾದ ಭಾನುವಾರ ಮೈಸೂರು ನಗರ ಪ್ರವಾಸಿಗರಿಂದ ಕಿಕ್ಕಿರಿದು ತುಂಬಿತ್ತು. ಕಳೆದ ಒಂದು ವಾರದಿಂದಲೂ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, ಬೆಳಗ್ಗಿನಿಂದಲೂ ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಕೆಆರ್‌ಎಸ್, ನಿಮಿಷಾಂಬ ಸೇರಿದಂತೆ ಬಹುತೇಕ ಪ್ರವಾಸಿ ತಾಣಗಳು ತುಂಬಿ ತುಳುಕುತ್ತಿದ್ದವು. ಸಂಜೆಯಾಗುತ್ತಿದ್ದಂತೆ ಹೋಟೆಲ್‌ಗಳತ್ತ ದಾಪಿಸಿದ ಪ್ರವಾಸಿಗರು ತಡರಾತ್ರಿಯವರೆಗೂ ಹೊಸ ವರ್ಷಾಚರಣೆಯ ಸಂತೋಷ ಕೂಟದಲ್ಲಿ ಪಾಲ್ಗೊಂಡು ಕಹಿ ನೆನಪುಗಳನ್ನು ಮರೆತು ಹೊಸ ಕನಸುಗಳತ್ತ ಹೆಜ್ಜೆ ಹಾಕಿದರು.

ಚಾಮುಂಡಿ ಬೆಟ್ಟಕ್ಕೆ ನಿರ್ಬಂಧ: ಹೊಸ ವರ್ಷದ ಸಂಭ್ರಮಾಚರಣೆಗಾಗಿ ರಾತ್ರಿ ವೇಳೆ ಚಾಮುಂಡಿಬೆಟ್ಟಕ್ಕೆ ಆಗಮಿಸುವವರಿಗೆ ಕಡಿವಾಣ ಹಾಕಲಾಗಿತ್ತು. ಸಂಜೆ 7 ಗಂಟೆಯಿಂದ ಚಾಮುಂಡಿ ಬೆಟ್ಟಕ್ಕೆ ಬೆಟ್ಟದ ನಿವಾಸಿಗಳನ್ನು ಹೊರತು ಪಡಿಸಿ ಪ್ರವಾಸಿಗರು ಹಾಗೂ ಹೊರಗಿನ ಜನರ ಪ್ರವೇಶಕ್ಕೆ ಕಡಿವಾಣ ಹಾಕಲಾಗಿತ್ತು.

ಭದ್ರತೆ: ಹೊಸ ವರ್ಷದ ಸಂಭ್ರಮದ ಸವಿಗಳಿಗೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಭದ್ರತೆ ಒದಗಿಸಲಾಗಿತ್ತು. ನಗರದ ಪ್ರಮುಖ ರಸ್ತೆಗಳಲ್ಲಿ ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ, 797 ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ, 12 ಸಿಎಆರ್ ತುಕಡಿ, 4 ಕೆಎಸ್‌ಆರ್‌ಪಿ ತುಕಡಿ, 4 ಕಮಾಂಡೋ ಪಡೆಯನ್ನು ಭದ್ರತಾ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಹಾಗೆಯೇ 330 ಸಿಸಿ ಕ್ಯಾಮರಾ ಮತ್ತು ಮಹಿಳೆಯರ ರಕ್ಷಣೆಗಾಗಿ ಚಾಮುಂಡಿ ಪಡೆಯ ಗಸ್ತು ನಿಯೋಜಿಸಲಾಗಿತ್ತು.

ಪಾರ್ಟಿಯಲ್ಲಿ ತೊಡಗಿದ್ದ ಮಹಿಳೆಯರ ರಕ್ಷಣೆಗೆ 8 ಚಾಮುಂಡಿ ಪಡೆ ಕಾರ್ಯ ನಿರ್ವಹಿಸಿದವು. ರಿಂಗ್ ರಸ್ತೆಯಲ್ಲಿ ಪುಂಡರ ಪುಂಡಾಟಿಕೆಗೆ ಕಡಿವಾಣ ಹಾಕಲು 12 ಗರುಡಾ ವಾಹನಗಳ ಗಸ್ತು ನಡೆಸಲು ನಿಯೋಜಿಸಲಾಗಿತ್ತು. ನಗರದ ಪ್ರಮುಖ ಕಡೆಗಳಲ್ಲಿ 30 ಚೆಕ್‌ಪೋಸ್ಟ್ ನಿರ್ಮಿಸಿ ತಪಾಸಣೆ ನಡೆಸಲಾಯಿತು.

ಹೊಸ ಕನಸುಗಳು, ಭರವಸೆಗಳಿಗಾಗಿ ಪ್ರಾರ್ಥನೆ...

ನೂತನ ಹೊಸ ವರ್ಷವು ಹೊಸ ಕನಸುಗಳು, ಹೊಸ ಭರವಸೆಗಳನ್ನು ಹೊತ್ತು ತರಲೆಂದು ಪ್ರಾರ್ಥಿಸುವವರಿಗಾಗಿ ಧಾರ್ಮಿಕ ಕ್ಷೇತ್ರಗಳು ಸಿದ್ಧವಾಗಿದ್ದು, ನಾಳೆ(ಜ.1) ಮುಂಜಾನೆಯಿಂದಲೇ ಭರ್ತಿಯಾಗಲಿವೆ.

ರಾತ್ರಿ ಮೋಜು-ಮಸ್ತಿಯೊಂದಿಗೆ ನೂತನ ವರ್ಷ ಸ್ವಾಗತಿಸಿದರೆ, ಧಾರ್ಮಿಕ ಕ್ಷೇತ್ರಗಳಲ್ಲಿ ವಿಶೇಷ ಪೂಜಾ ಕೈಂಕರ್ಯದ ಮೂಲಕ ಹೊಸ ವರ್ಷ ಸಿಹಿಯಾಗಿರಲೆಂದು ಪ್ರಾರ್ಥಿಸಲಾಗುವುದು. ಇದಕ್ಕಾಗಿ ಮೈಸೂರಿನಲ್ಲಿರುವ ಎಲ್ಲಾ ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳು, ವಿಹಾರಗಳು ಸಿದ್ಧವಾಗಿದ್ದು, ಧಾರ್ಮಿಕ ಕ್ಷೇತ್ರಗಳಿಗೆ ಜನಸಾಗರವೇ ಹರಿದುಬರುವ ಸಾಧ್ಯತೆ ಇದೆ.

ಅರಮನೆ ಫಲಪುಷ್ಪ ಪ್ರದರ್ಶನಕ್ಕೆ ತೆರೆ...

ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಹಿನ್ನೆಲೆಯಲ್ಲಿ ಡಿ.22ರಂದು ಮೈಸೂರು ಅರಮನೆ ಆವರಣದಲ್ಲಿ ಆರಂಭವಾಗಿದ್ದ ಫಲಪುಷ್ಪ ಪ್ರದರ್ಶನಕ್ಕೆ ಭಾನುವಾರ ತೆರೆ ಬಿದ್ದಿತು.

ಹೊಸ ವರ್ಷದ ಸಂಭ್ರಮಾಚರಣೆ ಭಾಗವಾಗಿ ಲಕ್ಷಾಂತರ ಮಂದಿ ಫಲಪುಷ್ಪ ಪ್ರದರ್ಶನ ವೀಕ್ಷಿಸಿ, ಪುಷ್ಪ ಕಲಾಕೃತಿಗಳನ್ನು ಕಣ್ತುಂಬಿಕೊಂಡರು. 9 ದಿನಗಳ ಫಲಪುಷ್ಪ ಪ್ರದರ್ಶನಕ್ಕೆ 5 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ. ಅದರಂತೆ ಅರಮನೆಗೆ 2 ಲಕ್ಷಕ್ಕೂ ಹೆಚ್ಚು ಮಂದಿ ಪ್ರವಾಸಿಗರು ಬಂದಿದ್ದು, ಅರಮನೆ ಆವರಣದಲ್ಲಿ ಜನ ಜಾತ್ರೆಯೇ ಸೇರಿದೆ. ಫಲಪುಷ್ಪ ಪ್ರದರ್ಶನಕ್ಕೆ ನಿರೀಕ್ಷೆಗೂ ಮೀರಿ ಪ್ರವಾಸಿಗರು ಬಂದಿದ್ದು, ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿದೆ ಎಂದು ಅರಮನೆ ಮಂಡಳಿ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸರ್ಕಾರ ಯಾವುದೇ ತನಿಖೆ ನಡೆಸಲಿ

ತನಿಖೆಗೆ ಆದೇಶಿಸಲು ಸರ್ಕಾರವು ಸ್ವತಂತ್ರವಾಗಿದೆ. ತನಿಖೆ ನಡೆಸುವಾಗ ಯಡಿಯೂರಪ್ಪ ಅಥವಾ ಅವರ ಕುಟುಂಬಕ್ಕೆ ಸರ್ಕಾರ ಯಾವುದೇ ಸಹಾನುಭೂತಿ ತೋರಿಸುವುದು ನನಗೆ ಇಷ್ಟವಿಲ್ಲ. ನಾನು ಯಾವುದೇ ತನಿಖೆಗೆ ಹೆದರುವುದಿಲ್ಲ ಎಂದು ಹೇಳಿದ್ದಾರೆ. ಕೋವಿಡ್ ಸಮಯದಲ್ಲಿ ಯಡಿಯೂರಪ್ಪ ಸರ್ಕಾರದ ಅಡಿಯಲ್ಲಿ 40,000 ಕೋಟಿ ರೂ. ದುರ್ಬಳಕೆಯಾಗಿದೆ ಎಂದು ಇತ್ತೀಚೆಗೆ ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದ್ದರು. ಪಕ್ಷದ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಜಿಲ್ಲೆಗೆ ಮೊದಲ ಭೇಟಿ ನೀಡಿದ ಸಂದರ್ಭದಲ್ಲಿ ಮಾತನಾಡಿದ ಅವರು, ಕೇಂದ್ರ ನಾಯಕತ್ವವು ಪ್ರಬಲವಾಗಿ ಅನುಮೋದಿಸಿದ ನನ್ನ ನೇಮಕಾತಿಯನ್ನು ವಿರೋಧಿಸುವ ಯಾರ ವಿರುದ್ಧವೂ ಕ್ರಮ ಕೈಗೊಳ್ಳುವುದಿಲ್ಲ. ಯಾರ ವಿರುದ್ಧವೂ ಕೇಂದ್ರ ನಾಯಕತ್ವಕ್ಕೆ ದೂರು ನೀಡಿಲ್ಲ ಎಂದರು. ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವುದು ಪಕ್ಷದ ಹೈಕಮಾಂಡ್ ವಿವೇಚನೆಗೆ ಬಿಟ್ಟ ವಿಚಾರ ಎಂದರು. ಜೆಡಿಎಸ್-ಬಿಜೆಪಿ ಮೈತ್ರಿಕೂಟವು ರಾಜ್ಯದ ಎಲ್ಲಾ 28 ಲೋಕಸಭಾ ಸ್ಥಾನಗಳನ್ನು ಗೆಲ್ಲಬೇಕೆಂದು ನಾನು ಬಯಸುತ್ತೇನೆ. ನನ್ನ ಗುರಿ ಸ್ಪಷ್ಟವಾಗಿದೆ. ನನಗೆ ನಮ್ಮ ಪಕ್ಷದ ನಾಯಕರ ಸಂಪೂರ್ಣ ಬೆಂಬಲ ಸಿಕ್ಕಿದೆ. ಆದರೆ ಕೆಲವರು ಕೆಲವು ಕಾರಣಗಳಿಂದ ಅಸಮಾಧಾನಗೊಂಡಿರಬಹುದು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡಲಾಗುವುದು. ಹಳೆಯದನ್ನೆಲ್ಲ ಬಿಟ್ಟು ಪೂರ್ಣ ಉತ್ಸಾಹದಿಂದ ಮುನ್ನಡೆಯಲು ನಾನು ಬಯಸುತ್ತೇನೆ ಎಂದಿದ್ದಾರೆ.

ಶಿಕ್ಷಣ ಇಲಾಖೆಯಿಂದ ಸುತ್ತೋಲೆ

ಸ್ವಚ್ಛತೆಯಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಖಂಡನೀಯ" ಎಂದಿದೆ. ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳಿಂದ ಶೌಚಾಲಯಗಳ ಸ್ವಚ್ಛತೆ ಕೈಗೊಳ್ಳುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಸರ್ಕಾರಿ ಮಾತ್ರವಲ್ಲದೇ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ ಸಹ ಇಂತಹ ಯಾವುದೇ ಪ್ರಕರಣಗಳು ಜರುಗಬಾರದು ಎಂದು ಸ್ಪಷ್ಟಪಡಿಸಿದೆ. ಅನುದಾನವನ್ನು ಪ್ರಥಮ ಪ್ರಾಶಸ್ತ್ಯದಲ್ಲಿ ಶೌಚಾಲಯಗಳ ಸ್ವಚ್ಛತಾ ಕಾರ್ಯಗಳಿಗೆ ಬಳಸಿಕೊಂಡು ಆಯಾ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ(ಎಸ್‌ಡಿಎಂಸಿ) ಸಹಕಾರದೊಂದಿಗೆ, ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಶೌಚಾಲಯಗಳ ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಬೇಕು. ಯಾವುದೇ ವಿದ್ಯಾರ್ಥಿಗಳು ಶಾಲಾ ಶೌಚಾಲಯಗಳಲ್ಲಿ ತೊಡಗಿಸಿಕೊಂಡಿರುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ನಿರ್ದೇಶನ ನೀಡಿದೆ.

ಶಾಲೆಗಳಿಗೆ ಕಾಲ-ಕಾಲಕ್ಕೆ ಖುದ್ದು ಭೇಟಿ ನೀಡಿ ಶಾಲೆಗಳಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಬಳಕೆಗೆ ಯೋಗ್ಯವಾದ ಶೌಚಾಲಯಗಳು ಲಭ್ಯವಿರುವುದನ್ನು ಪರಿಶೀಲಿಸಬೇಕು. ಶಾಲಾ ಅವಧಿಯಲ್ಲಿ ಈ ಶೌಚಾಲಯಗಳಿಗೆ ಬೀಗ ಹಾಕದೇ ವಿದ್ಯಾರ್ಥಿಗಳ ಉಪಯೋಗಕ್ಕೆ ಅವಕಾಶ ಕಲ್ಪಿಸಿರುವುದನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳಿ ಎಂದು ಶಾಲಾ ಉಸ್ತುವಾರಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೂ ಸೂಚಿಸಿದೆ. ಶಾಲೆಯ ಸಂದರ್ಶನದ ವೇಳೆಯಲ್ಲಿ ಒಂದು ವೇಳೆ ವಿದ್ಯಾರ್ಥಿಗಳನ್ನು ಶಾಲಾ ಶೌಚಾಲಯಗಳ ಸ್ವಚ್ಛತೆಯಲ್ಲಿ ತೊಡಗಿಸಿಕೊಂಡಿರುವುದು ಗಮನಕ್ಕೆ ಬಂದಲ್ಲಿ, ಅದಕ್ಕೆ ಕಾರಣರಾದವರ ಮೇಲೆ ತಕ್ಷಣವೇ ಕ್ರಮವಹಿಸಲು ಅನುವಾಗುವಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರಿಗೆ(ಆಡಳಿತ) ತಕ್ಷಣ ವರದಿ ಮಾಡಲು ಶಾಲಾ ಉಸ್ತುವಾರಿ ಹಾಗೂ ಮೇಲ್ವಿಚಾರಣೆಗೆ ಸಂಬಂಧಿಸಿದ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ತಿಳಿಸಿದೆ. ಒಂದು ವೇಳೆ ಪ್ರಕರಣಗಳು ಬೆಳಕಿಗೆ ಬಂದಲ್ಲಿ ತಪ್ಪಿತಸ್ಥರ ವಿರುದ್ಧ ಇಲಾಖಾ ವತಿಯಿಂದ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಜರುಗಿಸಲಾಗುವುದು. ಹಾಗೆಯೇ ಎಫ್‌ಐಆರ್ ಕೂಡ ದಾಖಲಿಸಲಾಗುವುದು ಎಂದು ಸುತ್ತೋಲೆಯಲ್ಲಿ ಎಚ್ಚರಿಕೆ ನೀಡಿದೆ.


ನನ್ನ ತುಳಿಯುವ ಪ್ರಯತ್ನವಿದು

ಮುಂದುವರೆಯಲಿ ಎಂದು ವ್ಯಂಗ್ಯೋಕ್ತಿಯಲ್ಲಿ ಸಲಹೆ ನೀಡಿದರು.

ನಮ್ಮ ಕುಟುಂಬ ಮುಗಿಸಲು ಸಿದ್ಧರಾಗಿದ್ದೀರಾ. ಆದರೆ ನಿಮಗೆ ಬಹಳಷ್ಟು ದಾರಿಗಳಿವೆ. ನನ್ನ ಸೋಲಿಸಲು ಮೈಸೂರು ಕೊಡಗು ಜನರು ಬಿಡುವುದಿಲ್ಲ. ತಾಯಿ ಚಾಮುಂಡಿ, ಕಾವೇರಿ ತಾಯಿ ಬಿಡಲ್ಲ ಎಂದು ಪ್ರತಾಪ್ ಸಿಂಹ ಸಿದ್ದರಾಮಯ್ಯಗೆ ಟಾಂಗ್ ಕೊಟ್ಟರು. ಬೆಳಗಾವಿಯಲ್ಲಿ ಹಿಂದುಳಿದ ಮಹಿಳೆಯನ್ನು ಬೆತ್ತಲೆ ಮಾಡಿ ಮೆರವಣಿಗೆ ಮಾಡಿದ್ದಾರೆ. ಆ ವಿಚಾರವನ್ನು ಮರೆ ಮಾಚಲು ನನ್ನ ಪಾರ್ಲಿಮೆಂಟ್‌ಗೆ ಪಾಸ್ ಕೊಟ್ಟ ವಿಚಾರ ಇಟ್ಟುಕೊಂಡು ಮಾತನಾಡಿದ್ದಾರೆ. 40 ವರ್ಷದ ರಾಜಕೀಯ ಅನುಭವವಿರುವ ಸಿದ್ದರಾಮಯ್ಯ ನನ್ನ ಹೆಸರು ಇಟ್ಟುಕೊಂಡು ರಾಜಕಾರಣ ಮಾಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಆಪಾದಿಸಿದರು.

ಆಧುನಿಕ ತಂತ್ರಜ್ಞಾನದಿಂದ ಕಾರ್ಮಿಕರ ಸ್ಥಿತಿ ಶೋಚನೀಯ

ಕಾರ್ಮಿಕರ ಸಮಾವೇಶದಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ರಾಜೀವ್ ಕಳವಳ



ಮೈಸೂರು, ಡಿ.31(ಜಿಎ)–ಆಧುನಿಕ ತಂತ್ರಜ್ಞಾನದಿಂದ ಕಾರ್ಮಿಕರ ಸ್ಥಿತಿ ಶೋಚನೀಯ ಹಂತಕ್ಕೆ ತಲುಪುತ್ತಿದೆ ಎಂದು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎಚ್.ವಿ.ರಾಜೀವ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಶಾರದ ವಿಲಾಸ ಶತಮಾನೋತ್ಸವ ಸಭಾಂಗಣದಲ್ಲಿ ಜೆ.ಕೆ.ಟೈರ್ಸ್ ಬದಲಿ ಕಾರ್ಮಿಕರ ಸಂಘ ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳ ಸಹಯೋಗದಲ್ಲಿ ನಡೆದ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆ ಮತ್ತು ಕಾರ್ಮಿಕರ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಮಿಕರು ಇಂದಿಗೂ ಉದ್ಯೋಗ ಭದ್ರತೆ, ಶ್ರಮಕ್ಕೆ ತಕ್ಕ ವೇತನ ಸೇರಿದಂತೆ ಅನೇಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ತಂತ್ರಜ್ಞಾನ ಅವಲಂಬಿತ ಕಾರ್ಖಾನೆಗಳಲ್ಲಿ ಕಾರ್ಮಿಕರನ್ನು ಸರಿಯಾಗಿ ನಡೆಸಿಕೊಳ್ಳುವುದಿಲ್ಲ. ಇದರ ವಿರುದ್ಧ ಸಂಘಟಿತರಾಗಿ ಪ್ರಾಮಾಣಿಕ ಹೋರಾಟ ನಡೆಸಬೇಕು ಎಂದರು.

ಕಾರ್ಮಿಕ ಸಂಘಟನೆಗಳು ದುರ್ಬಲವಾಗುತ್ತಿರುವ ಸಂದರ್ಭದಲ್ಲಿ ಪಕ್ಷಾತೀತವಾಗಿ ಹೋರಾಟ ನಡೆಸಿ ಕಾರ್ಮಿಕರ ಹಿತ ಕಾಯಬೇಕು. ದುಡಿಯುವ ವರ್ಗಗಳ ಹಕ್ಕುಗಳ ರಕ್ಷಣೆಗಾಗಿ ಕಾರ್ಮಿಕರ ಸಂಘಟನೆಗಳು ಒಗ್ಗಟ್ಟಾಗಿರಬೇಕು. ಧರ್ಮ–ಜಾತಿ–ವರ್ಗಗಳಾಗಿ ಒಡೆದು ಹೋದರೆ ಕಾರ್ಮಿಕರ ಶಕ್ತಿ ಕುಂದಲಿದೆ. ಇದರಿಂದ ಅಧಿಕಾರಸ್ಥರಿಗೆ ಲಾಭವಾಗಲಿದೆ ಎಂದು ಅವರು ತಿಳಿಸಿದರು.

ನೈಜ ಫಲಾನುಭವಿಗಳಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವುದು ಪ್ರತಿಯೊಬ್ಬ ಕಾರ್ಮಿಕನ ಕರ್ತವ್ಯ. ಆದರೆ, ಕೆಲವು ತಮ್ಮ ಕುಟುಂಬಸ್ಥರಿಗೆ ಸವಲತ್ತುಗಳನ್ನು ದೊರೆಯುವಂತೆ ಮಾಡುವ ಮೂಲಕ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಇಂತಹವರಿಂದ ಒಳ್ಳೆಯ ಯೋಜನೆಗಳು ನೈಜ ಫಲಾನುಭವಿಗಳಿಗೆ ತಲುಪದೇ ವಿಫಲವಾಗಲಿವೆ ಎಂದು ಬೇಸರ ವ್ಯಕ್ತಪಡಿಸಿದರು.

ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿದ ರಾಜ್ಯ ಕಾರ್ಮಿಕ ಇಲಾಖೆಯ ಜಂಟಿ ಆಯುಕ್ತ ಎಸ್.ಬಿ.ರವಿಕುಮಾರ್ ಮಾತನಾಡಿ, ರೈತರು, ಸೈನಿಕರು, ಕಾರ್ಮಿಕರು ದೇಶದ ಬೆನ್ನೆಲುಬು. ದೇಶದ ಅಭಿವೃದ್ಧಿಯಲ್ಲಿ ಹೆಚ್ಚು ಶ್ರಮ ವಹಿಸಿರುವುದು ಕಾರ್ಮಿಕರು. ಹೀಗಾಗಿ ಕಾರ್ಮಿಕರು ಇಲ್ಲದಿದ್ದರೆ ದೇಶದ ಅಭಿವೃದ್ಧಿ ಕ್ಷೀಣ. ಈ ಇಲಾಖೆಯಲ್ಲಿ ನನಗೆ ಕೆಲಸ ಮಾಡಲು ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ ಎಂದರು.

ಕೈಗಾರಿಕೆಗಳ ವಿವಾದಗಳನ್ನು ಪರಸ್ಪರ ಮಾತುಕತೆಯ ಮೂಲಕ ಪರಿಹಾರ ಕಂಡುಕೊಳ್ಳುವುದು ಸೂಕ್ತ. ಕಾರ್ಮಿಕರ ಕಾನೂನು ಗಟ್ಟಿಯಾಗಿರಬಹುದು. ಆದರೆ, ಕಾನೂನಿನ ಹೋರಾಟ ನಡೆಸುವಾಗ ಅಡತಡೆಗಳು ಹೆಚ್ಚಿರಲಿವೆ. ಆದ್ದರಿಂದ ರಾಜೀ ಸಂಧಾನದ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಉತ್ತಮ. ಕಾಯ್ದೆ, ಕಾನೂನುಗಳಿಂದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಕಷ್ಟ. ಕಾನೂನಿನ ಜೊತೆಗೆ ಮಾನವೀಯತೆ ಇರಬೇಕು ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ಜೆ.ಕೆ.ಟೈರ್ಸ್ ಬದಲಿ ಕಾರ್ಮಿಕರ ಸಂಘದ ಗೌರವಾಧ್ಯಕ್ಷ ಪ್ರಮೋದ್ ಚಿಕ್ಕಮಣ್ಣೂರ್ ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಜಿ.ಎನ್.ಗಂಗಾಧರ ಸ್ವಾಮಿ, ಮಂಡ್ಯ ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್, ಚಾಮರಾಜನಗರ ಕಾರ್ಮಿಕ ಅಧಿಕಾರಿ ಎಂ.ಸವಿತ ಮತ್ತಿತರರು ಉಪಸ್ಥಿತರಿದ್ದರು.

> ಇಲಾಖೆಯ ಸೌಲಭ್ಯಗಳು ಹೆಚ್ಚಾದಂತೆ ಕಾರ್ಮಿಕರ ಸಂಘಟನೆಗಳು ಹೆಚ್ಚಾಗುತ್ತಿವೆ. ಕೆಲ ಸಂಘಟನೆಗಳು ಕಾರ್ಮಿಕರ ನ್ಯಾಯಕ್ಕಾಗಿ ಪ್ರಾಮಾಣಿಕ ಹೋರಾಟ ನಡೆಸುತ್ತಿವೆ. ಆದರೆ, ಇನ್ನೂ ಕೆಲ ಸಂಘಟನೆಗಳ ಉದ್ದೇಶಗಳಲ್ಲಿ ನೈಜತೆ ಇರುವುದಿಲ್ಲ. ಈಚೆಗೆ ತಿಂಗಳಿಗೆ ನಾಲ್ಕೈದು ಸಂಘಟನೆಗಳು ನೋಂದಣಿಯಾಗುತ್ತಿವೆ. ಆದರೆ, ಭಿನ್ನಾಭಿಪ್ರಾಯದಿಂದ ಸಂಘಟನೆಗಳು ಒಡೆದು ಹೋಗುತ್ತವೆ. ಇದು ಅಧಿಕಾರಿಗಳಿಗೆ ಬೇಸರ ಉಂಟು ಮಾಡಲಿದೆ. ಕಾರ್ಮಿಕರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿ ಇಲಾಖೆಯು ಕಾರ್ಮಿಕರ ಹಕ್ಕುಗಳನ್ನು ಕಾಪಾಡಲಿದೆ.
>
> - ನಾಜಿಯಾ ಸುಲ್ತಾನ್.
> ಕಾರ್ಮಿಕ ಅಧಿಕಾರಿ, ಮೈಸೂರು ವಿಭಾಗ

ಬಾಲ್ಯದಲ್ಲೇ ರಂಗಭೂಮಿಯಲ್ಲಿ ತೊಡಗಿಸಿಕೊಂಡರೆ ಮಕ್ಕಳ ವ್ಯಕ್ತಿತ್ವ ವಿಕಸನವಾಗುತ್ತದೆ: ರಾಜಶೇಖರ ಕದಂಬ



ಮೈಸೂರು, ಡಿ.31(ಜಿಎ)–ಮಕ್ಕಳು ಹೆಚ್ಚು ರಂಗಭೂಮಿಯಲ್ಲಿ ತೊಡಗಿಸಿಕೊಂಡರೆ ಅವರ ಆಲೋಚನಾ ಕ್ರಮ ಬದಲಾಗುತ್ತದೆ. ವೇದಿಕೆ ಭಯ ಹೋಗುತ್ತದೆ. ನಾಯಕತ್ವ ಗುಣ ಇಮ್ಮಡಿ ಆಗುತ್ತದೆ ಎಂದು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ತಿಳಿಸಿದರು.

ನಗರದ ಕಿರುರಂಗಮಂದಿರದಲ್ಲಿ ಸಂಚಲನ ಮೈಸೂರು ವತಿಯಿಂದ ನಡೆದ ಸಂಚಲನ ಕುಣಿಯೋಣು ಬಾರಾ 6 ತಿಂಗಳ ವಾರಾಂತ್ಯ ಮಕ್ಕಳ ರಂಗ ತರಬೇತಿ ಶಿಬಿರದ–2023ರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬಾಲ್ಯದಲ್ಲೇ ಮಕ್ಕಳಿಗೆ ರಂಗಭೂಮಿ ಪರಿಚಯ ಮಾಡಿದರೆ ಅವರ ಸಮಗ್ರ ವ್ಯಕ್ತಿತ್ವ ವಿಕಸನವಾಗುತ್ತದೆ. ಆರಂಭದಲ್ಲೇ ಮಕ್ಕಳಿಗೆ ರಂಗಭೂಮಿ ತರಬೇತಿ ನೀಡಬೇಕು. ಜೀವನವನ್ನು ಆತ್ಮವಿಶ್ವಾಸದಿಂದ ಕಳೆಯಲು ಧೈರ್ಯ ಬರುತ್ತದೆ. ಹಾಗಾಗಿ ಮಕ್ಕಳಿಗೆ ರಂಗಶಿಕ್ಷಣ ಸಿಗಬೇಕು. ಆದ್ದರಿಂದ ಪೋಷಕರು ರಂಗಶಿಕ್ಷಣ ಕೊಡಿಸಬೇಕು. ಮಕ್ಕಳ ರಂಗಭೂಮಿ ಬೆಳೆಯಲು ಸಂಚಲನ ಶ್ರಮಿಸುತ್ತಿದೆ. ಇಂತಹ ಸಂಘಟನೆಗಳಿಗೆ ಎಲ್ಲರೂ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.

ಸಂಚಲನ ಮೈಸೂರು ಅಧ್ಯಕ್ಷ ದೀಪಕ್ ಮಾತನಾಡಿ, ನಿರಂತರವಾಗಿ ನಮ್ಮ ತಂಡದಿಂದ 6 ತಿಂಗಳ ಕಾಲ ರಂಗ ತರಬೇತಿ ನೀಡಲಾಯಿತು. ಶನಿವಾರ, ಭಾನುವಾರ ಮಕ್ಕಳಿಗೆ ತರಬೇತಿ ನೀಡಲಾಗುತ್ತಿತ್ತು. ಇದರಿಂದ ಮಕ್ಕಳ ಧ್ವನಿ, ಆಲೋಚನಾ ಕ್ರಮ, ಭಾಷೆ ಎಲ್ಲವೂ ಬದಲಾಯಿತು. ಇದಕ್ಕೆಲ್ಲಾ ರಂಗಭೂಮಿಯೇ ಕಾರಣ. ಪೋಷಕರು ಅಂಕದ ಹಿಂದೆ ಓಡುವ ಬದಲು, ಮಕ್ಕಳಿಗೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಲು ಅವಕಾಶ ನೀಡಬೇಕು ಎಂದರು.

ಈ ವೇಳೆ ಲೀಲಾ ಗರಡಿ ರಚನೆಯ ಅಶೋಕ್ ನೀನಾಸಂ ನಿರ್ದೇಶನದ 'ಲಂಬಕರ್ಣನ ಉಷ್ಣೀಶ ಹಾಗೂ ಸ್ದರ್ ಹಶ್ಮಿ ರಚನೆಯ ಭಾವನಾ ಎಂ.ಎಚ್. ನಿರ್ದೇಶನದ 'ಕೆಂಪು ಹೂ' ಪ್ರದರ್ಶನಗೊಂಡಿತು.

ಡಯಟ್‌ನ ಉಪನ್ಯಾಸಕಿ ಸವಿತ ಕೆ., ಮಾನಸ ಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕ ನವೀನ ಎನ್., ಯುವರಂಗಕರ್ಮಿ ತ್ಯಾಗರಾಜು ಸೇರಿದಂತೆ ಇತರರು ಇದ್ದರು.

ಬಿಎಚ್‌ಯು ಕ್ಯಾಂಪಸ್‌ನಲ್ಲಿ ಐಐಟಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಮೂವರ ಬಂಧನ

ವಾರಣಾಸಿ, ಡಿ.31– ಬನಾರಸ್ ಹಿಂದೂ ವಿವಿ ಆವರಣದಲ್ಲಿ ಐಐಟಿ ವಿದ್ಯಾರ್ಥಿನಿ ಮೇಲೆ ನಡೆದಿದ್ದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ವಾರಣಾಸಿ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಬಂಧಿತರನ್ನು ಕುನಾಲ್ ಪಾಂಡೆ, ಆನಂದ್ ಅಲಿಯಾಸ್ ಅಭಿಷೇಕ್ ಚೌಹಾಣ್ ಹಾಗೂ ಸಕ್ಷಮ್ ಪಟೇಲ್ ಎಂದು ಗುರುತಿಸಲಾಗಿದೆ ಎಂದು ಲಂಕಾ ಪೊಲೀಸ್ ಠಾಣೆಯ ಎಸ್‌ಎಚ್‌ಒ ಶಿವಕಾಂತ್ ಮಿಶ್ರಾ ತಿಳಿಸಿದ್ದಾರೆ.

ಏನಿದು ಘಟನೆ?: ದೂರುದಾರರ ಪ್ರಕಾರ, ನವೆಂಬರ್ 1ರ ರಾತ್ರಿ ಅತ್ಯಾಚಾರ ನಡೆದಿತ್ತು. ಸಂತ್ರಸ್ತೆ ತನ್ನ ಸ್ನೇಹಿತನೊಂದಿಗೆ ಹಾಸ್ಟೆಲ್‌ನಿಂದ ಹೊರಗೆ ಹೋಗಿದ್ದಳು. ಆಗ ಬೈಕ್‌ನಲ್ಲಿ ಬಂದ ಮೂವರು ವ್ಯಕ್ತಿಗಳು, ಸ್ನೇಹಿತನಿಂದ ಬೇರ್ಪಡಿಸಿ ಅವಳನ್ನು ಬಲವಂತವಾಗಿ ಕರೆದೊಯ್ದು ಅತ್ಯಾಚಾರ ವೆಸಗಿದ್ದರು. ಬಳಿಕ ಆರೋಪಿಗಳು ಆಕೆಯನ್ನು ವಿವಸ್ತ್ರಗೊಳಿಸಿ, ವಿಡಿಯೊ ಮಾಡಿ ಫೋಟೋ ತೆಗೆದಿದ್ದಾರೆ. ಸುಮಾರು 15 ನಿಮಿಷಗಳ ನಂತರ ಆಕೆಯ ಫೋನ್ ನಂಬರ್ ತೆಗೆದುಕೊಂಡು ಹೋಗಲು ಬಿಟ್ಟರು ಎಂದು ದೂರುದಾರರು ತಿಳಿಸಿದ್ದಾರೆ.


ಸಂತ್ರಸ್ತೆಯ ದೂರಿನ ಆಧಾರದ ಮೇಲೆ, ಐಪಿಸಿಯ ಸೆಕ್ಷನ್ 354 (ಮಹಿಳೆ ಮೇಲೆ ದೌರ್ಜನ್ಯ), ಸಾಮೂಹಿಕ ಅತ್ಯಾಚಾರ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಲಂಕಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿಯಿಂದ ರಾತ್ರಿ ಪಾಳಿ ಚಾಲಕರಿಗೆ ಥರ್ಮೋ ಫ್ಲಾಸ್ಕ್

ಬೆಂಗಳೂರು, ಡಿ.31– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಪ್ರಯಾಣಿಕರ ಸುರಕ್ಷತೆಗಾಗಿ ಮತ್ತೊಂದು ಪರಿಣಾಮಕಾರಿ ಕ್ರಮಕ್ಕೆ ಮುಂದಾಗಿದ್ದು, ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುವ ಅಥವಾ ಚಾಲನೆ ಮಾಡುವ ಚಾಲಕರಿಗೆ ಉತ್ತಮ ಗುಣಮಟ್ಟದ 500 ಮಿಲಿಯ ಥರ್ಮೋ ಫ್ಲಾಸ್ಕ್ ನೀಡಲು ಮುಂದಾಗಿದೆ. ನಿಗಮದ 1,600 ಬಸ್‌ಗಳು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತವೆ. ಇತ್ತೀಚೆಗೆ, ನಡೆಸಿದ ಅಧ್ಯಯನದ ಪ್ರಕಾರ ನಿಗಮದ ವಾಹನಗಳು ರಾತ್ರಿ ವೇಳೆ ಕಾರ್ಯಾಚರಣೆಯಲ್ಲಿದ್ದಾಗ ಬೆಳಗಿನ ಜಾವ 3 ರಿಂದ 4 ಗಂಟೆಯ ಸಮಯದಲ್ಲಿ ಹೆಚ್ಚು ಅಪಘಾತಕ್ಕೆ ಒಳಪಟ್ಟಿರುವುದು ತಿಳಿದುಬಂದಿದೆ. ಈ ಹಿನ್ನೆಲೆ, ನಿಗಮದ ಪ್ರಯಾಣಿಕರು ಹಾಗೂ ಸಿಬ್ಬಂದಿ ಸುರಕ್ಷತೆಯು ಪ್ರಥಮ ಆದ್ಯತೆಯಾಗಿದ್ದು, ಆ ನಿಟ್ಟಿನಲ್ಲಿ ರಾತ್ರಿ ವೇಳೆ, ಬಸ್‌ಗಳ ಕಾರ್ಯಾಚರಣೆ ಸಮಯದಲ್ಲಿ ಚಾಲಕರು ಸುರಕ್ಷಿತವಾಗಿ ವಾಹನ ಚಾಲನೆ ಮಾಡುವ ಅವಶ್ಯಕತೆ ಇರುವುದರಿಂದ, ಅವರ ಕಾರ್ಯ ಕ್ಷಮತೆಯನ್ನು ಉತ್ತಮಪಡಿಸುವ ಸಲುವಾಗಿ ಆ ಅವಧಿಯಲ್ಲಿ ರಿಫ್ರೆಶ್ ಆಗಲು ಕಾಫಿ–ಟೀ ಸೇವಿಸಿ (ಆ ಸಮಯದಲ್ಲಿ ಮಾರ್ಗ ಮಧ್ಯದಲ್ಲಿ ಯಾವುದೇ ಹೋಟೆಲುಗಳ ಲಭ್ಯತೆಯು ಇರದ ಕಾರಣ) ವಾಹನವನ್ನು ಸುರಕ್ಷಿತವಾಗಿ ಚಾಲನೆ ಮಾಡಲು ಚಾಲಕರಿಗೆ ಉತ್ತಮ ಗುಣಮಟ್ಟದ 500 ಮಿಲಿಯ ಥರ್ಮೋ ಫ್ಲಾಸ್ಕ್ ಅನ್ನು 1,600 ಬಸ್‌ಗಳಿಗೆ ಒದಗಿಸಲಾಗಿದೆ ಎಂದು ನಿಗಮ ತಿಳಿಸಿದೆ. ಈ ಕ್ರಮದಿಂದಾಗಿ ನಿಗಮದ ಚಾಲಕರುಗಳು ರಾತ್ರಿ ವೇಳೆಯಲ್ಲಿ ವಾಹನಗಳು ನಿಲ್ಲಿಸಿದ ಹೋಟೆಲ್ ಇತ್ಯಾದಿ ಸ್ಥಳಗಳಿಂದ ಟೀ/ಕಾಫಿಯನ್ನು ಫ್ಲಾಸ್ಕ್‌ನಲ್ಲಿ ಸಂಗ್ರಹಿಸಿಕೊಂಡು, ಬೆಳಗಿನ ಜಾವದಲ್ಲಿ ಬಳಸಿ ಸುರಕ್ಷತೆಯಿಂದ ವಾಹನವನ್ನು ಚಾಲನೆ ಮಾಡಿ ಪ್ರಯಾಣಿಕರನ್ನು ಅವರವರ ಗಮ್ಯ ಸ್ಥಳಕ್ಕೆ ಸುರಕ್ಷಿತವಾಗಿ ತಲುಪಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಹೇಳಿದೆ.



ಅಯೋಧ್ಯ ಶ್ರೀ ರಾಮ ಜನ್ಮಭೂಮಿಯ ತೀರ್ಥಕ್ಷೇತ್ರ ಟ್ರಸ್ಟ್ ವತಿಯಿಂದ ಬಂದ ಮಂತ್ರಾಕ್ಷತೆಯನ್ನು ಮನೆಮನೆಗೂ ತಲುಪಿಸುವ ಸಲುವಾಗಿ ಶ್ರೀ ಕೃಷ್ಣಧಾಮ ದೇವಸ್ಥಾನದಿಂದ ಗಂಗೋತ್ರಿ ಬಡಾವಣೆಯ ಪ್ರಸನ್ನ ಗಣಪತಿ ದೇವಸ್ಥಾನಕ್ಕೆ ತರಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಕಾರ್ಪೊರೇಟರ್ ವೇದಾವತಿ ಶಿವಶಂಕರ್, ವಿಎಚ್‌ಪಿ ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್, ರಾಜ್ಯ ಸಹಕಾರ ಪ್ರಕೋಷ್ಟದ ಸದಸ್ಯ ಶ್ರೀನಿವಾಸ್, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ರಮೇಶ್, ವಾರ್ಡ್ ಅಧ್ಯಕ್ಷ ಸೋಮಶೇಖರ್ ರಾಜೇ ಅರಸ್, ಈರಣ್ಣ ರಘು, ಭದ್ರೇಗೌಡ, ವೆಂಕಟೇಶಯ್ಯ, ಜಗದೀಶ್, ಸಂಗೀತ್ ಕುಮಾರ್, ವೇದಮೂರ್ತಿ, ಮೀನಮ್ಮ, ಮೀನಾಕ್ಷಿ, ಜಯಲಕ್ಷ್ಮಿ, ಭಾಗ್ಯಮ್ಮ, ಆಶಾ ಭಟ್, ತೇಜಸ್ವಿನಿ, ಟೀನಾ, ಪಂಕಜ, ಸತ್ಯಮ್ಮ, ನಾಗಲತಾ, ಪುಷ್ಪ, ರಶ್ಮಿ, ಸರ್ವ ಮಂಗಳ, ಸುಷ್ಮಾ ಇನ್ನಿತರರಿದ್ದರು.



ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನವನ್ನು ಜೆ.ಕೆ. ಟೈರ್ಸ್ ವಿಕ್ರಾಂತ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದಿಂದ ಆಚರಿಸಲಾಯಿತು. ಈ ವೇಳೆ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ಕುಮಾರ್, ವಿಷಕಂಠೇಗೌಡ ಅವರನ್ನು ಸನ್ಮಾನಿಸಲಾಯಿತು. ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಶಿವಪ್ಪ ಪಟ್ಟಾಭಿ ರಮೇಶ್ ಹಾಗೂ ಸಂಘದ ಸದಸ್ಯರು ಭಾಗವಹಿಸಿದ್ದರು.

ಮುಂಬೈನಲ್ಲಿ ಅಗ್ನಿ ಅವಘಡ: 6 ಮಂದಿ ಸಜೀವ ದಹನ

ಮುಂಬೈ, ಡಿ.31– ಮಹಾರಾಷ್ಟ್ರದ ಗ್ಲೌಸ್ ಕಾರ್ಖಾನೆಯೊಂದರಲ್ಲಿ ಭಾನುವಾರ ಬೆಳ್ಳಂಬೆಳಿಗ್ಗೆ ಸಂಭವಿಸಿರುವ ಭಾರಿ ಅಗ್ನಿ ಅವಘಡದಲ್ಲಿ ಆರು ಮಂದಿ ಸಜೀವ ದಹನವಾಗಿರುವ ಘಟನೆ ನಡೆದಿದೆ. ಇಂದು ಬೆಳಗಿನ 2 ಗಂಟೆಯ ಸುಮಾರಿಗೆ ಅಗ್ನಿ ಅವಘಡ ಸಂಭವಿಸಿದೆ. ಈ ವೇಳೆ ಕಾರ್ಖಾನೆಯ ಒಳಗೆ ಸಿಲುಕಿದ್ದ 6 ಜನ ಸಾವಿಗೀಡಾಗಿದ್ದಾರೆ.

ಕೂಡಲೇ ಆವರಣದೊಳಗೆ ಮಲಗಿದ್ದ ಕಾರ್ಮಿಕರು ಅಗ್ನಿಶಾಮಕ ದಳಕ್ಕೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಸುದ್ದಿ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯಾಚರಣೆಯನ್ನು ಆರಂಭಿಸಿದ್ದಾರೆ. ಈ ವೇಳೆಗೆ ಇಡೀ ಕಾರ್ಖಾನೆಗೆ ಬೆಂಕಿ ಹೊತ್ತಿಕೊಂಡಿರುವುದು ಕಂಡು ಬಂದಿದೆ. ಬಳಿಕ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ 6 ಜನರ ಮೃತದೇಹಗಳನ್ನ ಹೊರತೆಗೆದಿದ್ದಾರೆ ಎಂದು ಅಗ್ನಿಶಾಮಕ ಅಧಿಕಾರಿ ಮೋಹನ್ ಮುಂಗ್ಸೆ ತಿಳಿಸಿದ್ದಾರೆ.

ಕನ್ನಡದಿಂದ ಬೆಳೆದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂತ್ರಿಯಾದೆ

ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್. ವಿಶ್ವನಾಥ್



ಮೈಸೂರು, ಡಿ.31(ಜಿಎ)–ನಾನು ಕನ್ನಡ ಹೋರಾಟದಿಂದ ಬಂದಿದ್ದೇನೆ. ಕನ್ನಡದಿಂದ ಬೆಳೆದು ಕನ್ನಡ ಮಂತ್ರಿಯಾದೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಎಚ್. ವಿಶ್ವನಾಥ್ ತಿಳಿಸಿದರು.

ಕನ್ನಡ ಸಾಹಿತ್ಯ ಕಲಾಕೂಟ, ಕನ್ನಡ ಸಾಹಿತ್ಯ ಪರಿಷತ್ತು, ನಗರ ಘಟಕ ಸಹಯೋಗದಲ್ಲಿ ಕಲಾಮಂದಿರದ ಸುಚಿತ್ರ ಕಲಾಗ್ಯಾಲರಿಯಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಆಯೋಜಿಸಿದ್ದ ಕನ್ನಡ ನಾಡು ನುಡಿ ಸಾಧಕರ ಚಿತ್ರಕಲಾ ಪ್ರದರ್ಶನ ಹಾಗೂ ಕನ್ನಡಪರ ಹೋರಾಟಗಾರರಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಸರಕಾರ ಸುಗ್ರೀವಾಜ್ಞೆ ತಂದು ಆಡಳಿತದಲ್ಲಿ ಕನ್ನಡ ಅನುಷ್ಠಾನ ಮಾಡುವುದಕ್ಕಿಂತ ಸ್ವಯಂ ಪ್ರೇರಣೆಯಿಂದ ಜಾರಿಯಾಗುವ ವಾತಾವರಣ ಸೃಷ್ಟಿಸಬೇಕು. ಸರ್ಕಾರ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯಿದೆಗೆ ತಿದ್ದುಪಡಿ ತಂದು ಜಾರಿಗೊಳಿಸುತ್ತಿರುವುದು ಉತ್ತಮ ಬೆಳವಣಿಗೆ. ಅದರಲ್ಲಿಯೂ ನಾಮಫಲಕದ ಶೇ.60 ರಷ್ಟು ಜಾಗದಲ್ಲಿ ಕನ್ನಡ ಕಡ್ಡಾಯವಾಗಿದ್ದು ಉಲ್ಲಂಘಿಸಿದರೆ ಮಳಿಗೆಗೆ ಬೀಗ ಹಾಕಿಸುವ ಸೂಚನೆ ನೀಡಿರುವುದು ಹಾಗೂ ಸುಗ್ರೀವಾಜ್ಞೆ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ. ಆದರೆ ನಮ್ಮ ನಾಡಿನ ಸಂಪನ್ಮೂಲ ಬಳಕೆ ಮಾಡುವವರು ಸ್ವಯಂಪ್ರೇರಿತರಾಗಿ ಸ್ಥಳೀಯ ಭಾಷೆಯನ್ನು ಗೌರವಿಸುವ ವಾತಾವರಣ ಸೃಷ್ಟಿಯಾಗಬೇಕಿತ್ತು ಎಂದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಅಭಿಮಾನಿ ಕನ್ನಡ ಸಂಘವನ್ನು ಕಟ್ಟಿದ್ದೆವು. ನಾನು ಓದಿದ ಜೆಎಸ್‌ಎಸ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿಯಾಗಿದ್ದೆ. ಹೋರಾಟಗಾರರ ಪಡೆಯೇ ಆಗ ಇತ್ತು. ಕನ್ನಡ ಪರ ಹೋರಾಟಗಾರರ ಪರಿಶ್ರಮದಿಂದಾಗಿ ಕನ್ನಡ ಭಾಷೆ ಬದುಕು ಇಂದು ಜೀವಂತವಾಗಿದೆ. ಹೀಗಾಗಿ ಸರಕಾರ ಕನ್ನಡ ಹೋರಾಟಗಾರರು, ರೈತ ಹೋರಾಟಗಾರರು ಸೇರಿದಂತೆ ನಾನಾ ವಿಷಯಗಳನ್ನು ಮುಂದಿಟ್ಟುಕೊಂಡು ಹೋರಾಟ ಮಾಡುವವರ ಮೇಲಿನ ಕೇಸನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಕಸಾಪ ನಗರ ಘಟಕ ಅಧ್ಯಕ್ಷ ಕೆ.ಎಸ್. ಶಿವರಾಮು ಅವರು ಮಾತನಾಡಿ, ಸಮಾಜದಲ್ಲಿ ಏರುಪೇರುಗಳು ಸಹಜ ಅವುಗಳನ್ನು ಸರಿಪಡಿಸಿಕೊಂಡು ನಮ್ಮ ಹಕ್ಕುಗಳನ್ನು ಚಲಾಯಿಸಬೇಕಾದರೆ ಹೋರಾಟವೆಂಬ ಪ್ರಬಲ ಅಸ್ತ್ರ ಬಳಕೆ ಮಾಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಪರ ಹೋರಾಟಗಾರರಾದ ತಾಯೂರು ವಿಠಲಮೂರ್ತಿ, ಮೂಗೂರು ನಂಜುಂಡಸ್ವಾಮಿ, ಎಂ.ಮೋಹನ್ ಕುಮಾರ್ ಗೌಡ, ಎಸ್.ಬಾಲಕೃಷ್ಣ, ತೇಜಸ್ ಲೋಕೇಶ್‌ಗೌಡ, ಡಿಪಿಕೆ. ಪರಮೇಶ್, ಕೆ.ಮಾದೇಶ್, ಪ್ರವೀಣ್‌ಕುಮಾರ್, ಬಿ.ಎ.ಶಿವಶಂಕರ್, ಸಿ.ವಿ.ರವಿಶಂಕರ್ ಅವರನ್ನು ಇದೇ ವೇಳೆ ಸನ್ಮಾನಿಸಲಾಯಿತು.

ಕಲಾವಿದ ಹಾಗೂ ಶಿಕ್ಷಕರಾದ ಜಿ. ಮೋಹನ್ ಕುಮಾರ್ ಆರಾಧ್ಯ ಅವರು ಪೆನ್ಸಿಲ್‌ನಲ್ಲಿ ರಚಿಸಿರುವ ಜ್ಞಾನಪೀಠ ಪುರಸ್ಕೃತ ಸಾಹಿತಿಗಳು ಸೇರಿದಂತೆ ನಾಡಿನ ಒಳಿತಿಗಾಗಿ ದುಡಿದ ಮಹನೀಯರ ಚಿತ್ರಕಲಾ ಪ್ರದರ್ಶನ ಗಮನ ಸೆಳೆಯಿತು.

ಈ ವೇಳೆ ವಿಧಾನಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ನೈಪುಣ್ಯ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಆರ್. ರಘು ಕೌಟಿಲ್ಯ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸಂಸ್ಕೃತಿ ಪೋಷಕ ಡಾ.ಕೆ. ರಘುರಾಮ್, ಮೇಲುಕೋಟೆ ವಂಗಿಪುರ ನಂಬಿಮಠ ಇಳೈ ಆಳ್ವಾರ್ ಸ್ವಾಮೀಜಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 1 ಜನವರಿ 2024

'ಕುಂಡ್ಯೋಳಂಡ ಹಾಕಿ ನಮ್ಮೆ' ಲಾಂಛನ ಬಿಡುಗಡೆ

● ಹಾಕಿ ಹಬ್ಬಕ್ಕೆ ಬಿಜೆಪಿ ಸರ್ಕಾರದಲ್ಲಿ 1 ಕೋಟಿ ರೂ. ಅನುದಾನ ● ಸಂಸದ ಪ್ರತಾಪ್ ಸಿಂಹ ಹೇಳಿಕೆ



ಮಡಿಕೇರಿ, ಡಿ.31–ಕೊಡವ ಕುಟುಂಬಗಳ ಈ ವರ್ಷದ ಕುಂಡ್ಯೋಳಂಡ ಹಾಕಿ ನಮ್ಮೆಯ ಲಾಂಛನ ಬಿಡುಗಡೆ ಸಮಾರಂಭ ನಾಪೋಕ್ಲುವಿನ ಕೊಡವ ಸಮಾಜದ ಅಪ್ಪಚ್ಚ ಕವಿ ಸಭಾಂಗಣದಲ್ಲಿ ಭಾನುವಾರ ನಡೆಯಿತು.

ಕುಂಡ್ಯೋಳಂಡ ಕುಟುಂಬದ ಪಟ್ಟೆದಾರ ಕುಂಡ್ಯೋಳಂಡ ನಾಣಿ ನಾಣಯ್ಯ ಹಾಗೂ ಹಾಕಿ ನಮ್ಮೆಯ ಅಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ, ಹಾಕಿ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಹಾಗೂ ಒಲಂಪಿಯನ್ ಡಾ.ಅಂಜಪರವಂಡ ಬಿ. ಸುಬ್ಬಯ್ಯ ಕುಂಡ್ಯೋಳಂಡ ಹಾಕಿ ನಮ್ಮೆಯ ಲಾಂಛನ ಬಿಡುಗಡೆ ಮಾಡಿದರು.

ಹಾಕಿ ಉತ್ಸವದ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದ ಕೊಡಗು–ಮೈಸೂರು ಸಂಸದ ಪ್ರತಾಪ್ ಸಿಂಹ, ಹಾಕಿ ಹಬ್ಬಕ್ಕೆ ಬಿಜೆಪಿ ಸರ್ಕಾರದಲ್ಲಿ 1 ಕೋಟಿ ರೂ. ಅನುದಾನ ನೀಡಲಾಗಿದೆ. ಈ ಬಾರಿ ನಮ್ಮ ಸರ್ಕಾರ ಅಧಿಕಾರದಲ್ಲಿ ಇಲ್ಲದಿದ್ದರೂ ದಾನಿಗಳಿಂದ ಹಾಗೂ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ಹೆಚ್ಚಿನ ಅನುದಾನ ಒದಗಿಸಲು ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಹಾಕಿ ನಮ್ಮೆಯ ಲಾಟರಿ ಟಿಕೆಟ್ ಬಿಡುಗಡೆ ಮಾಡಿ ಮಾತನಾಡಿದ ಶಾಸಕ ಎ.ಎಸ್.ಪೊನ್ನಣ್ಣ, ಹಾಕಿ ನಮ್ಮೆ ಈಗಾಗಲೇ ಲಿಮ್ಕಾ ಬುಕ್ ಆಫ್ ರೆಕಾರ್ಡ್‌ನಲ್ಲಿ ಸ್ಥಾನ ಪಡೆದಿದೆ. ಮುಂದೆ ಈ ಹಾಕಿ ಹಬ್ಬ ಗಿನ್ನಿಸ್ ದಾಖಲೆ ಮಾಡುವಂತಾಗಲಿ ಎಂದು ಹಾರೈಸಿದರು.

ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಮಾತನಾಡಿ, ಹಾಕಿ ಹಬ್ಬ ನಡೆಸಲು ಸರ್ವರ ಸಹಕಾರ ಅಗತ್ಯ. ಪ್ರತಿಯೊಬ್ಬರು ಕೂಡ ಆಯೋಜಕರೊಂದಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಡಾ.ಅಂಜಪರವಂಡ ಬಿ.ಸುಬ್ಬಯ್ಯ ಮಾತನಾಡಿ, ಹಾಕಿ ಹಬ್ಬ ಆಯೋಜನೆ ಸುಲಭದ ಮಾತಲ್ಲ. ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟಕ್ಕಿಂತಲೂ ಹೆಚ್ಚಿನ ತಂಡಗಳು ಪಾಲ್ಗೊಳ್ಳುವ ಪಂದ್ಯಾಟ ಆಯೋಜನೆ ಒಂದು ಸವಾಲು ಕೂಡ ಹೌದು. ಕುಂಡ್ಯೋಳಂಡ ತಂಡ ಯಶಸ್ವಿಯಾಗಿ ಈ ಸವಾಲನ್ನು ಗೆಲ್ಲಲಿ ಎಂದು ಹಾರೈಸಿದರು.

ಕಳೆದ ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ವ್ಯಕ್ತಿಗಳ ಅಂತ್ಯಸಂಸ್ಕಾರ ಸೇರಿದಂತೆ ವಿವಿಧ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡು ಜನರಿಗೆ ಆಪತ್ಬಾಂಧವರಾಗಿ ಕಾರ್ಯ ನಿರ್ವಹಿಸಿದ ನಾಪೋಕ್ಲುವಿನ ಸೇವಾ ಭಾರತಿ ಸಂಘದ ಸದಸ್ಯರನ್ನು ಶಾಸಕ ಪೊನ್ನಣ್ಣ ಇದೇ ಸಂದರ್ಭ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ನಾಪೋಕ್ಲು ಕೊಡವ ಸಮಾಜದ ಮಾಜಿ ಅಧ್ಯಕ್ಷ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ, ಬಿದ್ದಾಟಂಡ ಎಸ್.ತಮ್ಮಯ್ಯ, ಕುಲ್ಲೇಟಿರ ಅರುಣ್ ಬೇಬ, ಯುಕೋ ಸಂಘಟನೆ ಸಂಚಾಲಕ ಕೊಕ್ಕಲೆಮಾಡ ಮಂಜು ಚಿಣ್ಣಪ್ಪ, ವೆಸ್ಟ್ ಕೊಳಕೇರಿ ಗ್ರಾಮಾಭಿವೃದ್ಧಿ ಸಂಘದ ಅಧ್ಯಕ್ಷ ಕೇಟೋಳಿರ ಎಸ್.ಕುಟ್ಟಪ್ಪ, ಮುದ್ದಂಡ ದೇವಯ್ಯ, ಕುಂಡ್ಯೋಳಂಡ ಹಾಕಿ ನಮ್ಮೆ ಅಧ್ಯಕ್ಷ ರಮೇಶ್ ಮುದ್ದಯ್ಯ, ಕುಂಡ್ಯೋಳಂಡ ಸುಬ್ಬಯ್ಯ, ಹಾಕಿ ನಮ್ಮೆಯ ಸಂಚಾಲಕ ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ, ಕಾರ್ಯದರ್ಶಿ ಬಿಪಿನ್ ಬೆಳ್ಯಪ್ಪ, ಖಜಾಂಚಿ ವಿಶು ಪೂವಯ್ಯ, ಹಾಕಿ ಕೂರ್ಗ್‌ನ ಪಳಂಗಂಡ ಲವಕುಮಾರ್, ಕಾವೇರಿ ಸೇನೆ ಸಂಚಾಲಕ ರವಿಚಂಗಪ್ಪ, ಎಂ.ಪಿ.ದೇವಯ್ಯ ಹಾಗೂ ಕುಂಡ್ಯೋಳಂಡ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.


ಸರ್ಕಾರದಿಂದ ನನ್ನ ಕುಟುಂಬ ಟಾರ್ಗೆಟ್

6.50 ಕೋಟಿ ರೂ. ಚೆಕ್ ಅಮಾನ್ಯ ಪ್ರಕರಣದಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಪ್ಪಿತಸ್ಥ ಎಂದು ಕೋರ್ಟ್ ಹೇಳಿದೆ. ಈ ಪ್ರಕರಣದ ಪ್ರಚಾರ ಮುಚ್ಚಿಹಾಕಲು ನನ್ನ ತಮ್ಮನ ಪ್ರಕರಣಕ್ಕೆ ಸರ್ಕಾರ ಗಮನ ನೀಡಿದೆ ಎಂದು ಸಂಸದ ಪ್ರತಾಪ್ ಸಿಂಹ ಆರೋಪಿಸಿದರು.

ಕುಂಡ್ಯೋಳಂಡ ಹಾಕಿ ನಮ್ಮೆಯ ಲಾಂಛನ ಬಿಡುಗಡೆ ಸಮಾರಂಭ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮರ ಕಳ್ಳತನ ಪ್ರಕರಣದಲ್ಲಿ ಅಮಾನತು ಮಾಡಲಾದ ಅರಣ್ಯ ಅಧಿಕಾರಿಗಳ ತನಿಖೆ ಬಿಟ್ಟು ನನ್ನ ತಮ್ಮ ವಿಕ್ರಂ ಸಿಂಹನನ್ನು ವಿಚಾರಣೆ ಮಾಡಲಾಗುತ್ತಿದೆ. ಎಫ್‌ಐಆರ್‌ನಲ್ಲಿ ಸಹೋದರನ ಹೆಸರು ಇಲ್ಲದಿದ್ದರೂ ಆತನನ್ನು ಬಂಧಿಸಲಾಗಿದೆ. ನನ್ನನ್ನು ಹಣಿಯಲು ನನ್ನ ಕುಟುಂಬವನ್ನು ಟಾರ್ಗೆಟ್ ಮಾಡಿದ್ದಾರೆ. ಇದೆಂತಹ ದ್ವೇಷ ರಾಜಕಾರಣ ಎಂದು ಪ್ರಶ್ನಿಸಿದರು.

ಕೊಡಗು–ಮೈಸೂರು ಕ್ಷೇತ್ರದಲ್ಲಿ ನನ್ನನ್ನು ಸೋಲಿಸಿ, ತನ್ನ ಪುತ್ರ ಯತೀಂದ್ರನನ್ನು ಗೆಲ್ಲಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ಲಾನ್ ಮಾಡಿದ್ದಾರೆ. ಆದ್ರೆ ಈ ಷಡ್ಯಂತ್ರ ಫಲಿಸುವುದಿಲ್ಲ. ಕಾವೇರಿ ಮಾತೆ ಆಶೀರ್ವಾದ ಮತ್ತು ಕೊಡಗು–ಮೈಸೂರು ಮತದಾರರ ನಂಬಿಕೆ ತನ್ನ ಮೇಲಿದೆ. ಹೀಗಾಗಿ ಅತ್ಯಧಿಕ ಮತಗಳಿಂದ ಗೆಲ್ಲುವೆ. ಇದು ಗೊತ್ತಿದ್ದೇ ತನ್ನ ವಿರುದ್ಧ ಕಾಂಗ್ರೆಸ್ ಷಡ್ಯಂತ್ರ ಹೂಡಿ ಇಲ್ಲ ಸಲ್ಲದ ಆರೋಪ ಮಾಡುತ್ತಿದೆ ಎಂದು ಪ್ರತಾಪ್ ಸಿಂಹ ಆರೋಪಿಸಿದರು.

ರಸ್ತೆಬದಿಯ ಅಂಗಡಿಗೆ ನುಗ್ಗಿದ ಲಾರಿ



ಸುಂಟಿಕೊಪ್ಪ, ಡಿ.31– ಕಂಟೈನರ್‌ಗೆ ಲಾರಿ ಡಿಕ್ಕಿ ಹೊಡೆದು ನಂತರ ನಿಯಂತ್ರಣ ಕಳೆದುಕೊಂಡು ರಸ್ತೆಬದಿಯ ಸ್ಟೈಸಸ್ ಅಂಗಡಿಗೆ ನುಗ್ಗಿದ ಘಟನೆ ಸುಂಟಿಕೊಪ್ಪ ಸಮೀಪದ ಕೊಡಗರಹಳ್ಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಶನಿವಾರ ತಡರಾತ್ರಿ ನಡೆದಿದೆ.

ಮಡಿಕೇರಿಯಿಂದ ಕುಶಾಲನಗರದತ್ತ ತೆರಳುತ್ತಿದ್ದ ಲಾರಿ, ಮೈಸೂರಿಂದ ಮಡಿಕೇರಿಗೆ ಬರುತ್ತಿದ್ದ ಕಂಟೈನರ್‌ಗೆ ಡಿಕ್ಕಿ ಹೊಡೆದಿದೆ. ಬಳಿಕ ಅಲ್ಲಿಂದ ಮುಂದಕ್ಕೆ ಚಲಿಸಿದ ಲಾರಿ ರಸ್ತೆಬದಿಯ ಸ್ಟೈಸಸ್ ಅಂಗಡಿಗೆ ನುಗ್ಗಿ ನಿಂತಿದೆ. ಅದೃಷ್ಟವಶಾತ್ ಅಂಗಡಿಯಲ್ಲಿ ಯಾರೂ ಇಲ್ಲದಿದ್ದರಿಂದ ಪ್ರಾಣಹಾನಿ ತಪ್ಪಿದಂತಾಗಿದೆ.

ಡಿಕ್ಕಿಯ ರಭಸಕ್ಕೆ ಅಂಗಡಿಯ ಮುಂಭಾಗಕ್ಕೆ ತೀವ್ರ ಹಾನಿಯಾಗಿದೆ. ಚಾಲಕ ಮದ್ಯಪಾನ ಮಾಡಿ ಲಾರಿ ಚಲಾಯಿಸಿದ್ದಾನೆ ಎನ್ನಲಾಗಿದ್ದು, ಘಟನೆ ಬಳಿಕ ಆತ ಪರಾರಿಯಾಗಿದ್ದಾನೆ. ಈ ಕುರಿತು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೀತಿರ ಎಸ್.ಮಣಿ ನಂಜಪ್ಪ ನಿಧನ

ವಿರಾಜಪೇಟೆ, ಡಿ.31– ವಿರಾಜಪೇಟೆ ನಿವಾಸಿಯಾದ ಕೊಡಗು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಹಾಗೂ ಹಿರಿಯ ವಕೀಲೆ ತೀತಿರ ಎಸ್.ಮಣಿ ನಂಜಪ್ಪ (64) ಭಾನುವಾರ ಸಂಜೆ ನಿಧನರಾದರು.



ನಗರದ ಗೋಣಿಕೊಪ್ಪ ರಸ್ತೆಯ ಟೆಂಡರ್ ಚಿಕ್ಕನ್ ಮಳಿಗೆ ಹಿಂಭಾಗದ ತಮ್ಮ ನಿವಾಸದಲ್ಲಿ ಅನಾರೋಗ್ಯದಿಂದ ನಿಧನರಾಗಿದ್ದು, ಮೃತರು ಇಬ್ಬರು ಪುತ್ರರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ವಿರಾಜಪೇಟೆ ಕೊಡವ ಸಮಾಜದ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿದ್ಯಾರ್ಥಿನಿಲಯ ಕಟ್ಟಡ ಕಾಮಗಾರಿಗೆ ಭೂಮಿಪೂಜೆ



ವಿರಾಜಪೇಟೆ, ಡಿ.31–ಸಾರ್ವಜನಿಕ ಕಾಮಗಾರಿಗಳು ಕಳಪೆಯಾಗದಂತೆ ಗುಣಮಟ್ಟದ ಕಟ್ಟಡ ನಿರ್ಮಾಣ ಮಾಡಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಲೋಕೋಪಯೋಗಿ ಇಲಾಖೆ ವತಿಯಿಂದ 6.30 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ನಗರದ ಚತ್ರಕೆರೆ ಬಳಿಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯದ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಸಾರ್ವಜನಿಕ ಕಾಮಗಾರಿ ವಿಚಾರದಲ್ಲಿ ಯವುದೇ ರಾಜಿಯಿಲ್ಲ. ಹಣ ದುರುಪಯೋಗ ಆಗದಂತೆ ಗುತ್ತಿಗೆದಾರರು 11 ತಿಂಗಳ ನಿಗದಿಯೊಳಗೆ ಕಾಮಗಾರಿ ಮುಗಿಸಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಉತ್ತಮ ಸೌಲಭ್ಯಗಳು ದೊರಕುವಂತಾಗಲಿ ಎಂದರು.

ಇದೇ ವೇಳೆ ವಿಧಾನಪರಿಷತ್ ಸದಸ್ಯ ಎಂ.ಸುಜಾ ಕುಶಾಲಪ್ಪ ತಹಸೀಲ್ದಾರ್ ಹೆಚ್.ಎನ್. ರಾಮಚಂದ್ರ, ಲೋಕೋಪಯೋಗಿ ಇಲಾಖೆ ಅಧಿಕಾರಿ ಶೇಖರ್, ಸಿದ್ದೇಗೌಡ, ಸಮಾಜ ಕಲ್ಯಾಣ ಇಲಾಖೆಯ ಪ್ರೀತಿ ಚಿಕ್ಕಮಾದಯ್ಯ, ಕಂದಾಯ ಪರಿವೀಕ್ಷಕ ಎಂ.ಹರೀಶ್, ಗುತ್ತಿಗೆದಾರ ಮೈಸೂರಿನ ಪ್ರಸನ್ನ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್, ಸದಸ್ಯರಾದ ರಂಜಿ ಪೂಣಚ್ಚ, ಡಿ.ಪಿ.ರಾಜೇಶ್, ಆಶಾ ಸುಬ್ಬಯ್ಯ, ಮಹ್ಮದ್ ರಾಫಿ, ರಜನಿಕಾಂತ್ ಮತ್ತಿತರರು ಉಪಸ್ಥಿತರಿದ್ದರು.

ಯುವ ಜನರು ದೇಶದ ಸಂಪನ್ಮೂಲ

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಮತ



ಗೋಣಿಕೊಪ್ಪ, ಡಿ.31–ಯುವ ಜನರು ದೇಶದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗಾಗಿ ಪ್ರಜಾಪ್ರಭುತ್ವ ಹಾಗೂ ಅಭಿವೃದ್ಧಿ ಬಲಪಡಿಸುವ ಜೊತೆಗೆ ಪ್ರಮುಖ ಮಾನವ ಸಂಪನ್ಮೂಲಗಳಾಗಿದ್ದಾರೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅಭಿಪ್ರಾಯ ವ್ಯಕ್ತಪಡಿಸಿದರು.

ಇಲ್ಲಿನ ಕಾಪ್ಸ್ ಶಾಲೆಯಲ್ಲಿ ಕೇಂದ್ರ ಗೃಹ ಮಂತ್ರಾಲಯ, ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ನೆಹರು ಯುವ ಕೇಂದ್ರ ಸಂಘಟನೆ, ಜಿಲ್ಲಾ ಯುವ ಒಕ್ಕೂಟ, ಕೂರ್ಗ್ ಪಬ್ಲಿಕ್ ಶಾಲೆ ಮತ್ತು ಪ್ರೀಯೂನಿವರ್ಸಿಟಿ ಕಾಲೇಜು ವತಿಯಿಂದ ಆಯೋಜಿಸಿದ್ದ ಕಾಶ್ಮೀರಿ ಯುವ ವಿನಿಮಯ ಸಮಾರೋಪದಲ್ಲಿ ಪ್ರಮಾಣಪತ್ರ ವಿತರಿಸಿ ಮಾತನಾಡಿದ ಅವರು, ಭಾರತದ ಜನಸಂಖ್ಯೆಯ ಸುಮಾರು 65 ಪ್ರತಿಶತದಷ್ಟು ಜನರು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಯುವಕರು ದೇಶದ ಭವಿಷ್ಯ ಮತ್ತು ಅಭಿವೃದ್ಧಿಯ ಪ್ರಮುಖ ಭಾಗವಾಗಿದ್ದಾರೆ ಎಂದರು.

ದೇಶ ಎಲ್ಲಾ ಕ್ಷೇತ್ರಗಳಲ್ಲಿ ಅಭೂತಪೂರ್ವ ಪ್ರಗತಿ ಸಾಧಿಸಿದ್ದು, ಸ್ವಾವಲಂಬಿ ಭಾರತವನ್ನು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇಂದು ನಮ್ಮ ಆರ್ಥಿಕತೆಯು ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆಯಾಗಿದ್ದು, 3ನೇ ಅತಿದೊಡ್ಡ ಆರ್ಥಿಕತೆಯತ್ತ ಸಾಗುತ್ತಿದೆ. 2047ರ ವರೆಗಿನ ಸ್ವಾತಂತ್ರ್ಯದ ಶತಮಾನ ಭವ್ಯವಾದ ಮತ್ತು ಅಭಿವೃದ್ಧಿಹೊಂದಿದ ಭಾರತವನ್ನು ನಿರ್ಮಿಸುವ ಮತ್ತು ಭಾರತವನ್ನು ವಿಶ್ವದ ಅತ್ಯುತ್ತಮ ದೇಶಗಳ ವರ್ಗಕ್ಕೆ ತರುವ ಕರ್ತವ್ಯದ ಅವಧಿಯಾಗಿದೆ. ಈ ಕರ್ತವ್ಯದ ಅವಧಿಯನ್ನು ಅವಕಾಶವನ್ನಾಗಿ ಪರಿವರ್ತಿಸಲು ನಾವು ಪಾಲುದಾರರಾಗಬೇಕು ಎಂದು ಕರೆ ನೀಡಿದರು.

ಕರ್ನಾಟಕ ದೇಶದ ಪ್ರಗತಿಪರ, ಉತ್ತಮವಾಗಿ ಅಭಿವೃದ್ಧಿ ಹೊಂದಿದ ಮತ್ತು ಸಮೃದ್ಧ ರಾಜ್ಯವಾಗಿದೆ. ಶಿಕ್ಷಣ, ಆರೋಗ್ಯ, ಕೃಷಿ, ಮಾಹಿತಿ ಮತ್ತು ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಕೈಗಾರಿಕೆ ಮತ್ತು ವಾಣಿಜ್ಯ, ಸ್ಟಾರ್ಟ್‌ಅಪ್‌ಗಳು, ಏರೋಸ್ಪೇಸ್, ಇಂಧನ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಕರ್ನಾಟಕ ಗಮನಾರ್ಹ ಪ್ರಗತಿ ಸಾಧಿಸಿದೆ ಎಂದು ಶ್ಲಾಘಿಸಿದರು.

ಸ್ಪೀಕರ್ ಯು.ಟಿ.ಖಾದರ್ ಮಾತನಾಡಿ, ಕಾಲೇಜು ದಿನಗಳಲ್ಲಿ ಎನ್‌ಎಸ್‌ಎಸ್‌ನಲ್ಲಿ ತೊಡಗಿಸಿಕೊಂಡ ಕಾರಣ ಶಿಸ್ತನ್ನು ಅಳವಡಿಸಿಕೊಳ್ಳಲು ಸಾಧ್ಯವಾಯಿತು. ದೇಶಕ್ಕೆ ಒಳಿತಾಗುವ ರೀತಿಯಲ್ಲಿ ನಡೆದುಕೊಳ್ಳಬೇಕು. ಕಾಶ್ಮೀರದಿಂದ ಸಾಂಸ್ಕೃತಿಕ ರಾಯಭಾರಿಗಳಾಗಿ ಯುವ ಜನರು ಬಂದಿದ್ದೀರಿ. ಇಲ್ಲಿ ಕಲಿತ ವಿಚಾರಗಳನ್ನು ಊರಿನವರಿಗೆ ತಲುಪಿಸುವ ಕೆಲಸ ಆಗಬೇಕು. ಆಗ ಮಾತ್ರ ವಿನಿಮಯ ಪದಕ್ಕೆ ಅರ್ಥ ಬರುತ್ತದೆ ಎಂದರು.

ಯುವಕರು ವಿದ್ಯಾಭ್ಯಾಸದ ನಂತರ ದೇಶದ ಹೊರಗೆ ಹೋದಾಗ ಭಾರತದ ಪ್ರಾಮುಖ್ಯತೆ ಅರಿವಿಗೆ ಬರುತ್ತದೆ. ಬೇರೆ ದೇಶಗಳು ವ್ಯವಹಾರಿಕವಾಗಿ ನಿಂತಿದೆ. ಆದರೆ, ಭಾರತ ಮಾನವೀಯತೆ ಮತ್ತು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನಡೆಯುತ್ತಿದೆ. ವಿವಿಧತೆಯಲ್ಲಿ ಏಕತೆ ನಮ್ಮ ದೇಶದ ಭದ್ರಬುನಾದಿ ಎಂದು ಪ್ರತಿಪಾದಿಸಿದರು.

ಶಾಸಕ ಎ.ಎಸ್ ಪೊನ್ನಣ್ಣ ಮಾತನಾಡಿದರು. ಇದೇ ವೇಳೆ ಕೊಡಗು ಮತ್ತು ಕಾಶ್ಮೀರಿ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಜಿಲ್ಲಾಧಿಕಾರಿ ವೆಂಕಟ್ ರಾಜಾ, ನೆಹರು ಯುವ ಕೇಂದ್ರದ ಪ್ರಾದೇಶಿಕ ಅಧಿಕಾರಿ ನಟರಾಜು, ಕಾಪ್ಸ್ ಶಾಲೆಯ ಪ್ರಾಂಶುಪಾಲ ಎಂ.ರಾಮಚಂದ್ರನ್, ನಾಗಲಕ್ಷ್ಮೀ, ತಹಶೀಲ್ದಾರ್ ಪ್ರಶಾಂತ್, ರಾಮಚಂದ್ರ ಮತ್ತಿತರರು ಹಾಜರಿದ್ದರು.

ಚಾ.ನಗರದಲ್ಲಿ ಶಿಕ್ಷಣ ಪಡೆಯಲು ಉತ್ತಮ ವಾತಾವರಣ

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಮತ



ಚಾಮರಾಜನಗರ, ಡಿ.31– ಜಿಲ್ಲೆಯಲ್ಲಿ ಸಾಕಷ್ಟು ಶಿಕ್ಷಣ ಸಂಸ್ಥೆಗಳಿದ್ದು ಶಿಕ್ಷಣ ಪಡೆಯಲು ಉತ್ತಮ ವಾತಾವರಣವಿದೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ವರನಟ ಡಾ.ರಾಜಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದಿಂದ ಆಯೋಜಿಸಿದ್ದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಚಾಮರಾಜನಗರ ಜಿಲ್ಲೆಯಾಗುವ ಮೊದಲು ಶಿಕ್ಷಣ ಸಂಸ್ಥೆಗಳಿರಲಿಲ್ಲ. ಆದರೆ ಇದೀಗ ವೈದ್ಯಕೀಯ, ಇಂಜಿನಿಯರಿಂಗ್, ಕೃಷಿ ಶಿಕ್ಷಣ, ವಿಶ್ವವಿದ್ಯಾನಿಲಯ, ಮೊರಾರ್ಜಿ ವಸತಿ, ಕಿತ್ತೂರು ರಾಣಿ ಚೆನ್ನಮ್ಮ ಸೇರಿದಂತೆ ಇನ್ನೂ ಅನೇಕ ಶಿಕ್ಷಣ ಸಂಸ್ಥೆಗಳಿವೆ. ಇದರಿಂದ ಜಿಲ್ಲೆಯ ಮಕ್ಕಳು ಉತ್ತಮ ಶಿಕ್ಷಣ ಪಡೆಯಲು ಅನುಕೂಲವಾಗಿದೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಇಂದಿಗೂ ಚಾಮರಾಜನಗರ ಜಿಲ್ಲೆಯಲ್ಲಿರುವಂತಹ ಶಿಕ್ಷಣ ಸಂಸ್ಥೆಗಳಿಲ್ಲ. ಶೈಕ್ಷಣಿಕವಾಗಿ ಅನೇಕ ಜಿಲ್ಲೆಗಳು ಇಂದಿಗೂ ಹಿಂದುಳಿದಿವೆ ಎಂದರು.

ಶಾಲಾ, ಕಾಲೇಜುಗಳಿಗೆ ಮೂಲ ಸೌಕರ್ಯ ಒದಗಿಸಿದರೆ ಸಾಧನೆ ಮಾಡಲು ಸಾಧ್ಯ ಎಂದ ಅವರು, 2003 ರಿಂದ 2018 ರವರೆಗೆ ಜಿಲ್ಲೆಯ ಶೈಕ್ಷಣಿಕ ಚಟುವಟಿಕೆಗಳಿಗೆ ಸಾಕಷ್ಟು ಅನುದಾನ ಬಂತು. ಆದರೆ 2019ರಿಂದ 2022ರವರೆಗೆ ಯಾವುದೇ ಅನುದಾನ ಬರಲಿಲ್ಲ. ಸಿಎಂ ಸಿದ್ದರಾಮಯ್ಯ ಅವರು ಜಿಲ್ಲೆಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದಾರೆ. ವಿಶೇಷ ಅನುದಾನ ನೀಡಲು ಒಪ್ಪಿಗೆ ಸೂಚಿಸಿದ್ದಾರೆ. ಶಾಲೆಗಳಲ್ಲಿ 'ಡಿ' ಗ್ರೂಪ್ ನೌಕರರ ಕೊರತೆ ಇದ್ದು, ಸಾಕಷ್ಟು ನೌಕರರನ್ನು ನೇಮಕ ಮಾಡಿದರೆ ಅನುಕೂಲವಾಗುತ್ತದೆ. ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ವಹಿಸಲಿದೆ ಎಂದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿ ದೇಶದಲ್ಲಿ ಶಿಕ್ಷಣ ಪಡೆಯಲು ಅವಕಾಶ ಕಡಿಮೆ ಇತ್ತು. ಆದರೆ, ಸ್ವಾತಂತ್ರ್ಯದ ನಂತರ ಅಂಬೇಡ್ಕರ್ ರಚಿಸಿದ ಸಂವಿಧಾನದಿಂದ ಶಿಕ್ಷಣ ಎಲ್ಲರಿಗೂ ಸಿಗುವಂತಾಯಿತು. ಶಿಕ್ಷಕರು ಮಕ್ಕಳಲ್ಲಿ ಶೈಕ್ಷಣಿಕವಾಗಿ ಜ್ಞಾನ ತುಂಬುವ ಕೆಲಸ ಮಾಡಬೇಕು. ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಜಿಲ್ಲೆ ರಾಜ್ಯದಲ್ಲೇ 8ನೇ ಸ್ಥಾನ ಪಡೆಯುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದೆ ಎಂದರು.

ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್ ಮಾತನಾಡಿ, ಶಾಲೆಯಲ್ಲಿ ಮಕ್ಕಳಿಗೆ ಓದು, ಬರಹ, ಗಣಿತ ಕಲಿಸುವಿಕೆ ಬಹಳ ಮುಖ್ಯ. ಈ ಕಲ್ಪನೆಗಳನ್ನು ಮಕ್ಕಳಲ್ಲಿ ಬಿತ್ತುವ ನಿಟ್ಟಿನಲ್ಲಿ ಶಿಕ್ಷಕರು ಮುಂದಾಗಬೇಕು. ಮೊದಲು ಮಕ್ಕಳ ಮನಸ್ಸನ್ನು ಗೆದ್ದು ಆ ನಂತರ ಕಲಿಕೆಗೆ ಪ್ರಯೋಗ ಮಾಡಬೇಕು. ಶಿಕ್ಷಕರು, ಶಾಲಾ ಕೊಠಡಿ, ಮೂಲ ಸೌಕರ್ಯ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ತಿಳಿಸಿದರು.

ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರು, ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಿಕ್ಷಕರು ಹಾಗೂ ಉತ್ತಮ ಅಂಕ ಪಡೆದ ಮಕ್ಕಳನ್ನು ಸನ್ಮಾನಿಸಲಾಯಿತು. ಈ ಸಂದರ್ಭ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ. ನಾಗೇಶ್, ಜಿಲ್ಲಾಧ್ಯಕ್ಷ ಕೆ.ಎಸ್.ಮಾದಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷರ ಸಂಘದ ಅಧ್ಯಕ್ಷ ಟಿ.ಎ.ರಾಮಸ್ವಾಮಿ, ಡಯಟ್ ಪ್ರಾಂಶುಪಾಲ ಕಾಶಿನಾಥ್, ಡಯಟ್ ಉಪನ್ಯಾಸಕ ಲಿಂಗರಾಜೇ ಅರಸ್, ಬಿಇಓ ಸೋಮಣ್ಣೇಗೌಡ ಸೇರಿದಂತೆ ಶಿಕ್ಷರ ಸಂಘದ ಸದಸ್ಯರು, ಶಿಕ್ಷಕರು ಇತರರಿದ್ದರು.

ಡಾ.ವಿಷ್ಣುವರ್ಧನ್ 14ನೇ ಪುಣ್ಯಸ್ಮರಣೆ



ಚಾಮರಾಜನಗರ, ಡಿ.31– ನಗರದ 15ನೇ ವಾರ್ಡ್ ಬಾಬು ಜಗಜೀವನರಾಂ ಬಡಾವಣೆಯಲ್ಲಿ ಸಾಹಸಸಿಂಹ ವಿಷ್ಣುವರ್ಧನ್ ಅಭಿಮಾನಿಗಳ ಸಂಘದಿಂದ ಡಾ.ವಿಷ್ಣುವರ್ಧನ್ ಕಟೌಟ್‌ಗೆ ಕ್ಷೀರಾಭಿಷೇಕ ಮಾಡುವ ಮೂಲಕ 14ನೇ ಪುಣ್ಯಸ್ಮರಣೆ ಆಚರಿಸಲಾಯಿತು.

ವಾರ್ಡ್ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ವಿಷ್ಣುವರ್ಧನ್ ಕಟೌಟ್‌ಗೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ವಿಷ್ಣುವರ್ಧನ್ ಅವರು ಅಗಲಿ 13 ವರ್ಷಗಳಾದರೂ ಅಭಿಮಾನಿಗಳು ಇಂದಿಗೂ ಅವರನ್ನು ಸ್ಮರಿಸುತ್ತಾರೆ. ಅವರ ಸಿನಿಮಾಗಳು ಅವರನ್ನು ಸದಾ ಜೀವಂತವಾಗಿಟ್ಟಿವೆ. ಅಭಿಮಾನಿಗಳು ತಮ್ಮ ಮೆಚ್ಚಿನ ನಟನ ಹೆಸರು ಸದಾ ಹಸಿರಾಗಿರುವಂತೆ ನಾನಾ ಕಾರ್ಯಕ್ರಮ ಮಾಡುತ್ತಲೇ ಬಂದಿದ್ದಾರೆ. ಅದೇ ರೀತಿ ವಾರ್ಡ್‌ನ ಸಾಹಸಸಿಂಹ ವಿಷ್ಣುವರ್ಧನ್ ಅವರ ಅಭಿಮಾನಿ ಬಳಗದ ಪದಾಧಿಕಾರಿಗಳು ವಿಷ್ಣುವರ್ಧನ್ ಪುಣ್ಯಸ್ಮರಣೆಯನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಹೆಚ್.ಹೆಚ್.ನಾಗರಾಜು, ಚಾ.ಗು.ನಾಗರಾಜು, ಸಿದ್ದಪ್ಪ ರೇವಣ್ಣ ಲಿಂಗಣ್ಣ, ರಾಮಣ್ಣ ಚಿನ್ನಸ್ವಾಮಿ, ಸಾಹಸಸಿಂಹ ವಿಷ್ಣುವರ್ಧನ್ ಅವರ ಅಭಿಮಾನಿ ಸಂಘದ ಅಧ್ಯಕ್ಷ ಪ್ರಭು, ಕಾರ್ಯದರ್ಶಿ ಲಿಂಗರಾಜು, ಗಿರಿ, ಸೋಮು, ನಾಗರಾಜು ಇತರರಿದ್ದರು.

ನಂಜುಂಡೇಶ್ವರನಿಗೆ ಎಂಜಲು ನೀರು ಎರಚಿದ ಪ್ರಕರಣ

ಕಿಡಿಗೇಡಿಗಳ ಬಂಧನಕ್ಕೆ ಆಗ್ರಹಿಸಿ ಪ್ರತಿಭಟನೆ




ಚಾಮರಾಜನಗರ, ಡಿ.31– ನಂಜನಗೂಡಿನಲ್ಲಿ ನಂಜುಂಡೇಶ್ವರನ ಉತ್ಸವ ಮೂರ್ತಿಗೆ ಎಂಜಲು ನೀರು ಎರಚಿದ ಕಿಡಿಗೇಡಿಗಳನ್ನು ಬಂಧಿಸಿ, ರಾಜ್ಯದಿಂದ ಗಡಿಪಾರು ಮಾಡಬೇಕು ಎಂದು ಒತ್ತಾಯಿಸಿ ಭಗತ್ ಯುವ ಸೇನೆಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಕಾಲ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರ, ಮೈಸೂರು ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು, ಗೃಹ ಸಚಿವರು, ಮುಜರಾಯಿ ಇಲಾಖೆ, ಸ್ಥಳೀಯ ಶಾಸಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡ ವಿರಾಟ್ ಶಿವು ಮಾತನಾಡಿ, ದಕ್ಷಿಣಕಾಶಿ ಎಂದೇ ಪ್ರಖ್ಯಾತಿ ಪಡೆದಿರುವ ನಂಜನಗೂಡಿನ ನಂಜುಂಡೇಶ್ವರನ ಉತ್ಸವ ಮೂರ್ತಿಗೆ ಅಪವಿತ್ರ ನೀರನ್ನು ಎರಚಿರುವುದು ಹಿಂದೂ ಭಾವನೆಗಳಿಗೆ ಧಕ್ಕೆ ಉಂಟಾಗಿದೆ. ಘಟನೆ ನಡೆದು ನಾಲ್ಕೈದು ದಿನಗಳು ಆಗಿದ್ದರೂ ಕೂಡ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದು ಹಿಂದೂಗಳಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ. ಹೀಗಾಗಿ ಪ್ರಕರಣದ ಆರೋಪಿಗಳನ್ನು ಕೂಡಲೇ ಬಂಧಿಸಿ, ರಾಜ್ಯದಿಂದ ಗಡಿಪಾರು ಮಾಡಬೇಕು. ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಬುಲೆಟ್ ಚಂದ್ರು, ಪ್ರವೀಣ್, ಪುಷ್ಟಿ ಟಗರುಶಿವ, ಸಿ.ವಿ.ಮಣಿ ಕಂಠ, ರಾಘವೇಂದ್ರ, ಪ್ರಸನ್ನ, ಹರೀಶ್, ರಾಜೇಂದ್ರ, ಮಂಜುನಾಥ್, ಮನು, ಟಗರು ಶಿವು, ರಮೇಶ್, ನಾಗೇಂದ್ರ, ರವಿ ಹೇಮಂತ್, ನಾಗಚೇತನ್, ಪುನೀತ್, ಅಭಿ, ಪ್ರಮೋದ್ ಹರ್ಷದ್‌ಗೌಡ, ಅಶ್ವಿನ್, ಸಂತು ಇತರರಿದ್ದರು.

ಹೊಸ ವರ್ಷ ಹಿನ್ನೆಲೆ: ಮ.ಬೆಟ್ಟದಲ್ಲಿ ಭಕ್ತ ಸಾಗರ



ಹೊಸ ವರ್ಷದ ಪ್ರಯುಕ್ತ ಶ್ರೀಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಲಕ್ಷಾಂತರ ಭಕ್ತರು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಶಂಕರನಾರಾಯಣ ರಾವ್ ನಿಧನ

ಯಳಂದೂರು, ಡಿ.31– ತಾಲೂಕಿನ ಬಿಳಿಗಿರಿರಂಗನಬೆಟ್ಟದ ಗಿರಿದರ್ಶಿನಿ ಹೋಟೆಲ್ ಮಾಲೀಕ ಶಂಕರನಾರಾಯಣ್ (95) ಶನಿವಾರ ರಾತ್ರಿ ನಿಧನರಾದರು.



ಮೃತರು ಮೂವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಬಿಳಿಗಿರಿರಂಗನಬೆಟ್ಟದ ಮೃತರ ತೋಟದಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ

ಚಾಮರಾಜನಗರ, ಡಿ.31– ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಜ.1 ಮತ್ತು 2 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.

ಜ.1 ರಂದು ಸಂಜೆ 6 ಗಂಟೆಗೆ ಮಲೆ ಮಹದೇಶ್ವರ ಬೆಟ್ಟಕ್ಕೆ ಆಗಮಿಸಿ ವಾಸ್ತವ್ಯ ಹೂಡುವರು.ಜನವರಿ 2 ರಂದು ಬೆಳಿಗ್ಗೆ 9.30 ಗಂಟೆಗೆ ಮಲೆಮಹದೇಶ್ವರ ಬೆಟ್ಟದಲ್ಲಿ ಅಧಿಕಾರಿಗಳೊಂದಿಗೆ ಮಲೆ ಮಹದೇಶ್ವರ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ಸಭೆ ನಡೆಸುವರು. ಮಧ್ಯಾಹ್ನ 2 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸುವರು.ಬಳಿಕ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಾರ್ವಜನಿಕರನ್ನು ಭೇಟಿ ಮಾಡುವರು.ಸಂಜೆ 5 ಗಂಟೆಗೆ ಮೈಸೂರಿಗೆ ತೆರಳುವರೆಂದು ಪ್ರಕಟಣೆ ತಿಳಿಸಿದೆ.



ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆಯಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಗು.ಪುರುಷೋತ್ತಮ್, ರವಿಚಂದ್ರ ಪ್ರಸಾದ್ ಕಹಳೆ, ತಾಂಡವಮೂರ್ತಿ, ರಾಚಪ್ಪ, ಮಂಜು ಇತರರಿದ್ದರು.

ಪ್ರಶಸ್ತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಡಿ.31– ಮಹಿಳಾ ಅಭಿವೃದ್ಧಿ ಕ್ಷೇತ್ರದಲ್ಲಿ ಅವಿರತವಾಗಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ನೀಡಲಾಗುವ 2023–24ನೇ ಸಾಲಿನ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅಂತರಾಷ್ಟ್ರೀಯ ಮಹಿಳಾ ದಿನದಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಮಹಿಳಾ ಅಭಿವೃದ್ಧಿ ಕ್ಷೇತ್ರದಲ್ಲಿ ಅಸಾಧಾರಣ ಸೇವೆ ಸಲ್ಲಿಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ, ಮಹಿಳಾಭಿವೃದ್ಧಿ, ಕಲೆ, ಶಿಕ್ಷಣ, ಸಾಹಿತ್ಯ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಅಸಾಧರಣ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಗೆ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ನೀಡಲಾಗುವುದು. ವೇತನ ಪಡೆಯುವ ವ್ಯಕ್ತಿಗಳು ಪ್ರಶಸ್ತಿಗೆ ಅರ್ಹರಿರುವುದಿಲ್ಲ. ಆಸಕ್ತರು ಅರ್ಜಿ ನಮೂನೆಯನ್ನು ನಗರದ ಜಿಲ್ಲಾಡಳಿತ ಭವನದಲ್ಲಿರುವ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿ ಜ.8ರೊಳಗೆ ಸಲ್ಲಿಸಬೇಕು. ಮಾಹಿತಿಗಾಗಿ ಇಲಾಖೆ ಉಪ ನಿರ್ದೇಶಕರ ಕಚೇರಿ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಅನಿಲ್



ಚಾಮರಾಜನಗರ, ಡಿ.31– ತಾಲೂಕಿನ ಆಲೂರು ಗ್ರಾಮದ ನಿವಾಸಿ ಲೇ.ಕೆರೆಮನೆ ಶಾಂತರಾಜು ಅವರ ಪುತ್ರ ಅನಿಲ್ (43) ಭಾನುವಾರ ಸಂಜೆ ನಿಧನರಾದರು. ಮೃತರು ಪತ್ನಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಮೃತರ ತೋಟದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನನಗೆ ಆದ ಅನ್ಯಾಯ ಯಾರಿಗೂ ಆಗಬಾರದು

ಮಾಜಿ ಸಚಿವ ವಿ.ಸೋಮಣ್ಣ ಭಾವುಕ ನುಡಿ



ಬೆಂಗಳೂರು, ಡಿ.31– ಯಾರೋ ನನಗೆ ಮಾಟ ಮಾಡಿಸಿರ ಬಹುದೋ ಏನೋ, ನಾನೇ ಹೋಗಿ ನಾಲ್ಕೂವರೆ ಅಡಿ ಗುಂಡಿಗೆ ಬಿದ್ದೆ. ನನಗೆ ಆದ ಅನ್ಯಾಯ ಯಾರಿಗೂ ಆಗಬಾರದು ಎಂದು ಬಿಜೆಪಿ ಮಾಜಿ ಸಚಿವ ವಿ.ಸೋಮಣ್ಣ ಸ್ವಪಕ್ಷೀಯರ ವಿರುದ್ಧ ಮತ್ತೆ ಬೇಸರ ಹೊರಹಾಕಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ನಾನು ಗೋವಿಂದರಾಜನಗರ ಕ್ಷೇತ್ರ ಬಿಡಬಾರದಿತ್ತು. ಆಗ ಯಾರಾದರೂ ನನಗೆ ಮಾಟ ಮಂತ್ರ ಮಾಡಿಸಿದ್ದರೇನೋ, ಕ್ಷೇತ್ರ ಬಿಟ್ಟೆ, ನನಗೆ ಆದ ಅನ್ಯಾಯ ಯಾರಿಗೂ ಆಗಬಾರದು. ಜನವರಿ 9ಕ್ಕೆ ದೆಹಲಿಯಲ್ಲಿ ವರಿಷ್ಠರ ಭೇಟಿ ಆಗುತ್ತೇನೆ, ನನಗೆ ಆದ ಅನ್ಯಾಯವನ್ನು ವರಿಷ್ಠರ ಬಳಿ ಹೇಳುತ್ತೇನೆ. ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು ಎಂದು ಹೇಳಿದ್ದಾರೆ.

ವಿಜಯನಗರದ ಕಚೇರಿಯಲ್ಲಿ ವಿ.ಸೋಮಣ್ಣ ಪ್ರತಿಷ್ಠಾನದಿಂದ ಕ್ಯಾಲೆಂಡರ್ ಬಿಡುಗಡೆ ಮತ್ತು ಕುವೆಂಪು ಜಯಂತಿ ಆಚರಣೆ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಭಾವುಕರಾಗಿ ಮಾತನಾಡಿದ ಸೋಮಣ್ಣ ಅವರು, ನನಗೆ ಆಗಿರುವ ಅನಾನುಕೂಲ ಯಾರಿಗೂ ಆಗುವುದು ಬೇಡ. ಹೊಸ ವರ್ಷ ಆರಂಭವಾಗುತ್ತಿದೆ. ಹಳೆಯ ಕಹಿ ಘಟನೆ ಮರೆತು ಮುಂದೆ ಹೊಸ ವರ್ಷದಲ್ಲಿ ಮುನ್ನಡೆಯೋಣ ಎಂದರು.

ನಮ್ಮ ಮೇಲೆ ಪ್ರಹಾರ ಆಗದಂತೆ ಎಲ್ಲರಿಗೂ ಕಟ್ಟುನಿಟ್ಟಿನ ಸೂಚನೆ ನೀಡಬೇಕು. ರಾಷ್ಟ್ರೀಯ ನಾಯಕರ ನಿಲುವೇ ನನ್ನ ನಿಲುವು. ನನ್ನ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ. ರಾಷ್ಟ್ರೀಯ ನಾಯಕರು ಏನು ಹೇಳುತ್ತಾರೋ ಹಾಗೆಯೇ ನಡೆದುಕೊಳ್ಳುತ್ತೇನೆ ಎನ್ನುವ ಮೂಲಕ ಪರೋಕ್ಷವಾಗಿ ಪಕ್ಷ ಬಿಡುವುದಿಲ್ಲ ಎಂಬ ಸಂದೇಶವನ್ನು ಸೋಮಣ್ಣ ರವಾನೆ ಮಾಡಿದ್ದಾರೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣ: ಡಿಸಿಎಂ ಡಿ.ಕೆ.ಶಿವಕುಮಾರ್ ಹೂಡಿಕೆ ವಿವರ ಸಲ್ಲಿಸುವಂತೆ

ಕೇರಳ ಮೂಲದ ಜೈಹಿಂದ್ ಚಾನೆಲ್‌ಗೆ ಸಿಬಿಐ ನೋಟಿಸ್!

ನವದೆಹಲಿ, ಡಿ.31– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೇರಳ ಮೂಲದ ಜೈಹಿಂದ್ ವಾಹಿನಿಯಲ್ಲಿ ಮಾಡಿರುವ ಹೂಡಿಕೆಯ ವಿವರಗಳನ್ನು ನೀಡುವಂತೆ ಅವರ ಪ್ರಕರಣದಲ್ಲಿ ಸಿಬಿಐ ನೋಟಿಸ್ ಜಾರಿ ಮಾಡಿದೆ.

ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧದ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐನ ಬೆಂಗಳೂರು ಘಟಕವು ಜೈಹಿಂದ್ ಕಮ್ಯುನಿಕೇಷನ್ಸ್ ಪ್ರೈವೇಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರಿಗೆ ಜನವರಿ 11, 2024ರಂದು ತನಿಖಾಧಿಕಾರಿ ಕೋರಿದ ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ತನಿಖೆಗೆ ಹಾಜರಾಗುವಂತೆ ನೋಟಿಸ್ ನೀಡಿದೆ.

ಸಿಆರ್‌ಪಿಸಿಯ ಸೆಕ್ಷನ್ 91ರ ಅಡಿಯಲ್ಲಿ ಹೊರಡಿಸಲಾದ ನೋಟಿಸ್‌ನಲ್ಲಿ, ಡಿಕೆ ಶಿವಕುಮಾರ್ ಮತ್ತು ಅವರ ಪತ್ನಿ ಉಷಾ ಶಿವಕುಮಾರ್ ಅವರು ಮಾಡಿದ ಹೂಡಿಕೆಗಳು, ಅವರಿಗೆ ಪಾವತಿಸಿದ ಲಾಭಾಂಶಗಳು, ಷೇರು ವಹಿವಾಟುಗಳು, ಹಣಕಾಸಿನ ವಹಿವಾಟುಗಳ ಜೊತೆಗೆ ಅವರ ಬ್ಯಾಂಕ್ ವಿವರಗಳನ್ನು ಒದಗಿಸುವಂತೆ ಸಿಬಿಐ ಚಾನಲ್‌ಗೆ ಕೇಳಿದೆ. ಹಿಡುವಳಿಗಳ ಹೇಳಿಕೆ, ಅವರ ಲೆಡ್ಜರ್ ಖಾತೆಗಳು, ಒಪ್ಪಂದದ ಟಿಪ್ಪಣಿಗಳು ಮತ್ತು ಇತರ ವಿವರಗಳ ಜೊತೆಗೆ ಎಲ್ಲಾ ಷೇರು ವಹಿವಾಟುಗಳ ವಿವರ, ಶಿವಕುಮಾರ್ ಅವರ ಪುತ್ರ ಮತ್ತು ಇತರ ಕುಟುಂಬ ಸದಸ್ಯರು ವಾಹಿನಿಯಲ್ಲಿ ಮಾಡಿರುವ ಹೂಡಿಕೆಯ ವಿವರಗಳನ್ನು ನೀಡುವಂತೆ ಸಿಬಿಐ ಕೇಳಿದೆ.

ಜೈಹಿಂದ್ ವ್ಯವಸ್ಥಾಪಕ ನಿರ್ದೇಶಕ ಬಿಎಸ್ ಶಿಜು ಅವರು ಸಿಬಿಐ ನೋಟಿಸ್ ಸ್ವೀಕರಿಸಿದ್ದು, ಸಂಸ್ಥೆ ಕೋರಿರುವ ಎಲ್ಲಾ ದಾಖಲೆಗಳನ್ನು ಒದಗಿಸುವುದಾಗಿ ತಿಳಿಸಿದ್ದಾರೆ, ಎಲ್ಲಾ ದಾಖಲೆಗಳು ತಮ್ಮ ಬಳಿ ಇವೆ ಮತ್ತು ಯಾವುದೇ ಅಕ್ರಮ ನಡೆದಿಲ್ಲ ಎಂದು ಅವರು ಹೇಳಿದ್ದಾರೆ.

ಶಿವಕುಮಾರ್ ವಿರುದ್ಧ ಸಿಬಿಐ 2020ರಲ್ಲಿ ಪ್ರಕರಣ ದಾಖಲಿಸಿದ್ದು, 2013 ಮತ್ತು 2018ರ ನಡುವೆ ಅವರು 74 ಕೋಟಿ ರೂಪಾಯಿಗೂ ಹೆಚ್ಚು ಆಸ್ತಿಯನ್ನು ಗಳಿಸಿದ್ದಾರೆ. ಅದು ಅವರ ಆದಾಯಕ್ಕೆ ಅನುಗುಣವಾಗಿಲ್ಲ ಎಂದು ಆರೋಪಿಸಲಾಗಿದೆ

ನಂಜನಗೂಡಲ್ಲಿ ಚಿರತೆ ಪ್ರತ್ಯಕ್ಷ, ಆತಂಕಗೊಂಡ ಸಾರ್ವಜನಿಕರು

ನಂಜನಗೂಡು, ಡಿ.31–ಇದುವರೆಗೂ ಗ್ರಾಮಾಂತರ ಪ್ರದೇಶ ಮತ್ತು ಹೊಲ–ಗದ್ದೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಾಡುಪ್ರಾಣಿಗಳು ಇದೀಗ ನಾಡಿನತ್ತ ಮುಖ ಮಾಡಿವೆ. ಪಟ್ಟಣದ ಒಕ್ಕಲಗೇರಿಯಲ್ಲಿ ಚಿರತೆಯೊಂದು ಕಾಣಿಸಿಕೊಂಡಿದ್ದು, ಸಾರ್ವಜನಿಕರು ಆತಂಕಗೊಂಡಿದ್ದಾರೆ.

ಭಾನುವಾರ ಸಂಜೆ ವರ್ಷದ ಕೊನೆಯ ದಿನದ ಆಚರಣೆಯಲ್ಲಿ ತೊಡಗಿದ್ದ ಯುವಕರ ಕಣ್ಣಿಗೆ ಬಡಾವಣೆಯ ರಾಮ ಮಂದಿರದ ಬಳಿ ಚಿರತೆ ಕಾಣಿಸಿಕೊಂಡಿದೆ. ಈ ವೇಳೆ ಯುವಕರು ಜೋರಾಗಿ ಕಿರುಚಿಕೊಂಡಿದ್ದರಿಂದ ಸಮೀಪದ ಪೊದೆಯಂತಹ ಪ್ರದೇಶದತ್ತ ಓಡಿ ಮರೆಯಾಯಿತು ಎನ್ನಲಾಗಿದೆ.

ಈ ವಿಚಾರವನ್ನು ಯುವಕರು ಎಲ್ಲರಿಗೂ ತಿಳಿಸುವುದರೊಂದಿಗೆ ಪೊಲೀಸರ ಗಮನಕ್ಕೂ ತಂದರು. ತಕ್ಷಣ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದರಲ್ಲದೆ, ಧ್ವನಿವರ್ಧಕದ ಮೂಲಕ 'ಪಟ್ಟಣದ ಒಕ್ಕಲಗೇರಿಯಲ್ಲಿ ಚಿರತೆಯೊಂದು ಕಾಣಿಸಿಕೊಂಡಿದ್ದು, ಸಾರ್ವಜನಿಕರು ಮನೆಯಿಂದ ಹೊರಗೆ ಬರಬಾರದು, ಎಚ್ಚರಿಕೆಯಿಂದಿರಿ' ಎಂದು ಜೀಪಿನಲ್ಲಿ ಸಾರಿದರು. ಇದನ್ನು ಕೇಳಿ ಸಾರ್ವಜನಿಕರು ಆತಂಕಗೊಂಡು ಮನೆಗೆ ಸೇರಿಕೊಂಡರು.

ಬಡಾವಣೆಯ ಸಮೀಪ ಗುಂಡ್ಲು ನದಿ ಹರಿಯುತ್ತಿದ್ದು, ಈ ಪ್ರದೇಶದಲ್ಲಿ ಈ ಹಿಂದೆ ಎರಡು ಜಿಂಕೆಗಳು ಕಾಣಿಸಿಕೊಂಡಿದ್ದವು. ಜೊತೆಗೆ ಆಗಾಗ ಸುತ್ತಮುತ್ತ ಓಡಾಡುತ್ತಿತ್ತು ಎನ್ನಲಾಗಿದೆ. ಬಹುಶಃ ಜಿಂಕೆ ಬೇಟೆಗಾಗಿ ಈ ಚಿರತೆ ಬಂದಿರಬಹುದು ಎಂದು ಪೊಲೀಸರು ಮತ್ತು ಸ್ಥಳಕ್ಕೆ ಭೇಟಿ ನೀಡಿದ್ದ ಅರಣ್ಯ ಇಲಾಖೆಯ ಅಧಿಕಾರಿಗಳು ಸಂಶಯ ವ್ಯಕ್ತಪಡಿಸಿದ್ದಾರೆ.

ಇಂದು ಅಮರಶಿಲ್ಪಿ ಜಕಣಾಚಾರಿ ಜಯಂತಿ

ಮೈಸೂರು, ಡಿ.31– ಮೈಸೂರು ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಜಯಂತ್ಯುತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಸೋಮವಾರ(ಜ.1) ಬೆಳಗ್ಗೆ 10.30ಕ್ಕೆ ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಆಯೋಜಿಸಲಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳು, ಸಮಿತಿ ಪದಾಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದು, ಇದೇ ವೇಳೆ ನಾರಾಯಣಸ್ವಾಮಿ ಮತ್ತು ತಂಡದ ಕಲಾವಿದರು ಗೀತಗಾಯನ ಪ್ರಸ್ತುತಪಡಿಸಲಿದ್ದಾರೆ.

ಕರ್ನಾಟಕದಲ್ಲಿ ಭಾನುವಾರ 229 ಜನರಿಗೆ ಕೊರೊನಾ ಸೋಂಕು ದೃಢ

ಬೆಂಗಳೂರು, ಡಿ.31– ರಾಜ್ಯದಲ್ಲಿ ಕಳೆದ 24 ಗಂಟೆಯಲ್ಲಿ 7060 ಜನರಿಗೆ ಕೋವಿಡ್ ಟೆಸ್ಟ್ ಮಾಡಲಾಗಿತ್ತು. ಅದರಲ್ಲಿ 229 ಜನರಿಗೆ ಕೊರೊನಾ ಸೋಂಕು ದೃಢವಾಗಿದ್ದು, ಬೆಂಗಳೂರಿನಲ್ಲಿಯೇ 42 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಈ ಮೂಲಕ ರಾಜ್ಯದಲ್ಲಿ 833 ಜನರಲ್ಲಿ ಕೊರೊನಾ ಸಕ್ರಿಯ ಕೇಸ್‌ಗಳಿವೆ. ಇನ್ನು ಕೊರೊನಾ ಪಾಸಿಟಿವಿಟಿ ರೇಟ್ ಶೇಕಡಾ 6.49 ರಷ್ಟಿದ್ದು, 60 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ನೀಡಿದೆ.

ಇಂದು ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಡಿ.31– ಮೈಸೂರಿನ ಪಿಯು ಒಕ್ಕೂಟ ಹಾಗೂ ಅಖಿಲ ಕರ್ನಾಟಕ ಪಿಯು ಉಪನ್ಯಾಸಕರ ಹಿತರಕ್ಷಣಾ ಸಂಘದ ಸಹಯೋಗದಲ್ಲಿ ಹೊರತಂದಿರುವ ನೂತನ ವರ್ಷದ ದಿನದರ್ಶಿಕೆ ಸೋಮವಾರ ಬಿಡುಗಡೆಯಾಗಲಿದೆ. ನಗರದ ದೇವರಾಜ ಮೊಹಲ್ಲಾ ದೇವರಾಜ ಪದವಿಪೂರ್ವ ಕಾಲೇಜು ಸಭಾಂಗಣದಲ್ಲಿ ಮಧ್ಯಾಹ್ನ 3.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಸಾಹಿತಿ ಬನ್ನೂರು ಕೆ.ರಾಜು ದಿನದರ್ಶಿಕೆ ಬಿಡುಗಡೆ ಮಾಡಲಿದ್ದು, ಡಿಡಿಪಿಯು ಎಂ.ಮರಿಸ್ವಾಮಿ, ದೇವರಾಜ ಕಾಲೇಜು ಪ್ರಾಚಾರ್ಯ ಡಾ.ಎಂ.ಜಿ.ರಮಾನಂದ ಸೇರಿದಂತೆ ವಿವಿಧ ಕಾಲೇಜುಗಳ ಪ್ರಾಚಾರ್ಯರು, ಸಂಘದ ಜಿಲ್ಲಾಧ್ಯಕ್ಷ ಕೋಟೆ ವೆಂಕಟೇಶ್ ಹಾಗೂ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.





ಸಂಸದ ಪ್ರತಾಪ್ ಸಿಂಹರ ತೇಜೋವಧೆಗೆ ಪ್ರಯತ್ನ

ಮಾಜಿ ಮೇಯರ್ ಸಂದೇಶ್ ಸ್ವಾಮಿ ವಿಷಾದ



ಮೈಸೂರು, ಡಿ.31– ಸಂಸದ ಪ್ರತಾಪ್ ಸಿಂಹ ಅವರ ತೇಜೋವಧೆಗೆ ನಿರಂತರ ಪ್ರಯತ್ನ ನಡೆಯುತ್ತಿರುವುದು ವಿಷಾದನೀಯ ಎಂದು ಬಿಜೆಪಿ ಮುಖಂಡ ಮಾಜಿ ಮೇಯರ್ ಸಂದೇಶ್ ಸ್ವಾಮಿ ಹೇಳಿದ್ದಾರೆ.

ಸಂಸತ್‌ನಲ್ಲಿ ಸ್ಮೋಕ್ ಸ್ಪ್ರೇ ಸಿಡಿಸಿದ ಘಟನೆ ಹಿನ್ನೆಲೆಯಲ್ಲಿ ಪಾಸ್ ನೀಡಿದ್ದ ಸಂಸದ ಪ್ರತಾಪ್ ಸಿಂಹ ಅವರನ್ನು ಅವಹೇಳನ ಮಾಡಲಾಯಿತು. ಇದೀಗ ಅವರ ಸಹೋದರನ ವಿಚಾರವನ್ನು ಮುಂದಿಟ್ಟುಕೊಂಡು ತೇಜೋವಧೆ ಮಾಡುತ್ತಿರುವುದು ಸರಿಯಲ್ಲ ಎಂದಿದ್ದಾರೆ.

ಕ್ಷೇತ್ರದ ಮತದಾರರು ಸಂಸತ್ ಭವನದ ಭೇಟಿಗೆ ಪಾಸ್ ಕೇಳಿದಾಗ ಯಾವ ಸಂಸದರಾದರೂ ನೀಡುತ್ತಾರೆ. ಆ ಸಂದರ್ಭದಲ್ಲಿ ಪಾಸ್ ಪಡೆದವರ ಬಗ್ಗೆ ವಿಚಾರಿಸುತ್ತಾರಾದರೂ ಅವರಲ್ಲಿ ದುರುದ್ದೇಶ ಇರುವುದನ್ನು ತಿಳಿಯಲು ಹೇಗೆ ಸಾಧ್ಯ?. ಪಾಸ್ ಪಡೆದವರು ಏಕಾಏಕಿ ಈ ರೀತಿ ಕೃತ್ಯ ನಡೆಸಿದರೆ ಅದಕ್ಕೆ ಸಂಸದರು ಹೊಣೆಯಾಗಲಾರರು. ಆ ಘಟನೆಗೆ ಭದ್ರತಾ ವೈಫಲ್ಯ ಕಾರಣ ಎಂದು ಹಲವು ಸಂಸದರು ಸ್ಪಷ್ಟನೆ ನೀಡಿದ್ದಾಗಿದೆ. ಆದರೂ ಕೆಲವರು ಪ್ರತಾಪ್ ಸಿಂಹ ಅವರ ಫೋಟೋ ಬಳಸಿಕೊಂಡು ಪೋಸ್ಟರ್‌ನಲ್ಲಿ ಕೆಟ್ಟದಾಗಿ ಬಿಂಬಿಸುವ ಮೂಲಕ ಅವಹೇಳನ ಮಾಡಿದರು. ಅದನ್ನು ಕೆಲ ಕಾಂಗ್ರೆಸ್ ಮುಖಂಡರೂ ಖಂಡಿಸಿದ್ದಾರೆ.

ಇನ್ನು ಜಮೀನಿನಲ್ಲಿ ಮರಗಳನ್ನು ಕಡಿದಿರುವ ಸಂಬಂಧ ಅರಣ್ಯ ಇಲಾಖೆ ಬೇಲೂರು ವಲಯದ ಅಧಿಕಾರಿಗಳು ದಾಖಲಿಸಿರುವ ಎಫ್‌ಐಆರ್‌ನಲ್ಲಿ ಪ್ರತಾಪ್ ಸಿಂಹ ಅವರ ಸೋದರನ ಹೆಸರೇ ಇಲ್ಲ. ನಂತರದಲ್ಲಿ ಅವರನ್ನು ಏಕಾಏಕಿ ಬಂಧಿಸಲಾಗಿದೆ. ಅಧಿಕಾರಿಗಳ ಈ ವರ್ತನೆ ಅನುಮಾನಾಸ್ಪದವಾಗಿದೆ. ಯಾರನ್ನು ಮೆಚ್ಚಿಸುವುದಕ್ಕೋ? ಯಾರ ಪ್ರಭಾವಕ್ಕೆ ಒಳಗಾಗಿಯೋ? ಈ ಕ್ರಮ ವಹಿಸಿರಬಹುದು ಎನ್ನಲಾಗುತ್ತಿದೆ. ಪ್ರಕರಣದ ಬಗ್ಗೆ ಸರಿಯಾದ ರೀತಿ ತನಿಖೆ ನಡೆಸಿ, ಸತ್ಯಾಂಶ ತಿಳಿಸಬೇಕು. ಆದರೆ ಈ ನೆಪದಲ್ಲಿ ಪ್ರತಾಪ್ ಸಿಂಹ ಅವರನ್ನು ಅವಹೇಳನ ಮಾಡುವುದು ಸರಿಯಲ್ಲ.

ರಾಜಕಾರಣದಲ್ಲಿ ಟೀಕೆ, ಟಿಪ್ಪಣಿ ಸಹಜ. ಆದರೆ ಅದು ಎಲ್ಲೆ ಮೀರಬಾರದು. ಆರೋಗ್ಯಕರ ಸ್ಪರ್ಧಾ ಮನೋಭಾವ ಮರೆತು ವೈಯಕ್ತಿಕ ದಾಳಿ ನಡೆಸಬಾರದು. ಇದರಿಂದ ಪ್ರತಾಪ್ ಸಿಂಹ ಅವರಿಗೇನು ನಷ್ಟವಿಲ್ಲ. ಸಮರ್ಥವಾಗಿ ಎದುರಿಸುವ ಶಕ್ತಿ ಅವರಿಗಿದೆ. ಪಕ್ಷವೂ ಅವರ ಬೆನ್ನಿಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಜನ ಪ್ರತಿಯೊಂದು ಅಂಶವನ್ನೂ ಪರಾಮರ್ಶಿಸಿ, ಅವಕಾಶ ಬಂದಾಗ ಉತ್ತರಿಸುತ್ತಾರೆ. ಆದರೂ ರಾಜಕೀಯ ಕ್ಷೇತ್ರದ ಭವಿಷ್ಯಕ್ಕೆ ಈ ರೀತಿಯ ಬೆಳವಣಿಗೆ ಮಾರಕವಾಗಬಹುದು ಎಂಬುದನ್ನು ಮರೆಯಬಾರದು ಎಂದು ಸಂದೇಶ್ ಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಕ್ಕರಹಳ್ಳಿ ಕೆರೆಗೆ ಕಲುಷಿತ ನೀರು ತಡೆಗೆ ಒತ್ತಾಯ



ಮೈಸೂರು,ಡಿ.31(ಎಸ್‌ಪಿಎನ್)– ಕುಕ್ಕರಹಳ್ಳಿ ಕೆರೆಗೆ ಬರುತ್ತಿರುವ ಕಲುಷಿತ ನೀರನ್ನು ಈ ಕೂಡಲೇ ನಿಲ್ಲಿಸುವಂತೆ ಒತ್ತಾಯಿಸಿ ವಿಶ್ವಮಾನವ ವಿದ್ಯಾರ್ಥಿ ವೇದಿಕೆಯು, ಮೈಸೂರು ನಗರ ಪಾಲಿಕೆ ಆಯುಕ್ತರಲ್ಲಿ ಮನವಿ ಮಾಡಿದೆ.


ಕಳೆದ 10 ವರ್ಷಗಳ ಹಿಂದೆ ಪಾಲಿಕೆ ಆಯುಕ್ತರಾಗಿದ್ದ ರಾಯ್ಕರ್‌ರವರ ಅಧಿಕಾರ ಅವಧಿಯಲ್ಲಿ ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ, ಎಂಜಿಪಿ ಸೇರಿದಂತೆ ಇತರೆ ಸಂಘಟನೆಗಳು, ಕುಕ್ಕರಹಳ್ಳಿ ಕೆರೆಗೆ ಬರುತ್ತಿರುವ ಕಲುಷಿತ ನೀರನ್ನು ನಿರ್ಬಂಧಿಸುವಂತೆ ಒತ್ತಾಯಿಸಿ ಮನವಿ ಮಾಡಿತ್ತು. ಈ ದೂರಿನನ್ವಯ, ಪಡುವಾರಹಳ್ಳಿ ಬಸವೇಶ್ವರ ಕಲ್ಯಾಣ ಮಂಟಪ ಕಡೆಯಿಂದ ಬರುತ್ತಿರುವ ಜಾಗಕ್ಕೆ ಖುದ್ದು ಆಯುಕ್ತರು ಸ್ಥಳ ಪರಿಶೀಲನೆ ಮಾಡಿದ್ದರು.

ಹೊಸ ಒಳಚರಂಡಿ ಮಾರ್ಗದ ಕಾಮಗಾರಿ ನಡೆಸಲು ಕುಕ್ಕರಹಳ್ಳಿ ಕೆರೆಯ ಒಳಗಡೆ ಜಾಗವನ್ನು ಅಂದು ಮೈಸೂರು ವಿವಿ ಕುಲಪತಿಗಳಾಗಿದ್ದ ಪ್ರೊ.ತಳವಾರ್ ಅವರು ಅನುಮತಿ ನೀಡಿದ್ದರು. ಮಾಜಿ ಕಂದಾಯ ಸಚಿವ ವಿ.ಶ್ರೀನಿವಾಸ್ ಪ್ರಸಾದ್ ಅವರು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂದರ್ಭದಲ್ಲಿ ಈ ಯೋಜನೆಗೆ ಅನುಮತಿ ನೀಡಿ ಹಣ ಬಿಡುಗಡೆ ಮಾಡಿದ್ದರು. ಇದಾದ ನಂತರ ಕೆರೆಗೆ ಕಲುಷಿತ ನೀರು ಬರುವುದು ಕಡಿಮೆಯಾಗಿತ್ತು.

ಆದರೆ, ಕಳೆದ ಕೆಲವು ವರ್ಷಗಳಿಂದ ನಗರ ಪಾಲಿಕೆಯ ಬೇಜವಾಬ್ದಾರಿಯಿಂದ ಒಳಚರಂಡಿಯ ಕೊಳವೆಗಳು ಒಡೆದು ಮತ್ತೆ ಇದರಿಂದ ಜಲಚರ ಜೀವನಕ್ಕೆ ತೊಂದರೆಯಾಗುತ್ತಿದೆ. ಈ ಕೂಡಲೇ ಪಾಲಿಕೆ ಆಯುಕ್ತರು ಸ್ಥಳ ಪರಿಶೀಲನೆ ಮಾಡಿ ಕುಕ್ಕರಹಳ್ಳಿ ಕೆರೆಗೆ ಬರುತ್ತಿರುವ ಒಳಚರಂಡಿ ನೀರನ್ನು ಕೂಡಲೇ ನಿಲ್ಲಿಸಬೇಕೆಂದು ಎಂದು ಎಂ.ಜೆ.ಸುರೇಶ್‌ಗೌಡ ಮನವಿ ಮಾಡಿದ್ದಾರೆ.

ಬೆಂಗಳೂರು ಪ್ರೆಸ್ ಕ್ಲಬ್

ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ವರ್ಷದ ವ್ಯಕ್ತಿ ಪ್ರಶಸ್ತಿ ಪ್ರದಾನ



ಬೆಂಗಳೂರು, ಡಿ.31– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರೆಸ್ ಕ್ಲಬ್ ಆಫ್ ಬೆಂಗಳೂರು ಕೊಡಮಾಡುವ "ವರ್ಷದ ವ್ಯಕ್ತಿ–ವಿಶೇಷ ವ್ಯಕ್ತಿ" ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ, 2024ರ ಪ್ರೆಸ್ ಕ್ಲಬ್ ಡೈರಿಯನ್ನು ಬಿಡುಗಡೆಗೊಳಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವರ್ಷದ ವ್ಯಕ್ತಿ ಪ್ರಶಸ್ತಿ ನೀಡಲಾಯಿತು. ಮಾಜಿ ಸಚಿವ ಶಾಮನೂರು ಶಿವಶಂಕರಪ್ಪ, ಕಾರ್ಮಿಕ ಸಚಿವರಾದ ಸಂತೋಷ್ ಎಸ್ ಲಾಡ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಅವರಿಗೆ ವಿಶೇಷ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲಾಯಿತು. ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿಗಳಾದ ಶಿವರಾಜ್ ಪಾಟೀಲ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂವಿಧಾನವೇ ನಮ್ಮ ಧರ್ಮ. ರಾಜಕೀಯ ಧರ್ಮ ಅನುಸರಿಸುವುದೇ ಸಂವಿಧಾನಕ್ಕೆ ಕೊಡುವ ಗೌರವ. ಸುದೀರ್ಘ ಮತ್ತು ಅರ್ಥಪೂರ್ಣ ಚರ್ಚೆಯ ಬಳಿಕ ನಮ್ಮ ಈ ಸಂವಿಧಾನ ಜಾರಿಯಾಗಿದೆ. ಆದ್ದರಿಂದ ಈ ಸಂವಿಧಾನವನ್ನು ಗೌರವಿಸುವುದು, ಪಾಲಿಸುವುದು ಎಲ್ಲಾ ರಾಜಕೀಯ ಪಕ್ಷಗಳ, ವ್ಯಕ್ತಿಗಳ ಕರ್ತವ್ಯ ಎಂದರು. ಅವಕಾಶ ವಂಚಿತರ ಪರವಾಗಿ, ಧ್ವನಿ ಇಲ್ಲದವರ ಪರವಾಗಿ ಧ್ವನಿ ಎತ್ತಿ ಬೆಂಬಲಿಸುವುದು, ವಸ್ತುನಿಷ್ಠವಾಗಿ ಸುದ್ದಿಗಳನ್ನು ವರದಿ ಮಾಡುವುದು ಪತ್ರಿಕಾ ವೃತ್ತಿಯ ಮೂಲಭೂತ ಮೌಲ್ಯ. ಈ ಮೌಲ್ಯಗಳನ್ನು ಪಾಲಿಸುವುದೇ ಸಂವಿಧಾನಕ್ಕೆ ಕೊಡುವ ಗೌರವ. ಇದನ್ನು ಬಿಟ್ಟು ನನ್ನ ಕಾರಿನ ಮೇಲೆ ಕಾಗೆ ಕುಳಿತದ್ದನ್ನು ದೊಡ್ಡ ಚರ್ಚೆ ಮಾಡಿ ಮೌಢ್ಯ ಬೆಳೆಸಿದಂತಹ ರೀತಿಯಲ್ಲಿ ಕೆಲಸ ಮಾಡಬೇಡಿ ಎಂದು ತಿಳಿಸಿದರು. ಯಾವುದೇ ಸರ್ಕಾರ ತಪ್ಪು ಮಾಡಿದರೂ ಅದನ್ನು ಹೇಳುವ ಧೈರ್ಯ ಪತ್ರಕರ್ತರಿಗೆ ಇರಬೇಕು. ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಅಭಿವೃದ್ಧಿಯ ಚರ್ಚೆ ಮತ್ತು ಕನಸು ಇತ್ತು. ಈಗ ಮಾಧ್ಯಮ ಉದ್ಯಮಿಗಳ ಕೈಗೆ ಸಿಕ್ಕಿಕೊಂಡಿದೆ. ಉದ್ಯಮಿಗಳಿಗೆ ಸಮಾಜಮುಖಿಯಾದ ಯಾವ ಕಾಳಜಿಗಳೂ ಇರುವುದಿಲ್ಲ. ಈ ಬಗ್ಗೆ ಪತ್ರಕರ್ತ ಸಮೂಹ ಎಚ್ಚರ ವಹಿಸಬೇಕು. ನನ್ನನ್ನು ಜೆಡಿಎಸ್ ನಿಂದ ಉಚ್ಚಾಟನೆ ಮಾಡಿದರೇ ಹೊರತು ನಾನು ಜೆಡಿಎಸ್ ಬಿಡಲಿಲ್ಲ. ಹೀಗಾಗಿ ವರದಿ, ವಿಶ್ಲೇಷಣೆ ಮಾಡುವಾಗ ನಾನು ಜೆಡಿಎಸ್ ಪಕ್ಷ ತೊರೆದೆ ಎಂದು ಬರೆಯುವುದು ಸರಿಯಲ್ಲ ಎಂದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಜ.3ಕ್ಕೆ ನಾಗಮಲೆಗೆ ಪಾದಯಾತ್ರೆ; ಇಂದು ವಿಶೇಷ ಪೂಜೆ

ಮೈಸೂರು, ಡಿ.31(ಎಸ್‌ಬಿಡಿ)– ಮೈಸೂರಿನ ಬಿ.ಎಂ.ಶ್ರೀನಗರದ ಶ್ರೀ ಮಲೆಮಹದೇಶ್ವರ ಸ್ವಾಮಿ ಸೇವಾ ಸಮಿತಿ ವತಿಯಿಂದ ನಾಗಮಲೆಗೆ 13ನೇ ವರ್ಷದ ಪಾದಯಾತ್ರೆ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ಸೋಮವಾರ ಬೆಳಗ್ಗೆ 9ಕ್ಕೆ ಶ್ರೀ ಮಹದೇಶ್ವರ ಸ್ವಾಮಿ ಹೋಮ ಮತ್ತು ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.



ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗದ ಬಳಿಕ ಸಂಜೆ 5ಕ್ಕೆ ಬಿ.ಎಂ.ಶ್ರೀನಗರದ ಪ್ರಮುಖ ರಸ್ತೆಗಳಲ್ಲಿ ಶ್ರೀ ಮಹದೇಶ್ವರ ಸ್ವಾಮಿ 'ಹುಲಿ ವಾಹನ' ಮೆರವಣಿಗೆ ಜರುಗಲಿದೆ. ಜ.2 ರಂದು ಮಧ್ಯಾಹ್ನ 12ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಿದ್ದು, ಜ.5ರಂದು ಮುಂಜಾನೆ 3 ಗಂಟೆಗೆ ಭಕ್ತರು ನಾಗಮಲೆಗೆ ಪಾದಯಾತ್ರೆ ಆರಂಭಿಸಲಿದ್ದಾರೆ. ಪಾದಯಾತ್ರೆ ಮೂಲಕ ತೆರಳಿ ದೇವರ ದರ್ಶನ ಪಡೆಯಲಿಚ್ಛಿಸುವವರು ಸೇವಾ ಸಮಿತಿಯ ಟೆಂಪೋ ಮಹದೇವ(9845068258) ಅವರನ್ನು ಸಂಪರ್ಕಿಸಬಹುದು.

ಡಾ. ಬಿ.ಆರ್. ಅಂಬೇಡ್ಕರ್ ದೊಡ್ಡ ಜ್ಞಾನ ಭಂಡಾರವಾಗಿದ್ದರು

ಮಾಜಿ ಶಾಸಕ ಎಂ.ಕೆ.ಸೋಮಶೇಖರ್



ಮೈಸೂರು, ಡಿ.31(ಎಂಟಿವೈ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ದೊಡ್ಡ ಜ್ಞಾನ ಭಂಡಾರವಾಗಿದ್ದು, ಅವರನ್ನು ಅರಿತಷ್ಟೂ ಜೀವನದಲ್ಲಿ ಮುಂದೆ ಬರಲು ಸಾಧ್ಯ ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ, ಪಪಂ ನೌಕರರ ಸಂಘ, ಪಜಾತಿ, ಪಪಂ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಪ್ರಕಟಿಸಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಕಲ್ಪನೆ ಆಧರಿಸಿದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಶೋಷಿತ ಸಮುದಾಯದಲ್ಲಿ ಜಾಗೃತಿ ಮೂಡುತ್ತಿರುವುದು ಶ್ಲಾಘನೀಯ. ಶೋಷಿತ ಸಮುದಾಯದಲ್ಲಿ ಜ್ಞಾನೋದ್ಧಾರ ಆಗಬೇಕು. ಇದೇ ವೇಳೆ ಅಂಬೇಡ್ಕರ್ ಅವರಿಲ್ಲದೇ ಹೋಗಿದ್ದರೆ ದೇಶ ಉದ್ಧಾರ ಆಗುತ್ತಿರಲಿಲ್ಲ. ಅವರು ಅಂತಹ ಸಂವಿಧಾನ ನೀಡದಿದ್ದರೆ ದೇಶದ ಇಂದಿನ ಪರಿಸ್ಥಿತಿ ಏನಾಗುತ್ತಿತ್ತೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಹೀಗಾಗಿ ಸಂವಿಧಾನ ಉಳಿಸುವ ಕೆಲಸ ಮಾಡಬೇಕು. ಅಂಬೇಡ್ಕರ್ ಅವರನ್ನು ಅಪ್ಪಿಕೊಂಡಷ್ಟು ನಾವು ಜ್ಞಾನವಂತರಾಗುತ್ತೇವೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಅಯೋಧ್ಯೆಯಲ್ಲಿ ಶ್ರೀರಾಮಮಂದಿರ ನಿರ್ಮಾಣವನ್ನು ವೈಭವೀಕರಿಸಲಾಗುತ್ತಿದೆ. ಗ್ರಾಮ ಗ್ರಾಮಗಳಲ್ಲೂ ಮೊದಲಿನಿಂದಲೂ ಶ್ರೀರಾಮ ಮಂದಿರಗಳಿವೆ ಇದರಿಂದ ದೇಶದ ಉದ್ಧಾರ ಆಗುತ್ತಿದೆಯೇ? ಎಂದು ಪ್ರಶ್ನಿಸಿದ ಅವರು, ಇಂದು ನಿರುದ್ಯೋಗ, ಹಸಿವಿನಿಂದ ಜನರು ಬಳಲುತ್ತಿದ್ದಾರೆ. ಆದ್ದರಿಂದ ಸಮಾನತೆ ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಜಾರಿಗೊಳಿಸಬೇಕೇ ಹೊರತು ಜಾತಿ–ಜಾತಿ, ಧರ್ಮ–ಧರ್ಮಗಳ ನಡುವೆ ಸಂಘರ್ಷ ತರುವುದಲ್ಲ. ಆದ್ದರಿಂದ ಸಮಾನತೆ ನೀಡುವ ಆಡಳಿತ ಅಗತ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪರಿಶಿಷ್ಟ ಜಾತಿ, ಪಪಂ ನೌಕರರ ಸಂಘ, ಪ.ಜಾತಿ, ಪ.ಪಂ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು, ಅಧಿಕಾರಿ ವರ್ಗದವರಾದ ರೇವಣ್ಣ, ಹೆಚ್.ಶ್ರೀನಿವಾಸ್, ರವೀಂದ್ರ, ಪುಟ್ಟೇಗೌಡ ಇನ್ನಿತರರು ಇದ್ದರು.

ಕಲೆಗಳು ಉಳಿದಿರುವುದೇ ಕಲಾ ಪೋಷಕರಿಂದ

ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಅಭಿಮತ



ಮೈಸೂರು, ಡಿ.31(ಎಸ್‌ಪಿಎನ್)–ಮೈಸೂರು ಸಂಸ್ಥಾನದ ಆಶ್ರಯದಲ್ಲಿ ಪೋಷಣೆಯಾಗಿದ್ದ ಕಲೆ, ಸಾಹಿತ್ಯ, ಸಂಗೀತ, ನೃತ್ಯ ಇಂದಿಗೂ ಪ್ರದರ್ಶನ ಕಾಣುತ್ತಿವೆ. ಇಂದು ಈ ಕಲೆಗಳು ಉಳಿದಿರುವುದು ಕಲಾ ಪೋಷಕರಿಂದ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದಲ್ಲಿರುವ ರಮಾಗೋವಿಂಧ ಮಂದಿರದಲ್ಲಿ ಭರತಾಂಜಲಿ ನೃತ್ಯ ಶಾಲೆ ವತಿಯಿಂದ ವಿದುಷಿ ಶೀಲಾ ಶ್ರೀಧರ್ ಮತ್ತು ವಿದುಷಿ ಶಾಶ್ವತಿ ರಘನಂದನ್ ನೇತೃತ್ವದಲ್ಲಿ ನಡೆದ ಭರತನಾಟ್ಯ ಪ್ರದರ್ಶನಕ್ಕೆ ಭಾನುವಾರ ಚಾಲನೆ ನೀಡಿ ಮಾತನಾಡಿದರು.

ಗುರುವಿನ ಸಾಧನೆಯನ್ನು ಮೀರಿಸುವ ಶಿಷ್ಯೆಯರನ್ನು ಹೊಂದುವುದು ಸುಲಭದ ಮಾತಲ್ಲ. ಓರ್ವ ಕಲಾವಿದನನ್ನು ತರಬೇತುಗೊಳಿಸಲು ಅನೇಕ ವರ್ಷಗಳ ಗುರುವಿನ ಶ್ರಮವಿರುತ್ತದೆ. ಇಂದಿನ ವೇದಿಕೆಯಲ್ಲಿ ವಿದುಷಿ ಶೀಲಾ ಶ್ರೀಧರ್ ಅವರ ಶಿಷ್ಯವೃಂದ ಪ್ರದರ್ಶಿಸಿದ ಭರತನಾಟ್ಯ ಮನಮೋಹಕವಾಗಿತ್ತು. ಈ ಸಾಧನೆ ಹಿಂದೆ ಶೀಲಾ ಶ್ರೀಧರ್ ಅವರ ಅನೇಕ ವರ್ಷಗಳ ಶ್ರಮವಿದೆ ಎಂದರು.

ಮಾಜಿ ಶಾಸಕ ಎಲ್.ಬಾಲರಾಜ್ ಮಾತನಾಡಿ, ಕಲೆ, ಸಾಹಿತ್ಯ, ನೃತ್ಯ, ಸಂಗೀತ ಇಲ್ಲದ ಜಗತ್ತನ್ನು ಊಹಿಸಲೂ ಸಾಧ್ಯವಿಲ್ಲ. ಹಾಗಾಗಿ ಜಗತ್ತಿನ ಸ್ವಾಸ್ಥ್ಯ ಉಳಿಯಬೇಕಾದರೆ, ಕಲಾ ಚಟುವಟಿಕೆಗಳ ಅಗತ್ಯತೆ ಇದೆ ಎಂದು ತಿಳಿಸಿದರು. ಈ ವೇಳೆ ಶಿವಮೊಗ್ಗದ ನಟನಂ ಬಾಲ ನಾಟ್ಯ ನಿರ್ದೇಶಕ ವಿದ್ವಾನ್ ಕೇಶವ ಕುಮಾರ್ ಪಿಳ್ಳೈ ಉಪಸ್ಥಿತರಿದ್ದರು.

ಪ್ರಕರಣಗಳ ಶೀಘ್ರ ಇತ್ಯರ್ಥಗೊಳಿಸುವ ನಿಟ್ಟಿನಲ್ಲಿ

ವಕೀಲರು, ನ್ಯಾಯಾಧೀಶರು ಕಾರ್ಯಪ್ರವೃತ್ತರಾಗಬೇಕು

ಹೈಕೋರ್ಟ್ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್‌ಕುಮಾರ್



ಮೈಸೂರು,ಡಿ.31(ಪಿಎಂ)– ನ್ಯಾಯಾಂಗ ವ್ಯವಸ್ಥೆಯಲ್ಲಿ ಪ್ರಕರಣಗಳನ್ನು ಶೀಘ್ರ ಇತ್ಯರ್ಥಗೊಳಿಸುವ ನಿಟ್ಟಿನಲ್ಲಿ ವಕೀಲರು ಹಾಗೂ ನ್ಯಾಯಾಧೀಶರು ಕಾರ್ಯಪ್ರವೃತ್ತರಾಗಬೇಕಿದೆ ಎಂದು ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್‌ಕುಮಾರ್ ಹೇಳಿದರು.

ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಪುಷ್ಕರ ಪ್ರಕಾಶನದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 'ಲಾ ಫಾರ್ ಆಲ್' ಕನ್ನಡ ಕಾನೂನು ಮಾಸ ಪತ್ರಿಕೆಯ ಡಿಸೆಂಬರ್ ಸಂಚಿಕೆ, ಕ್ಯಾಲೆಂಡರ್ ಬಿಡುಗಡೆ ಹಾಗೂ ಹಿರಿಯ ವಕೀಲರ ಗುರುವಂದನಾ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಿಕೆಯ ಡಿಸೆಂಬರ್ ಸಂಚಿಕೆ ಬಿಡುಗಡೆ ಮಾಡಿದ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ ಮಾತನಾಡಿದರು.

ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಇದೇ ವೇಳೆ ವಕೀಲ ವೃತ್ತಿಯಲ್ಲಿ 50 ವರ್ಷಗಳಿಗೂ ಮೇಲ್ಪಟ್ಟು ಸೇವೆ ಸಲ್ಲಿಸುತ್ತಿರುವ ಹಲವು ಹಿರಿಯ ವಕೀಲರನ್ನು ಸನ್ಮಾನಿಸಲಾಯಿತು. ಹೈಕೋರ್ಟ್ ಹಿರಿಯ ವಕೀಲ ಹೆಚ್.ಎಸ್.ಚಂದ್ರಮೌಳಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಹಿರೇಮಠ್, ಹಿರಿಯ ವಕೀಲ ಕೆ.ಆರ್. ಶಿವಶಂಕರ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಮಾಜಿ ಅಧ್ಯಕ್ಷ ಸಿ.ಎಂ.ಜಗದೀಶ್, ಲಾ ಫಾರ್ ಆಲ್ ಪತ್ರಿಕೆ ಪ್ರಧಾನ ಸಂಪಾದಕ ಕೆ.ಬಿ.ಸುರೇಶ್ ಮತ್ತಿತರರು ಹಾಜರಿದ್ದರು.

ಹೊಸ ವರ್ಷ ಸಂಭ್ರಮಾಚರಣೆಗೆ ದಶಕೋಟಿ ಮೌಲ್ಯದ ಮದ್ಯ ಮಾರಾಟ

- ಪಾರ್ಟಿಹಾಲ್ ಮಾತ್ರವಲ್ಲದೆ ಮನೆಗಳಲ್ಲೂ ಮನೆ ಮಾಡಿದ ಸಂಭ್ರಮಾಚರಣೆ
- ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಸಿಗದ ಕೆಲವು ಬ್ರಾಂಡ್ ಮದ್ಯ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಡಿ.31–ಹೊಸ ವರ್ಷವನ್ನು ಸಂಭ್ರಮದಿಂದ ಬರಮಾಡಿಕೊಳ್ಳಲು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ವಿವಿಧ ಬಗೆಯ ಸಿದ್ಧತೆಗಳನ್ನು ಮಾಡಿಕೊಂಡಿರುವ ಬೆನ್ನಲ್ಲೇ ಜಿಲ್ಲೆಯಲ್ಲಿ ಒಂದೇ ದಿನ 12 ರಿಂದ 15 ಕೋಟಿ ರೂ. ಮೌಲ್ಯದ ಮದ್ಯ ಖರೀದಿಸುವ ಮೂಲಕ ಮದ್ಯಪ್ರಿಯರು ಹೊಸ ವರ್ಷವನ್ನು ಆಚರಿಸಿದ್ದಾರೆ.

ಹೊಸ ವರ್ಷವನ್ನು ಮದ್ಯಪಾನ, ಸಂಗೀತ ಗೋಷ್ಠಿ ಸೇರಿದಂತೆ ವಿವಿಧ ಆಯಾಮಗಳಲ್ಲಿ ಸ್ವಾಗತಿಸುವ ಪದ್ಧತಿ ಎಲ್ಲೆಡೆ ಆಚರಿಸಲಾಗುತ್ತಿದ್ದು, ಈ ವರ್ಷ ಸುರಪಾನದ ಮೂಲಕ ನೂತನ ವರ್ಷವನ್ನು ಸ್ವಾಗತಿಸಿ, 2023ಕ್ಕೆ ವಿದಾಯ ಹೇಳಿದ್ದಾರೆ.

ಮೈಸೂರು ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ವಿವಿಧ ಬಗೆಯ ಮದ್ಯ ಮಾರಾಟಗಾರರ ಲೈಸೆನ್ಸ್ ಹೊಂದಿರುವ 800ಕ್ಕೂ ಹೆಚ್ಚು ಮದ್ಯ ಮಾರಾಟ ಮಳಿಗೆ, ಕೌಂಟರ್‌ಗಳಿದ್ದು, ಅದರಲ್ಲಿ ಮೈಸೂರು ಜಿಲ್ಲೆಯಲ್ಲಿ 500 ರಿಂದ 600ಕ್ಕೂ ಹೆಚ್ಚು ಮದ್ಯ ಮಾರಾಟ ಸಂಸ್ಥೆಗಳಿವೆ. ಈ ಸಂಸ್ಥೆಗಳಿಗೆ ಮೈಸೂರಿನ ಹೆಬ್ಬಾಳ ಮತ್ತು ಕೂರ್ಗಳ್ಳಿಯಲ್ಲಿರುವ ಡಿಪೋಗಳಿಂದ ವಿವಿಧ ಬಗೆಯ ಮದ್ಯ ಸರಬರಾಜಾಗಲಿದ್ದು,



ವಿವಿಧ ಲೈಸೆನ್ಸ್‌ದಾರರು ಸಲ್ಲಿಸಿರುವ ಇಂಡೆಂಟ್‌ಗೆ ಅನುಗುಣವಾಗಿ ಮದ್ಯ ಪೂರೈಸಲಾಗಿದೆ. ಈ ಹಿನ್ನೆಲೆಯಲ್ಲಿ ಡಿ.31ರ ಸಂಜೆಯಿಂದ ಮಧ್ಯರಾತ್ರಿವರೆಗೆ ನಡೆಯುವ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮದ್ಯದ ಹೊಳೆಯೇ ಹರಿದಿದೆ.

ಜಿಲ್ಲೆಯಲ್ಲಿ ಸಿಎಲ್–4 (ಕ್ಲಬ್), ಸಿಎಲ್–2(ವೈನ್ ಶಾಪ್), ಸಿಎಲ್–7(ವಿತ್ ಲಾಡ್ಜ್), ಸಿಎಲ್–9 (ಬಾರ್), ಸಿಎಲ್–11ಸಿ (ಎಂಎಸ್‌ಐಎಲ್) ಹಾಗೂ ಇನ್ನಿತರ ಮದ್ಯ ಮಾರಾಟ ಮಳಿಗೆಗಳಿದ್ದು, 500 ರಿಂದ 600 ಮಳಿಗೆಗಳು ಜಿಲ್ಲೆಯಲ್ಲಿ ಮದ್ಯಪಾನಿಗಳಿಗೆ ಪ್ರತಿ ದಿನ ವಿವಿಧ ಬಗೆಯ ಮದ್ಯ ಪೂರೈಸುತ್ತಿವೆ ಅಬಕಾರಿ ಇಲಾಖೆ ಹಾಗೂ ಮದ್ಯವರ್ತಕರ ಸಂಘದ ಮೂಲಗಳ ಪ್ರಕಾರ ಮೈಸೂರು ಜಿಲ್ಲೆಯಲ್ಲಿಯೇ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ 12 ರಿಂದ 15 ಕೋಟಿ ರೂ. ಮೌಲ್ಯದ ಮದ್ಯ ಪೂರೈಕೆಯಾಗಿದೆ ಎಂದು ತಿಳಿದು ಬಂದಿದೆ.

10 ದಿನದಿಂದಲೂ ಮದ್ಯದ ಹೊಳೆ: ಸಾಲು–ಸಾಲು ರಜೆ, ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಕಳೆದ 10 ದಿನಗಳಿಂದಲೂ ಮೈಸೂರಿನ 2 ಮದ್ಯ ಸರಬರಾಜು ಡಿಪೋಗಳಿಂದ ಭಾರಿ ಪ್ರಮಾಣದ ಮದ್ಯ ಮಳಿಗೆಗಳಿಗೆ ಸರಬರಾಜಾಗಿದೆ. ಈ ಹಿಂದೆ 5 ಸಾವಿರದಿಂದ ಆರೂವರೆ ಸಾವಿರ ಬಾಕ್ಸ್ ಮದ್ಯ ಸರಬರಾಜಾಗುತ್ತಿತ್ತು. ಆದರೆ ಕಳೆದ 10 ದಿನಗಳಿಂದ ಪ್ರತೀ ದಿನ 8 ರಿಂದ 10 ಸಾವಿರ ಬಾಕ್ಸ್ ಮದ್ಯ ಒಂದೊಂದು ಡಿಪೋಗಳಿಂದ ಪೂರೈಕೆಯಾಗಿದೆ. ಹತ್ತೂ ದಿನದಿಂದಲೂ ಮದ್ಯ ಮಾರಾಟ ಮಳಿಗೆಗಳಲ್ಲಿ ಉಳಿದಿರುವ ಮದ್ಯ ಸೇರಿದಂತೆ ಶನಿವಾರ ಮತ್ತು ಭಾನುವಾರ ಖರೀದಿಸಿರುವ ಮದ್ಯವೂ ಸೇರಿದಂತೆ ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ 12 ಕೋಟಿ ರೂ.ಗೂ ಮಿಗಿಲಾದಂತಹ ಮದ್ಯದ ಹೊಳೆ ಮದ್ಯಪಾನಿಗಳ ಹೊಟ್ಟೆ ಸೇರಿದೆ.

> "ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಮದ್ಯ ಮಾರಾಟ ಮಳಿಗೆಗಳಲ್ಲಿ ಉತ್ತಮವಾದ ವಹಿವಾಟು ನಡೆದಿದೆ. ಮೈಸೂರಿನಲ್ಲಿರುವ ಎರಡು ಡಿಪೋಗಳಲ್ಲಿ ವಿವಿಧ ಮಾದರಿಯ ರಹದಾರಿ ಪಡೆದಿರುವ ಸನ್ನದುದಾರರು ತಮ್ಮ ಬೇಡಿಕೆಗೆ ಅನುಗುಣವಾಗಿ ಮದ್ಯ ಪಡೆದು ಮಾರಾಟ ಮಾಡಿದ್ದಾರೆ.
> –ಶ್ರೀನಿವಾಸ್, ಮದ್ಯ ಮಾರಾಟಗಾರರು

ಕೂರ್ಗಳ್ಳಿಯಲ್ಲಿರುವ ಮದ್ಯ ಪೂರೈಕೆ ಡಿಪೋದಿಂದ ಭಾನುವಾರ ಒಂದೇ ದಿನ 2,84,16,000 ರೂ. ಮೌಲ್ಯದ ಮದ್ಯ ಸರಬರಾಜಾಗಿದೆ. ಹೆಬ್ಬಾಳ ಬಡಾವಣೆಯಲ್ಲಿರುವ ಡಿಪೋದಿಂದ ಸುಮಾರು 2 ಕೋಟಿ ರೂ. ಮೌಲ್ಯದ ಮದ್ಯ ಪೂರೈಕೆಯಾಗಿದೆ. ಈ ಹಿನ್ನೆಲೆಯಲ್ಲಿ ಹೊಸ ವರ್ಷದ ಸಂಭ್ರಮವೂ ನಿರೀಕ್ಷೆಗೂ ಮೀರಿದ ಸುರಪಾನದ ಮೂಲಕ ಆಚರಣೆಯಾಗಿರುವುದು ಕಂಡು ಬಂದಿದೆ.

ಎಂಎಸ್‌ಐಎಲ್ ಮುಂದೆ ಜನಜಂಗುಳಿ: ಮೈಸೂರಿನ ವಿವಿಧೆಡೆ ಇರುವ ಎಂಎಸ್‌ಐಎಲ್ ಮಳಿಗೆಗಳಲ್ಲಿ ಬೆಳಗ್ಗಿನಿಂದಲೇ ಜನ ತಮಗಿಷ್ಟವಾದ ಮದ್ಯ ಖರೀದಿಸುವಲ್ಲಿ ಮುಗಿ ಬಿದ್ದಿದ್ದರು. ಹೋಟೆಲ್, ಕ್ಲಬ್, ರೆಸ್ಟೋರೆಂಟ್ ಹಾಗೂ ವಿವಿಧ ಬಾರ್‌ಗಳಲ್ಲಿ ಮದ್ಯಪಾನ ಮಾಡಲು ಬರುವವರೊಂದಿಗೆ ಮನೆಗಳಲ್ಲಿಯೇ ಪಾರ್ಟಿ ಮಾಡುವವರ ಸಂಖ್ಯೆ ಹೆಚ್ಚಾಗಿದ್ದರಿಂದ ಎಂಎಸ್‌ಐಎಲ್ ಮಳಿಗೆಗಳಲ್ಲಿ ಮದ್ಯ ಖರೀದಿ ಮಾಡುವವರ ಸಂಖ್ಯೆ ಹೆಚ್ಚಾಗಿತ್ತು

ಕನ್ನಡಕ್ಕೆ ಮಾತ್ರ ಸೀಮಿತಗೊಳಿಸಿದ್ದರಿಂದ ಕುವೆಂಪು ಅವರಿಗೆ ನೊಬೆಲ್ ಪ್ರಶಸ್ತಿ ಕೈ ತಪ್ಪಿತು

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ. ನಾಗಣ್ಣ ಅಭಿಮತ



ಮೈಸೂರು,ಡಿ.31(ಎಂಟಿವೈ)– ರಾಷ್ಟ್ರಕವಿ ಕುವೆಂಪು ಅವರನ್ನು ಕನ್ನಡಕ್ಕೆ ಮಾತ್ರ ಸೀಮಿತಗೊಳಿಸಿ, ಅನ್ಯಭಾಷೆ ಹಾಗೂ ಜಗತ್ತಿಗೆ ಪರಿಚಯಿಸದ ಕಾರಣ ಅವರಿಗೆ ನೊಬೆಲ್ ಪ್ರಶಸ್ತಿ ಕೈ ತಪ್ಪಿದೆ ಎಂದು ಮೈಸೂರು ವಿವಿಯ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ ಅಭಿಪ್ರಾಯಪಟ್ಟಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ಭಾನುವಾರ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ರಾಷ್ಟ್ರಕವಿ ರವೀಂದ್ರನಾಥ ಠಾಗೂರ್ ಅವರಂತೆ ನೊಬೆಲ್ ಬಹುಮಾನ ಪಡೆಯುವ ಅರ್ಹತೆ ಕುವೆಂಪು ಅವರಿಗೂ ಇತ್ತು. ಸಾಹಿತ್ಯ ಕ್ಷೇತ್ರದಲ್ಲಿ ಕುವೆಂಪು ಅವರು ಅಪಾರ ಸಾಧನೆ ಮಾಡಿದ್ದರೂ, ಅವರನ್ನು ಅನ್ಯ ಭಾಷೆಗೆ ಪರಿಚಯಿಸುವಲ್ಲಿ ನಾವು ವಿಫಲರಾಗಿದ್ದೇವೆ. ಈ ಸಂಬಂಧ ಹೊರ ರಾಜ್ಯಗಳ ಸಾಹಿತಿಗಳು, ವಿದ್ವಾಂಸರು ಬೇಸರ ವ್ಯಕ್ತಪಡಿಸಿದ್ದಾರೆ. ನಾವು ಕುವೆಂಪು ಅವರನ್ನು ಕನ್ನಡಕ್ಕೆ ಮಾತ್ರ ಸೀಮಿತಗೊಳಿಸಿದ್ದೇವೆ ಎಂದರು.

ಇನ್ನಾದರೂ ವಿಶ್ವದುದ್ದಗಲಕ್ಕೂ ಕುವೆಂಪು ಅವರ ಸಾಹಿತ್ಯವನ್ನು ಪಸರಿಸುವ ಹಾಗೂ ಅಧ್ಯಯನ ಮಾಡುವ ಕೆಲಸಗಳು ಹೆಚ್ಚಾಗಬೇಕು. ಈಗಾಗಲೇ ಕುವೆಂಪು ಅವರ ಕುರಿತು ಇದುವರೆಗೆ 11 ಪಿಹೆಚ್.ಡಿ ಆಗಿವೆ. ತತ್ವಜ್ಞಾನಿಯಾಗಿದ್ದ ಕುವೆಂಪು ಅವರ ಸಾಹಿತ್ಯವನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿ, ಎಲ್ಲೆಡೆ ಪಸರಿಸಬೇಕು ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ಕುವೆಂಪು ಅವರು ವಿಶ್ವ ಮಾನವರಾಗೋಣ ಎನ್ನುತ್ತಾರೆ. ಆದರೆ, ನಾವು ಎಷ್ಟರ ಮಟ್ಟಿಗೆ ವಿಶ್ವಮಾನವರಾಗಿದ್ದೇವೆ ಎನ್ನುವ ಪ್ರಶ್ನೆ ಕಾಡುತ್ತಿದೆ. ಬುದ್ಧ, ಬಸವ, ಅಂಬೇಡ್ಕರ್ ಅವರ ಗುಣಗಳನ್ನು ಹೊಂದಿರುವ ವ್ಯಕ್ತಿತ್ವ ಕುವೆಂಪು ಅವರದ್ದಾಗಿತ್ತು. ಒಂದು ಕಣ್ಣಲ್ಲಿ ಕರ್ನಾಟಕ, ಇನ್ನೊಂದು ಕಣ್ಣಲ್ಲಿ ಭಾರತವನ್ನು ಕುವೆಂಪು ಕಾಣುತ್ತಿದ್ದರು. ಹಲವು ಆಯಾಮಗಳಲ್ಲಿ ಕುವೆಂಪು ಹೋರಾಟ ಮಾಡಿದ್ದಾರೆ. ಕುವೆಂಪು ಕನ್ನಡಪರ ಹೋರಾಟವನ್ನು ಸದ್ದಿಲ್ಲದೆ ಮಾಡಿದ್ದಾರೆ. ಬರವಣಿಗೆ ಮೂಲಕ ದೇಶ ಮತ್ತು ನಾಡಿಗಾಗಿ ಹೋರಾಟ ಮಾಡಿದ್ದಾರೆ. ಕನ್ನಡದೊಂದಿಗೆ ಸಾಹಿತ್ಯದ ಮೂಲಕ ದೇಶವನ್ನು ಕಟ್ಟಿದ್ದಾರೆ. ಇಂದು ವಿಶ್ವಮಟ್ಟದಲ್ಲಿ ಕನ್ನಡ ಬೆಳೆಯಲು ಕುವೆಂಪು ಮತ್ತು ವರನಟ ಡಾ.ರಾಜ್‌ಕುಮಾರ್ ಮಾಡಿದ ಕೆಲಸವೇ ಕಾರಣ. ವಿಶ್ವ ಮಾನವ ಸಂದೇಶವನ್ನು ಜಗತ್ತಿಗೆ ಸಾರಿದ ಮಹಾ ಕವಿ ಕುವೆಂಪು. ಸರ್ವಜನಾಂಗದ ಶಾಂತಿಯ ತೋಟ ಎಂಬ ಸಾಲಿಗೆ ನೊಬೆಲ್ ಪ್ರಶಸ್ತಿ ದೊರೆಯಬೇಕಾಗಿತ್ತು ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ನಾಗಣ್ಣ, ನೈಪುಣ್ಯ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಆರ್.ರಘು, ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರು ಪತ್ರಿಕೆಯ ಛಾಯಾಗ್ರಾಹಕ ಎಂ.ಎನ್. ಲಕ್ಷ್ಮೀ ನಾರಾಯಣ ಯಾದವ್ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಸಮಾಜ ಸೇವಕ ಡಾ.ಹೆಚ್.ವಿ.ಶುಶ್ರೂತಗೌಡ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಗೌರವ ಸಮರ್ಪಿಸಿದರು. ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್. ಜಯಪ್ರಕಾಶ್ (ಜೆಪಿ), ಸಮಾಜ ಸೇವಕ ರಾಮಚಂದ್ರ, ಕನ್ನಡ ಚಳವಳಿ ಕೇಂದ್ರ ಸಮಿತಿಯ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಉಪಸ್ಥಿತರಿದ್ದರು.



ಅಖಿಲ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘ ವತಿಯಿಂದ ಹೊರತಂದಿರುವ 2024ನೇ ವರ್ಷದ ಕ್ಯಾಲೆಂಡರ್ ಅನ್ನು ಎಐಸಿಸಿ ಅಧ್ಯಕ್ಷರಾದ ಡಾ.ಮಲ್ಲಿಕಾರ್ಜುನ ಖರ್ಗೆ ಅವರು ಬೆಂಗಳೂರಿನ ತಮ್ಮ ನಿವಾಸದಲ್ಲಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷರೂ ಆದ ಕೆಪಿಸಿಸಿ ಕಾರ್ಯದರ್ಶಿ ಸಿ.ನರೇಂದ್ರ, ಗ್ರಾಮ ಪಂಚಾಯ್ತಿ ಸದಸ್ಯರಾದ ಬಸವನಾಯಕ, ಸೀಗಳ್ಳಿ ಕುಮಾರ್, ಚಾಮರಾಜನಗರ ಕಾರ್ಮಿಕ ವಿಭಾಗದ ಅಧ್ಯಕ್ಷ ವಿಷಕಂಠ ಮೂರ್ತಿ, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಬಿಳಿಕೆರೆ ಸ್ವಾಮಿ, ಕಾರ್ಯಧ್ಯಕ್ಷ ಹಿನಕಲ್ ಮಂಜು, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಧನಗಳ್ಳಿ ಪ್ರವೀಣ್, ಹೂಟಗಳ್ಳಿ ನವೀನ್ ಕುಮಾರ್, ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಕಮರಳ್ಳಿ ಸಂತೋಷ್, ಐಎನ್‌ಬಿಸಿಡಬ್ಲ್ಯೂಎಫ್ ರಾಜ್ಯ ಯುವ ಘಟಕದ ಅಧ್ಯಕ್ಷ ನಾಗರಾಜು, ಉಪಾಧ್ಯಕ್ಷ ಪುಟ್ಟರಾಜು, ನಾಗವಾಲ ಶಿವು ಉಪಸ್ಥಿತರಿದ್ದರು.

ವಾರದಲ್ಲಿ ಮೈಸೂರು ಮೃಗಾಲಯಕ್ಕೆ 2.28 ಲಕ್ಷ ಪ್ರವಾಸಿಗರ ಭೇಟಿ

ಮೈಸೂರು, ಡಿ.31(ಎಸ್‌ಬಿಡಿ)– ವರ್ಷಾಂತ್ಯ ಹಿನ್ನೆಲೆಯಲ್ಲಿ ಮೈಸೂರಿಗೆ ಪ್ರವಾಸಿಗರು ಹರಿದುಬರುತ್ತಿದ್ದು, ಶ್ರೀ ಚಾಮರಾಜೇಂದ್ರ ಮೃಗಾಲಯಕ್ಕೆ ಕಳೆದ 8 ದಿನಗಳಲ್ಲಿ 2.28 ಲಕ್ಷಮಂದಿ ಭೇಟಿ ನೀಡಿದ್ದಾರೆ.

ಡಿ.23ರಂದು 25,860 ಮಂದಿ, ಡಿ.24ರಂದು 40,761, ಡಿ.25ರಂದು 35,344, ಡಿ.26ರಂದು 14,476, ಡಿ.27ರಂದು 28,425, ಡಿ.28ರಂದು 29,906, ಡಿ.29ರಂದು 26,450 ಹಾಗೂ ಡಿ.30ರಂದು 27,092 ಸೇರಿ ಒಟ್ಟು 2,28,314 ಮಂದಿ ಮೃಗಾಲಯವನ್ನು ವೀಕ್ಷಿಸಿದ್ದಾರೆ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂಸೆಯನ್ನು ವಿರೋಧಿಸಬೇಕೇ ಹೊರತು ಮತ, ಧರ್ಮವನ್ನಲ್ಲ

ಕಾಗಿನೆಲೆ ಗುರುಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಅಭಿಮತ



ಮೈಸೂರು, ಡಿ.31(ಎಸ್‌ಪಿಎನ್)– ಸಮುದಾಯದ ವಿಷಯ ಬಂದಾಗ ನಾವು ಅಲ್ಲಿನ ಹಿಂಸೆಯನ್ನು ವಿರೋಧಿಸಬೇಕೇ ಹೊರತು, ಯಾವುದೇ ಮತ ಅಥವಾ ಧರ್ಮವನ್ನಲ್ಲ ಎಂದು ಕಾಗಿನೆಲೆ ಕನಕ ಗುರುಪೀಠ ಮೈಸೂರು ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಮುಖಂಡರಿಗೆ ಕಿವಿಮಾತು ಹೇಳಿದರು.

ಮೈಸೂರು ಕುವೆಂಪುನಗರದಲ್ಲಿ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗ ಹಾಗೂ ಶ್ರೀ ಕನಕದಾಸ ನೌಕರರ ಸಂಘದ ಸಹಯೋಗದೊಂದಿಗೆ ನಡೆದ ಸಂತಶ್ರೇಷ್ಠ ಶ್ರೀ ಕನಕದಾಸರ 536ನೇ ಜಯಂತ್ಯುತ್ಸವದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದಾಸ ಸಾಹಿತ್ಯ ಮೂಲಕ ಸಮಾಜದ ಭಿನ್ನಾಭಿಪ್ರಾಯವನ್ನು ತೊಡೆದು ಹಾಕುವಲ್ಲಿ ದಾಸಶ್ರೇಷ್ಠ ಕನಕದಾಸರ ಕೊಡುಗೆ ಅಪಾರ ಎಂದರು.

ಭಕ್ತ ಕನಕದಾಸರು ಕೀರ್ತನೆಗಳನ್ನು ರಚಿಸಿ, ಕನ್ನಡ ಸಾಹಿತ್ಯ ಬೆಳವಣಿಗೆಗೆ ತಮ್ಮದೇ ಕೊಡುಗೆ ನೀಡಿದ್ದು, ಈ ಮೂಲಕ ಸಾಮಾಜಿಕ ಸಮಾನತೆ ಕುರಿತು ಸಂದೇಶ ಸಾರಿದ್ದಾರೆ. ಬಾಡದಂತಹ ಕುಗ್ರಾಮದಲ್ಲಿ ಜನಿಸಿ, ಅನೇಕ ಏಳುಬೀಳುಗಳಿದ್ದರೂ ಇಂದು ಅವರ ಸಾಧನೆ ಎತ್ತರದ ಸ್ಥಾನದಲ್ಲಿದೆ. ಇವರ ತತ್ವಾದರ್ಶಗಳು ಇಂದಿನ ಪೀಳಿಗೆಗೆ ಮಾದರಿ ಎಂದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದ ನಿಯಂತ್ರಣ ಅಧಿಕಾರಿ ಬಿ ಶ್ರೀನಿವಾಸ್. ನಿವೃತ್ತ ಅಧಿಕಾರಿ ಎಚ್.ಎಂ.ನಾಗರಾಜ್ ಮೂರ್ತಿ, ನಗರ ಪಾಲಿಕೆ ಮಾಜಿ ಸದಸ್ಯ ಗೋಪಿ, ಹಿರಿಯ ಕಾರ್ಮಿಕ ಮುಖಂಡ ಎಂ.ಮಲ್ಲಯ್ಯ, ಸಂಘದ ಗೌರವಾಧ್ಯಕ್ಷ ಕೃಷ್ಣೇಗೌಡ, ಅಧ್ಯಕ್ಷ ಬಿ.ಜವರೇಗೌಡ, ಕನಕ ಜಯಂತಿ ಸಮಿತಿ ಅಧ್ಯಕ್ಷ ಕೆ.ಲೋಕೇಶ್, ಖಜಾಂಚಿ ಎಸ್. ರಘು ಸೇರಿದಂತೆ ಇತರರಿದ್ದರು.

ಮೈಸೂರು ಜಿಲ್ಲಾ ಕುಂಬಾರರ ಜಾಗೃತ ವೇದಿಕೆ ಅಸ್ತಿತ್ವಕ್ಕೆ



ಮೈಸೂರು,ಡಿ.31(ಎಂಟಿವೈ)– ಕುಂಬಾರ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸುವ ನಿಟ್ಟಿನಲ್ಲಿ ನೂತನವಾಗಿ ಮೈಸೂರು ಜಿಲ್ಲಾ ಕುಂಬಾರರ ಜಾಗೃತಿ ವೇದಿಕೆ ಅಸ್ತಿತ್ವಕ್ಕೆ ತಂದಿರುವುದಾಗಿ ಗೌರವಾಧ್ಯಕ್ಷೆ ರೇಣುಕಾಂಬ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರ ಹಾಗೂ ತಾಲೂಕುಗಳ ಕುಂಬಾರ ಸಮುದಾಯದ ಸರ್ವತೋಮುಖ ಅಭಿವೃದ್ಧಿಗೆ ಕಾರ್ಯಕ್ರಮ ಹಮ್ಮಿಕೊಳ್ಳುವುದು, ಬಡ ಕುಟುಂಬಗಳನ್ನು ಗುರುತಿಸಿ ಅವರ ಉನ್ನತ ವ್ಯಾಸಂಗಕ್ಕೆ ಸರ್ಕಾರ ಹಾಗೂ ಸ್ಥಿತಿವಂತರಿಂದ ನೆರವು ದೊರಕಿಸಿಕೊಡುವುದು, ನಗರ ಹಾಗೂ ಜಿಲ್ಲೆಯಲ್ಲಿರುವ ಸಮುದಾಯದ ಆಸ್ತಿ ರಕ್ಷಣೆ ಹಾಗೂ ಆದಾಯದ ಸದ್ಬಳಕೆ ಆಗುವಂತೆ ನೋಡಿಕೊಳ್ಳುವುದು. ಸರ್ಕಾರ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವುದು, ಅರ್ಹ ಕುಟುಂಬಗಳಿಗೆ ಸವಲತ್ತು ದೊರಕಿಸಿಕೊಡುವುದು, ಸಾಂಸ್ಕೃತಿಕ, ಜಾನಪದ ಕಲೆ, ಕ್ರೀಡೆಗಳಿಗೆ ಪ್ರೋತ್ಸಾಹ, ಜಿಲ್ಲೆಯಾದ್ಯಂತ ಇರುವ ಕುಂಬಾರ ಸಮಾಜದವರ ಪತ್ತೆಹಚ್ಚುವ ಉದ್ದೇಶವಿದೆ ಎಂದರು.

ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಸಮುದಾಯದ ಯುವಜನರು ಸಂಘಟಿತರಾಗಬೇಕು. ಇದರಿಂದ ಮಾತ್ರ ಮೇಲೆ ಬರಲು ಸಾಧ್ಯ. ಜೊತೆಗೆ ಶಿಕ್ಷಣಕ್ಕೆ ಒತ್ತು ನೀಡಬೇಕು. ಇನ್ನು, ಕಾಂಗ್ರೆಸ್ ಸರ್ಕಾರ ಈ ರೀತಿಯ ಸಮುದಾಯಗಳ ಪರ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಕುಂಬಾರರ ಜಾಗೃತಿ ವೇದಿಕೆ ಅಧ್ಯಕ್ಷ ಮಹೇಶ್, ಪ್ರಧಾನ ಕಾರ್ಯದರ್ಶಿ ಎಸ್.ಎಚ್. ನಾಗರಾಜು, ಖಜಾಂಚಿ ಎಂ.ಬಿ. ಯಶವಂತ್‌ಕುಮಾರ್, ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಚಂದ್ರಮೌಳಿ ಇದ್ದರು.

ಸರ್ಕಾರದ ಸೌಲಭ್ಯ ಪಡೆಯುತ್ತಿರುವ ನಕಲಿ ಕಾರ್ಮಿಕರ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಡಿ.31(ಎಸ್‌ಬಿಡಿ)– ಸರ್ಕಾರದ ಸೌಲಭ್ಯ ಪಡೆಯುತ್ತಿರುವ ನಕಲಿ ಕಾರ್ಮಿಕರನ್ನು ಪತ್ತೆಹಚ್ಚಿ, ಹೊರ ಹಾಕುವ ಕಾರ್ಯಕ್ಕೆ ವೇಗ ಸಿಗಬೇಕು ಎಂದು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘ ಆಗ್ರಹಿಸಿದೆ.



ಸಂಘದ ಅಧ್ಯಕ್ಷ ಪಿ.ರಾಜು ಅಧ್ಯಕ್ಷತೆಯಲ್ಲಿ ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ, ನೈಜ ಕಟ್ಟಡ ಕಾರ್ಮಿಕರ ಹಿತದೃಷ್ಟಿಯಿಂದ ತ್ವರಿತ ಕ್ರಮ ವಹಿಸುವುದರ ಜೊತೆಗೆ, ಕಾರ್ಮಿಕರಿಗಾಗಿ ಉಚಿತ ಸೇವೆ ಸಲ್ಲಿಸುತ್ತಿರುವ ಸಂಘಕ್ಕೆ ಸಹಕಾರ ನೀಡುವಂತೆ ಕಾರ್ಮಿಕ ಸಚಿವರಲ್ಲಿ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.

ಸರ್ಕಾರದ ಸವಲತ್ತುಗಳು ನಕಲಿ ಕಾರ್ಮಿಕರು ಪಾಲಾಗದೆ ನೈಜ ಕಟ್ಟಡ ಕಾರ್ಮಿಕರಿಗೆ ತಲುಪಿಸುವ ನಿಟ್ಟಿನಲ್ಲಿ ಎಚ್ಚರ ವಹಿಸಲು ಕಟ್ಟುನಿಟ್ಟಿನ ನಿಯಮ ಜಾರಿಗೆ ಕಾರ್ಮಿಕ ಸಚಿವರು ಮುಂದಾಗಿರುವುದು ಸ್ವಾಗತಾರ್ಹ. ಈ ಕಾರ್ಯಕ್ಕೆ ವೇಗ ಸಿಗಬೇಕು. ಕಾರ್ಮಿಕರ ಹಿತ ಕಾಯುವಲ್ಲಿ ಅಸಹಕಾರ ತೋರುತ್ತಿರುವ ಕಾರ್ಮಿಕ ಇಲಾಖೆ ನಿರೀಕ್ಷಕರಿಗೆ ಎಚ್ಚರಿಕೆ ನೀಡಬೇಕು. ಹೋರಾಟದ ಮೂಲಕ ಗಳಿಸಿರುವ ಸವಲತ್ತುಗಳನ್ನು ಕಟ್ಟಡ ಕಾರ್ಮಿಕರಿಗೆ ಉಚಿತವಾಗಿ ತಲುಪಿಸಲು ಸೂಕ್ತ ಕ್ರಮ ವಹಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಲು ನಿರ್ಣಯಿಸಲಾಯಿತು.

ಕಾರ್ಮಿಕ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಟ್ಟಡ ಕಾರ್ಮಿಕರೊಂದಿಗೆ ಸೌಜನ್ಯದಿಂದ ವರ್ತಿಸುವುದಿಲ್ಲ. ಸಂಘದ ಪದಾಧಿಕಾರಿಗಳು ಭೇಟಿಯಾದರೂ ಸವಲತ್ತುಗಳ ವಿತರಣೆ ಬಗ್ಗೆ ಸರಿಯಾದ ಮಾಹಿತಿ ನೀಡುವುದಿಲ್ಲ. ಮಧ್ಯವರ್ತಿಗಳಿಂದ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇಂತಹ ಹಲವು ಸಮಸ್ಯೆಗಳನ್ನು ಸಚಿವರ ಗಮನಕ್ಕೆ ತರಲು ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ಭಾಗವಹಿಸಿ ಸಲಹೆ–ಸೂಚನೆ ನೀಡಿದ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕಾರ್ಮಿಕ ಸಚಿವರಾಗಿದ್ದಾಗ ಕಟ್ಟಡ ಕಾರ್ಮಿಕರಿಗೆ ಸವಲತ್ತುಗಳನ್ನು ಕಲಿಸುವ ಸಂಬಂಧ ಅತೀವ ಕಾಳಜಿ ವಹಿಸಿದ್ದರೆಂದು ತಿಳಿಸಿದರಲ್ಲದೆ, ಕಾರ್ಮಿಕ ಸಚಿವರ ಭೇಟಿಗೆ ತೆರಳುವ ಸಂಘದ ನಿಯೋಗದೊಂದಿಗೆ ತಾವೂ ಬರುವುದಾಗಿ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕರ ಕೇಂದ್ರ ಸಂಘದ ಅಧ್ಯಕ್ಷ ಪಿ.ರಾಜು ಮಾತನಾಡಿ, ಸಂಘವು ನೈಜ ಕಟ್ಟಡ ಕಾರ್ಮಿಕರಿಗೆ ಉಚಿತ ಸೇವೆ ನೀಡುತ್ತಿದೆ. ಸರ್ಕಾರದ ಸವಲತ್ತುಗಳನ್ನು ಸಮರ್ಪಕವಾಗಿ ತಲುಪಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಕಾರ್ಮಿಕರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರಕ್ಕೆ ಆಗ್ರಹಿಸುತ್ತಾ ಬಂದಿದೆ. ನೈಜ ಕಾರ್ಮಿಕರು ಸಂಘದ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಸಂಘಟನೆಯ ಮಾನದಂಡಗಳು, ಜಿಲ್ಲಾ ಮತ್ತು ತಾಲೂಕು ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ನಡಾವಳಿಗಳ ಬಗ್ಗೆ ವಿವರಿಸಿದರು. ಸಭೆಯಲ್ಲಿ ರಾಜ್ಯ ರಾಜ್ಯ ಉಪಾಧ್ಯಕ್ಷ ಬಳ್ಳಾರಿಯ ವೇಣು ಗೋಪಾಲ್, ರಾಜ್ಯ ಕಾರ್ಯಾಧ್ಯಕ್ಷೆ ದಾವಣಗೆರೆಯ ಸುವರ್ಣಮ್ಮ, ರಾಜ್ಯ ಪ್ರಧಾನ ಕಾರ್ಯದರ್ಶಿ ಆಂತೋಣಿ ಬಾಬು, ರಾಜ್ಯ ಕಾರ್ಯದರ್ಶಿ ಅಂತೋಣಿ ಜಾನ್ಸನ್, ರಾಜ್ಯ ಸಂಚಾಲಕ ನಾಗರಾಜ್ ಕೃಷ್ಣಪುರ, ಮೈಸೂರು ಜಿಲ್ಲಾಧ್ಯಕ್ಷ ಶಿವಣ್ಣ, ಚಿತ್ರದುರ್ಗ ಜಿಲ್ಲಾಧ್ಯಕ್ಷ ಮೈಲಾರಪ್ಪ, ಹಾಸನ ಜಿಲ್ಲಾಧ್ಯಕ್ಷ ಲೋಕೇಶ್ ಕುಮಾರ್, ಕೊಡಗು ಜಿಲ್ಲಾಧ್ಯಕ್ಷ ವೀರೆಂದ್ರ, ವಿಜಯನಗರ ಜಿಲ್ಲಾಧ್ಯಕ್ಷ ಸುರೇಶ್, ಬಳ್ಳಾರಿ ಜಿಲ್ಲಾಧ್ಯಕ್ಷ ಅಂಜೀನಯ್ಯ, ಹಾವೇರಿ ಜಿಲ್ಲಾಧ್ಯಕ್ಷ ರಮೇಶ್ ಸೀತಕೊಂಡ, ಶಿವಮೊಗ್ಗ ಜಿಲ್ಲಾಧ್ಯಕ್ಷ ಸಂತೋಷ್, ದಾವಣಗೆರೆ ಜಿಲ್ಲಾಧ್ಯಕ್ಷ ಬಸವರಾಜು, ಕೊಡಗು ಜಿಲ್ಲಾಧ್ಯಕ್ಷ ವೀರೆಂದ್ರ ಮೈಸೂರು ನಗರಾಧ್ಯಕ್ಷ ಕೊಳಂದೆಯೇಸು (ತಂಬಣ್ಣ), ಬೆಳಗಾವಿ ಜಿಲ್ಲಾಧ್ಯಕ್ಷ ಗುರುಪಾದ ದಾನಣ್ಣನವರ್, ಚಾಮರಾಜನಗರ ಜಿಲ್ಲಾಧ್ಯಕ್ಷ ಕುಮಾರಚಾರಿ, ತುಮಕೂರು ಜಿಲ್ಲಾಧ್ಯಕ್ಷ ನಾಗೇಶ್, ಬೆಂಗಳೂರು ಗ್ರಾಮಾಂತರ ಅಧ್ಯಕ್ಷ ಸೋಮಶೇಖರ್, ಗದಗ ಜಿಲ್ಲಾಧ್ಯಕ್ಷ ರಾಮಪ್ಪ, ಚಾಮರಾಜ ಕ್ಷೇತ್ರ ಅಧ್ಯಕ್ಷ ಚಂದ್ರು, ಚಾಮುಂಡೇಶ್ವರಿ ಕ್ಷೇತ್ರ ಅಧ್ಯಕ್ಷ ಸಿದ್ದಪ್ಪಾಜಿ ಮತ್ತಿತರರು ಭಾಗವಹಿಸಿದ್ದರು.

ಕೆ.ಆರ್.ನಗರದಲ್ಲಿ ವೈಭವದ ಹನುಮಂತೋತ್ಸವ

ಕೆ.ಆರ್.ನಗರ, ಡಿ.31– ಪಟ್ಟಣದ ಆಂಜನೇಯ ಬಡಾವಣೆಯ ಮಾರುತಿ ಯುವಕರ ಸಂಘ ಮತ್ತು ಸಾರ್ವಜನಿಕರ ಸಹಯೋಗದಲ್ಲಿ ಶನಿವಾರ ನಮ್ಮೂರ ಹನುಮಂತೋತ್ಸವ ಮತ್ತು ಶೋಭಾಯಾತ್ರೆಯನ್ನು ಅತ್ಯಂತ ವೈಭವದಿಂದ ನಡೆಸಲಾಯಿತು.

ಇಲ್ಲಿನ ಆಂಜನೇಯ ದೇವಾಲಯದ ಆವರಣದಲ್ಲಿ ಗಾವಡಗೆರೆ ಗುರುಲಿಂಗ ಜಂಗಮ ಮಠದ ನಟರಾಜ ಸ್ವಾಮೀಜಿ, ಶಾಸಕ ಡಿ.ರವಿಶಂಕರ್, ಮಾರುತಿ ಯುವಕರ ಸಂಘದ ಅಧ್ಯಕ್ಷ ಗೌತಮ್ ಜಾಧವ್ ಮತ್ತಿತರರು ಹನುಮಂತೋತ್ಸವಕ್ಕೆ ಚಾಲನೆ ನೀಡಿದರು. ಆನಂತರ ವಿವಿಧ ಕಲಾತಂಡಗಳೊಂದಿಗೆ ಬಜಾರ್ ರಸ್ತೆಯ ಮೂಲಕ ಸಾಗಿದ ಆಂಜನೇಯ ಸ್ವಾಮಿಯ ಬೃಹತ್ ಮೂರ್ತಿಯ ಮೆರವಣಿಗೆ ಗರುಡಗಂಭ ವೃತ್ತ, ವಿವಿ ರಸ್ತೆ, ಪುರಸಭೆ ವೃತ್ತ ಮತ್ತು ಸಿಎಂ ರಸ್ತೆ ಮೂಲಕ ದೇವಾಲಯದವರೆಗೂ ಭಾರಿ ಮೆರವಣಿಗೆಯಲ್ಲಿ ಸಾಗಿ ಬಂತು.

ಮೆರವಣಿಗೆ ಸಾಗಿದ ರಸ್ತೆಯುದ್ದಕ್ಕೂ ನೆರೆದಿದ್ದ ಭಕ್ತರು ಮತ್ತು ಯುವಕ ಯುವತಿಯರು ಹನುಮಂತನ ಹಾಡಿಗೆ ಹಾಗೂ ತಮಟೆ ಸದ್ದಿಗೆ ಕುಣಿದು ಕುಪ್ಪಳಿಸಿ ದೇವರಿಗೆ ಜಯಕಾರದ ಘೋಷಣೆಗಳನ್ನು ಮೊಳಗಿಸಿ ಭಕ್ತಿ ಪರವಶತೆಯಲ್ಲಿ ಮಿಂದೆದ್ದರು.

ಪಟ್ಟಣ ಸೇರಿದಂತೆ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕು ಸೇರಿದಂತೆ ವಿವಿಧೆಡೆಗಳಿಂದ ಆಗಮಿಸಿದ್ದ ಹನುಮ ಭಕ್ತರಿಗೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಮತ್ತು ದಾನಿಗಳು ಪ್ರಸಾದ, ಪಾನಕ, ಮಜ್ಜಿಗೆ ಸೇರಿದಂತೆ ಇತರ ತಂಪು ಪಾನೀಯ ನೀಡಿದರು.

ಕಳೆದ ಏಳು ದಿನಗಳಿಂದ ಆಂಜನೇಯ ಸ್ವಾಮಿ ದೇವಾಲಯದಲ್ಲಿ ವಿಜೃಂಭಣೆಯಿಂದ ನಡೆದ ಆಂಜನೇಯ ಸ್ವಾಮಿಯ ಪೂಜೆ ಶನಿವಾರದ ಹನುಮಂತೋತ್ಸವದೊಂದಿಗೆ ಸಮಾಪ್ತಿಗೊಂಡಿತು. ಮಾರುತಿ ಯುವಕರ ಸಂಘದ ಗೌರವಾಧ್ಯಕ್ಷ ಎಸ್.ಯೋಗಾನಂದ್, ಪದಾಧಿಕಾರಿಗಳಾದ ಮಂಜುನಾಥ್ ಕೆಂಚಿ, ಪುರಸಭೆ ಸದಸ್ಯರಾದ ಕೆ.ಜಿ.ಸುಬ್ರಮಣ್ಯ, ಶಂಕರ್, ಶಿವುನಾಯಕ್, ನಟರಾಜು,



ಶಂಕರ್‌ಸ್ವಾಮಿ, ಶಾರದನಾಗೇಶ್, ವೀಣಾ ವೃಷಬೇಂದ್ರ ಮಾಜಿ ಅಧ್ಯಕ್ಷೆ ಗೀತಾ ಮಹೇಶ್, ನರಸಿಂಹರಾಜು, ಮಾಜಿ ಸದಸ್ಯ ಕೆ.ವಿನಯ್, ಸಾರ್ವಜನಿಕ ಹನುಮ ಜಯಂತಿ ಆಚರಣಾ ಸಮಿತಿ ಅಧ್ಯಕ್ಷ ಯು.ಕೃಷ್ಣಭಟ್, ಪದಾಧಿಕಾರಿಗಳಾದ ಪವನ್‌ಶಿವಾಜಿ, ನಂಜುಂಡ, ಅಶೋಕ್, ಮಂಜುನಾಥ್ ಸೇರಿದಂತೆ ಸಾವಿರಾರು ಭಕ್ತರು ಹಾಜರಿದ್ದರು.

ಜಿಲ್ಲಾ ಪೊಲೀಸ್ ಉಪವರಿಷ್ಠಾಧಿಕಾರಿಗಳಾದ ನಂದಿನಿ ಮತ್ತು ಬಾಬು ಅವರ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಮರೂರು ಗ್ರಾಮದಲ್ಲಿ ಅದ್ದೂರಿ ಹನುಮ ಜಯಂತಿ



ಮರೂರು ಗ್ರಾಮದಲ್ಲಿ ಹನುಮ ಜಯಂತಿ ಆಚರಣೆಯ ಪ್ರಯುಕ್ತ ಯುವಕರು ಮೆರವಣಿಗೆಯಲ್ಲಿ ಕುಣಿದು ಕುಪ್ಪಳಿಸುತ್ತಿರುವುದು.

ಹಿರೀಕ್ಯಾತನಹಳ್ಳಿ, ಡಿ.31– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಮರೂರು ಗ್ರಾಮದಲ್ಲಿ ಹನುಮ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಳೆದ ಮೂರು ದಿನಗಳಿಂದ ಆಂಜನೇಯ ಭಾವಚಿತ್ರದ ಕಟೌಟ್‌ಗಳನ್ನು ಗ್ರಾಮದ ಬೀದಿಬೀದಿಗಳಲ್ಲಿ ಹಾಕಿ, ಕೇಸರಿ ಬಣ್ಣದ ಬಂಟಿಂಗ್ಸ್‌ಗಳನ್ನು ಅಳವಡಿಸಲಾಗಿತ್ತು. ಗ್ರಾಮದಲ್ಲಿ ಹಬ್ಬದ ವಾತಾವರಣವಾಗಿತ್ತು. ಭಾನುವಾರ ಬೆಳಿಗ್ಗೆ ಗ್ರಾಮದ ಕೆರೆಯ ಪಕ್ಕದಲ್ಲಿರುವ ಬಸವೇಶ್ವರ ದೇವಸ್ಥಾನದಿಂದ ಟ್ರ್ಯಾಕ್ಟರ್‌ನಲ್ಲಿ ಆಂಜನೇಯ ಮೂರ್ತಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಿ ಮಂಗಳೂರಿನ ವಾದ್ಯದೊಂದಿಗೆ ಮೆರವಣಿಗೆ ನಡೆಸಲಾಯಿತು. ಯುವಕರು ಕೇಸರಿ ಶಾಲು, ಹಣೆಗೆ ಕೇಸರಿ ತಿಲಕವಿಟ್ಟು ಆಂಜನೇಯ ಭಾವಚಿತ್ರವಿರುವ ಕೇಸರಿ ಬಾವುಟಗಳನ್ನು ಹಾರಿಸಿ ಡಿಜೆ ಸೌಂಡ್ಸ್‌ಗೆ ಕುಣಿದು ಕುಪ್ಪಳಿಸಿದರು.

ಇನ್ನು ಗ್ರಾಮದ ಮಹಿಳೆಯರು ಭಕ್ತಿ ಭಾವ ಮೆರೆದು ಮನೆಯ ಮುಂದೆ ಹಸಿವಿನ ಸಗಣಿ ಗಂಜಲ ಹಾಕಿ ತಾರಸಿ ಬಣ್ಣ ಬಣ್ಣದ ರಂಗೋಲಿ ಹಾಕಿ ಪೂಜೆ ಸಲ್ಲಿಸಿದರು.

ನಂತರ ಆಂಜನೇಯ ಸ್ವಾಮಿ ದೇವಸ್ಥಾನದ ಟ್ರಸ್ಟ್ ಹಾಗೂ ಹನುಮ ಜಯಂತಿ ಸೇವಾ ಸಮಿತಿ ವತಿಯಿಂದ ಭಾನುವಾರ ಆಂಜನೇಯ ಸ್ವಾಮಿಗೆ ಗುರುಪೂಜೆ, ಫಲಪಂಚಾಮೃತ ಅಭಿಷೇಕ ಹೋಮ ಮಹಾ ಮಂಗಳಾರತಿ ನೆರವೇರಿದ ನಂತರ ತೀರ್ಥ ಪ್ರಸಾದ ಹಾಗೂ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಯಿತು.

ಹನುಮ ಜಯಂತಿಯಲ್ಲಿ ಗ್ರಾಮದ ನೂರಾರು ಯುವಕರು ಜನಪ್ರತಿನಿಧಿಗಳು ಹಾಗೂ ಗ್ರಾಮದ ವಿವಿಧ ಜನಾಂಗದ ಯಜಮಾನರು ಹಾಗೂ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದಲಿತರ ಸಮಸ್ಯೆಗಳ ಬಗೆಹರಿಸದೆ ಅಧಿಕಾರಿಗಳ ನಿರ್ಲಕ್ಷ್ಯ

ಹುಣಸೂರು, ಡಿ.31– ತಾಲೂಕಿನಾದ್ಯಂತ ದಲಿತರ ಸಮಸ್ಯೆಗಳನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ಬಗೆಹರಿಸದೆ ಇಲ್ಲಸಲ್ಲದ ಕಾರಣಗಳನ್ನು ಹೇಳಿ ಕಾಲಹರಣ ಮಾಡುತ್ತಿದ್ದಾರೆ ಎಂದು ಹುಣಸೂರು ಉಪವಿಭಾಗ ಮಟ್ಟದ ಪರಿಶಿಷ್ಟ ಜಾತಿ, ಪಂಗಡದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ನಿಂಗರಾಜ್ ಮಲ್ಲಾಡಿ ಆರೋಪಿಸಿದ್ದಾರೆ.

ಹುಣಸೂರು ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ನಡೆದ ಉಪವಿಭಾಗ ಮಟ್ಟದ ಪರಿಶಿಷ್ಟ ಜಾತಿ, ಪಂಗಡ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಕಳೆದ ಮೂರು ತಿಂಗಳ ಹಿಂದೆ ನಡೆದ ಸಭೆಯಲ್ಲಿ ದಲಿತರ ಹಲವಾರು ಸಮಸ್ಯೆಗಳನ್ನು ಮಂಡಿಸಲಾಗಿತ್ತು. ಆದರೆ ಅವು... ಆಗಿಲ್ಲ ಎಂದರು.

ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಬಿಳಿಗೆರೆ ಗ್ರಾಮದ ದಲಿತರಿಗೆ ದೇವಸ್ಥಾನಕ್ಕೆ ನಿರ್ಬಂಧ ವಿಧಿಸಿರುವುದು, ಕಟ್ಟೆಮಳಲವಾಡಿ ಗ್ರಾಮದ ದಲಿತರ ಸ್ಮಶಾನ ಸಮಸ್ಯೆ, ಮಂಗಳೂರು ಮಾಳದ ಅಲೆಮಾರಿ ಕುಟುಂಬಗಳಿಗೆ ವಾಸಿಸಲು ಮನೆ ಸಮಸ್ಯೆಗಳು ಸೇರಿದಂತೆ ಹಲವಾರು ಸಮಸ್ಯೆಗಳ ಬಗ್ಗೆ ಹೇಳಿದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ತಿಳಿಸಿದರು



ಅಲ್ಲದೆ ತಾಲೂಕಿನಾದ್ಯಂತ ದೌರ್ಜನ್ಯಕ್ಕೆ ಒಳಗಾದ ದಲಿತರ ಮೇಲೆಯೇ ಪೊಲೀಸ್ ಠಾಣೆಗಳಲ್ಲಿ ಕೌಂಟರ್ ಕೇಸ್ ದಾಖಲಿಸುವುದು, ಸಕಾಲದಲ್ಲಿ ನೊಂದ ದಲಿತರಿಗೆ ಪರಿಹಾರ ಸಿಗದೆ ಇರುವ ಬಗ್ಗೆ, ದಲಿತರ ಕಾಲೋನಿಗಳಲ್ಲಿ ಅಕ್ರಮ ಸಾರಾಯಿ ಮಾರಾಟ, ಹೆಚ್.ಡಿ. ಕೋಟೆ ತಾಲೂಕಿನ ಪಡುವಕೋಟೆ ಗ್ರಾಮದ ದಲಿತ ಮಹಿಳೆ ಪೂವಮ್ಮ ಜಮೀನಿನ ಸಮಸ್ಯೆ, ಚುಂಚನಕಟ್ಟೆ ಗ್ರಾಮದ 85 ನಿರ್ಗತಿಕ ಅಲೆಮಾರಿ ಕುಟುಂಬಗಳಿಗೆ 94 ಸಿ.ಸಿ ಯೋಜನೆಯಡಿ ಹಕ್ಕುಪತ್ರ ವಿತರಿಸದೆ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದರು.

ಸಭೆಯಲ್ಲಿ ಸಮಿತಿಯ ಸದಸ್ಯರಾದ ರಾಜ್ಯ ರೈತ ಸಂಘದ ಅಧ್ಯಕ್ಷ ಹೊಸೂರು ಕುಮಾರ್, ಹುಣಸೂರು ತಹಸೀಲ್ದಾರ್ ಮಂಜುನಾಥ್, ಕಾರ್ಯ ನಿರ್ವಹಣಾಧಿಕಾರಿ ಮನು, ಸಮಾಜ ಕಲ್ಯಾಣ ಇಲಾಖೆಯ ಸಿದ್ದರಾಜು, ಎಲ್ಲಾ ತಾಲ್ಲೂಕಿನ ತಹಸೀಲ್ದಾರ್‌ಗಳು, ಅಬಕಾರಿ ಇಲಾಖೆಯ ಅಧಿಕಾರಿಗಳು ಮತ್ತು ಎಲ್ಲಾ ಇಲಾಖೆಯಲ್ಲಿ ಅಧಿಕಾರಿಗಳು ನಗರಸಭೆಯ ಅಧಿಕಾರಿಗಳು ನಿಗಮ ಮಂಡಳಿಯ ಅಧಿಕಾರಿಗಳು ಭಾಗವಹಿಸಿದ್ದರು.

ವ್ಯಕ್ತಿ ನಾಪತ್ತೆ

ತಿ.ನರಸೀಪುರ, ಡಿ.31– ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿ ಮಾದಪುರ ಗ್ರಾಮದ ನಿವಾಸಿ ಸಿದ್ದರಾಜು(52) ಅವರು ನಾಪತ್ತೆಯಾಗಿದ್ದು, ಪ್ರಕರಣ ದಾಖಲಾಗಿದೆ.



ಮಂಗಳವಾರ ಮನೆಯಿಂದ ಹೊರ ಹೋದವರು ಇದುವರೆಗೂ ವಾಪಸ್ ಬಂದಿಲ್ಲ. ಅವರನ್ನು ಹುಡುಕಿ ಕೊಡಿ ಎಂದು ಪಟ್ಟಣ ಪೊಲೀಸ್ ಠಾಣೆಯಲ್ಲಿ ಇವರ ಪತ್ನಿ ದೇವಕಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಇವರ ಸುಳಿವು ಸಿಕ್ಕಲ್ಲಿ ಪಟ್ಟಣ ಠಾಣೆ ದೂರವಾಣಿ ಸಂಖ್ಯೆ 08227261227 ಗೆ ಹಾಗೂ 9480805033 ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಿದ್ದಾರೆ,

ಎಸ್.ಸಿ.ಬಸವರಾಜುಗೆ ಎಂಎಲ್‌ಸಿ ಸ್ಥಾನಕ್ಕೆ ಆಗ್ರಹ



ನಂಜನಗೂಡು: ನಾಯಕಜನಾಂಗದ ಪ್ರಭಾವಿ ಮುಖಂಡರಾದ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಅವರ ಅಭಿಮಾನಿಗಳು ಒತ್ತಾಯಿಸುತ್ತಿದ್ದು, ಜು.2 ರಂದು 7 ಸ್ಥಾನಗಳು ತೆರವಾಗಲಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ, ಬಸವರಾಜು ಅವರನ್ನು ನೇಮಕಗೊಳಿಸುವ ಸಾಧ್ಯತೆ ಇದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಹೇಳಿದರು.

ವಿದ್ಯಾನಗರ ಬಡಾವಣೆಯಲ್ಲಿ ಎಸ್.ಸಿ. ಬಸವರಾಜು ಅವರ ಅಭಿಮಾನಿಗಳು ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದರು. ಎಸ್.ಸಿ. ಬಸವರಾಜು ಅವರು ಕಳೆದ 38 ವರ್ಷಗಳಿಂದಲೂ ಸಹ ರಾಜಕಾರಣದಲ್ಲಿದ್ದು ಜಿಪಂ ಅಧ್ಯಕ್ಷರಾಗಿ, ವಾಲ್ಮೀಕಿ ನಿಗಮದ ಅಧ್ಯಕ್ಷರಾಗಿ ಜೊತೆಗೆ ಪಕ್ಷದ ಅನೇಕ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಕಾಂಗ್ರೆಸ್ ಪಕ್ಷ ಸಂಘಟನೆಯಲ್ಲಿ ತೊಡಗಿದ್ದಾರೆ. ಅವರಿಗೆ ಎಚ್.ಡಿ.ಕೋಟೆಯಿಂದ ವಿಧಾನಸಭೆಗೆ ಟಿಕೆಟ್ ಸಿಗುವ ಅವಕಾಶವಿತ್ತು ಆದರೆ ತಳವಾರ ಪರಿವಾರ ಸಮಸ್ಯೆಯಿಂದ ಅವರು ಅವಕಾಶ ವಂಚಿತರಾದರು ಎಂದರು. ಈಗ ತಳವಾರ ಪರಿವಾರ ಸಮಸ್ಯೆ ಪರಿಹಾರವಾಗಿದೆ, ಅಲ್ಲದೆ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಮನಸ್ಸಿನಲ್ಲೂ ಕೂಡ ಅವರಿದ್ದು ಜು.2ಕ್ಕೆ ವಿಧಾನಪರಿಷತ್‌ನ 7 ಸ್ಥಾನ ತೆರವಾಗಲಿದ್ದು ಅಭಿಮಾನಿಗಳ ಒತ್ತಾಸೆಯಂತೆ ಮೈಸೂರು ಭಾಗದಿಂದ ಅವರಿಗೆ ಸ್ಥಾನ ಒದಗುವ ಸಾಧ್ಯತೆ ಇದೆ ಎಂದರು.

ಬಸವರಾಜು ಮಾತನಾಡಿ ಅಭಿಮಾನಿಗಳು ಅನೇಕ ವರ್ಷಗಳಿಂದ ಕ್ಯಾಲೆಂಡರ್ ಮತ್ತು ಹುಟ್ಟುಹಬ್ಬ ಆಚರಣೆಯಲ್ಲಿ ತೊಡಗುತ್ತಾರೆ. ಇವುಗಳು ನನಗೆ ಮುಜುಗರ ತರವಂತಹ ಕಾರ್ಯಕ್ರಮಗಳು. ಆದ್ದರಿಂದ ಅಭಿಮಾನಿಗಳು ಸಾಮಾಜಿಕ ಸೇವಾ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಹಾಡ್ಯರಂಗಸ್ವಾಮಿ, ವಿಶ್ವಕರ್ಮ ನಿಗಮ ಮಾಜಿ ಅಧ್ಯಕ್ಷ ನಂದಕುಮಾರ್, ಮುಖಂಡರಾದ ಬಿ.ಪಿ.ಮಹದೇವು, ನಾಗರಾಜು, ಕೆಡಿ.ಮಂಜು, ಕಳಲೆರವಿಕುಮಾರ್, ಸಿ.ಆರ್.ಮಹದೇವು, ಕಾರ್ಮಿಕ ಮುಖಂಡ ಗೋವಿಂದರಾಜು, ಹೊಸಕೋಟೆ ಬಸವರಾಜು ಇದ್ದರು.

ಕೋಟೆ ಛಾಯಾಗ್ರಾಹಕರ ಸಂಘಕ್ಕೆ 10 ಗುಂಟೆ ಜಾಗ



ಹೆಚ್.ಡಿ. ಕೋಟೆ, ಡಿ.31– ತಾಲೂಕು ಛಾಯಾಗ್ರಾಹಕ ಸಂಘಕ್ಕೆ ಮೂರು ಕಡೆ ಸ್ಥಳವನ್ನು ಗುರುತಿಸಿದ್ದು, ಯಾವ ಜಾಗ ಸೂಕ್ತವೆನಿಸುತ್ತದೋ ಆ ಸ್ಥಳದಲ್ಲಿ 10 ಗುಂಟೆ ಜಾಗವನ್ನು ನೀಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದ್ದಾರೆ.

ಹೆಚ್.ಡಿ. ಕೋಟೆ ಪಟ್ಟಣದ ಹ್ಯಾಂಡ್ ಪೋಸ್ಟ್‌ನಲ್ಲಿರುವ ಮೈರಾಡ ಕಚೇರಿಯ ಆವರಣದಲ್ಲಿ ತಾಲೂಕು ಛಾಯಾಗ್ರಾಹಕ ಸಂಘದ ವತಿಯಿಂದ ಭಾನುವಾರ ನಡೆದ ದಿನದರ್ಶಿಕೆ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಛಾಯಾಗ್ರಾಹಕರು ಹಲವು ವರ್ಷಗಳಿಂದ ನಿವೇಶನಕ್ಕಾಗಿ ಮನವಿ ಸಲ್ಲಿಸುತ್ತಿದ್ದಾರೆ. ಅದನ್ನು ಮನಗಂಡು ಜಾಗವನ್ನು ಗುರುತಿಸಲಾಗಿದೆ ಎಂದರು. ಆ ಜಾಗದಲ್ಲಿ ಛಾಯಾಗ್ರಾಹಕರಿಗಾಗಿ ತರಬೇತಿ ಕೇಂದ್ರವನ್ನು ಸ್ಥಾಪಿಸಿ ಯುವ ಉತ್ಸಾಹಿ ಯುವಕರಿಗೆ ಛಾಯಾಗ್ರಹಣದ ತರಬೇತಿ ನೀಡಲು ಅನುಕೂಲವಾಗಲಿದೆ ಎಂದರು.

ನಂಜನಗೂಡು ಶಾಸಕ ದರ್ಶನ್ ಧೃವನಾರಾಯಣ್ ಮಾತನಾಡಿ, ಒಬ್ಬ ಛಾಯಾಗ್ರಾಹಕ ವಿಭಿನ್ನ ಆಲೋಚನೆಯನ್ನು ಮಾಡಿ ಛಾಯಾಗ್ರಹಣ ಮಾಡಿದಾಗ ಆತ ವಿಭಿನ್ನವಾಗಿ ಗುರುತಿಸಿಕೊಳ್ಳುತ್ತಾನೆ ಎಂದರು. ಹೆಚ್.ಡಿ. ಕೋಟೆ ಅಪಾರ ಪ್ರಮಾಣದ ವನ್ಯ ಸಂಪತ್ತನ್ನು ಹೊಂದಿದೆ. ಈ ವನ್ಯ ಸಂಪತ್ತನ್ನು ಛಾಯಾಚಿತ್ರವಾಗಿ ಮಾರ್ಪಡಿಸಿ ಅದನ್ನು ನೂತನ ದಿನದರ್ಶಿಕೆಗೆ ಬಳಸಿರುವುದು ಸ್ವಾಗತಾರ್ಹ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಬಾಲಸುಬ್ರಹ್ಮಣ್ಯ, ಪುರಸಭಾ ಸದಸ್ಯ ಎಚ್.ಸಿ. ನರಸಿಂಹಮೂರ್ತಿ, ಪ್ರಕಾಶ್, ಕನ್ನಡಪ್ರಮೋದ್, ವಾಸುಕಿ ನಾಗೇಶ್, ಹೊನ್ನೆಗೌಡ, ವನಸಿರಿ ಶಂಕರ್, ರಘುರಾಮ್, ನಂದಕುಮಾರ್ ಶೈಲಿ, ತ್ರಿಶಂಭು, ನಾಗೇಂದ್ರ ಮಾದಾಪುರ, ಕೃಷ್ಣ, ಸೋಮೇಶ್, ಮಣಿ, ಮಾದೇವಸ್ವಾಮಿ, ರವಿ, ಸದಸ್ಯರುಗಳಾದ ಸತೀಶ್ ಆರಾಧ್ಯ, ರವಿ ಆರಾಧ್ಯ ಗುರುಸ್ವಾಮಿ, ಪಾರಿ ವೆಂಕಿ, ನಿಂಗರಾಜು, ಮೋಹನ್ ಕುಮಾರ್, ಸಮೀರ್, ಮಂಜು ಸ್ಪೀಡ್ ನಾಗೇಂದ್ರ ಇದ್ದರು.

ಸರಗೂರು ವಾಹನ ಚಾಲಕರ ಸಂಘಕ್ಕೆ ಬೀರ್ವಾಳ್ ಚಿಕ್ಕಣ್ಣ ಅಧ್ಯಕ್ಷ

ಸರಗೂರು: ಸರಗೂರು ವಾಹನ ಚಾಲಕರ ಸಂಘದ ನೂತನ ಅಧ್ಯಕ್ಷರಾಗಿ ಬೀರ್ವಾಳ್ ಚಿಕ್ಕಣ್ಣ ಆಯ್ಕೆಯಾಗಿದ್ದಾರೆ. ಪಟ್ಟಣದ ಸೋಮೇಶ್ವರ ದೇವಸ್ಥಾನದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಸದಸ್ಯರು ಸರ್ವಾನುಮತದಿಂದ ಬೀರ್ವಾಳ್ ಚಿಕ್ಕಣ್ಣ ಅವರನ್ನು ಎರಡನೇ ಬಾರಿಗೆ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಿದರು.

ಸಭೆಯಲ್ಲಿ ಮಾಜಿ ಅಧ್ಯಕ್ಷ ಶಶಿ, ವಾಹನ ಚಾಲಕರ ಸಂಘದ ನೂತನ ಕಾರ್ಯಕಾರಿ ಮಂಡಳಿಗೆ ಗೌರವಾಧ್ಯಕ್ಷರಾಗಿ ಹೆಚ್.ಎಸ್.ಲಿಂಗರಾಜು, ಉಪಾಧ್ಯಕ್ಷ ಎಸ್.ಬಿ.ಕಾಳನಾಯಕ, ಪ್ರಧಾನ ಕಾರ್ಯದರ್ಶಿ ಚಾಮರಾಜ್, ಸಹ ಕಾರ್ಯದರ್ಶಿ ಎಂ.ನಾಗರಾಜು, ಖಜಾಂಚಿ ಎಸ್.ಟಿ.ರವಿ, ನಿರ್ದೇಶಕರಾಗಿ ಬಿ.ಬೆಟ್ಟನಾಯಕ, ಎಸ್.ರವಿ, ಎಂ.ನಾಗರಾಜು, ಸಿ.ವೆಂಕಟೇಶ್, ಬಿ.ಎಂ.ಮಹದೇವಪ್ಪ, ಹೆಚ್.ಎಂ. ಮಹದೇವನಾಯಕ, ಹಾಲನಾಯಕ, ಜಿ.ವೆಂಕಟೇಶ್, ಸುರೇಶ್‌ರಾವ್ ಆಯ್ಕೆಯಾದರು. ಸಂಘದ ಸದಸ್ಯರು ಇತರರು ಹಾಜರಿದ್ದರು.



ಧಾರ್ಮಿಕ ಮಠವಾಗಿಯೇ ಉಳಿದ ಶ್ರೀ ವಾಟಾಳು ಮಠ

ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗೆ ವರ್ಧಂತೋತ್ಸವದ ಗೌರವ ಸಮರ್ಪಣೆ

ತಿ.ನರಸೀಪುರ, ಡಿ.31– ಮದ್ವಾಟಾಳು ಶ್ರೀ ವಾಟಾಳು ಮಠ ವ್ಯಾಪಾರಾಧಾರಿತ ಮಠವಾಗಿರದೇ ಧಾರ್ಮಿಕ ಮಠವಾಗಿ ಕೆಲಸ ಮಾಡುವ ಮೂಲಕ ಬಸವ ತತ್ವ ಅನುಷ್ಠಾನಗೊಳಿಸುತ್ತಿದೆ ಎಂದು ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರಹುಂಡಿ ಡಾ. ಸಿದ್ದಪ್ಪ ಹೇಳಿದರು.

ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ಪಟ್ಟಣದ ವಿದ್ಯೋದಯ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲೂಕು ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾದ ವಾಟಾಳು ಮಠದ ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮಿಗಳಿಗೆ 75ನೇ ವರ್ಷದ ವರ್ಧಂತೋತ್ಸವದ ಗೌರವ ಸಮರ್ಪಣೆ ಹಾಗೂ 2024ನೇ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಾಟಾಳು ಶ್ರೀ ಮಠದಲ್ಲಿ ಪ್ರತಿನಿತ್ಯವೂ ಬಸವಣ್ಣನವರ ತತ್ವಗಳ ಅನುಷ್ಠಾನ ನಡೆಯುತ್ತಿದೆ, ಸಿದ್ದಲಿಂಗಶಿವಾಚಾರ್ಯಸ್ವಾಮಿಗಳು ಶಾಲಾ ಕಾಲೇಜನ್ನಾಗಲೀ, ಇಂಜಿನಿಯರಿಂಗ್ ಕಾಲೇಜನ್ನಾಗಲೀ ಸ್ಥಾಪನೆ ಮಾಡಲಿಲ್ಲ. ಯಾವತ್ತಿಗೂ ಮಠವನ್ನು ವ್ಯಾಪಾರಕ್ಕಾಗಿ ಬಳಸದೇ ಧಾರ್ಮಿಕ ಮಠವಾಗಿಯೇ ನಡೆಸಿಕೊಂಡಿದ್ದಾರೆ. ಮಠವು ಕಂಪನಿಯಲ್ಲ, ಅದು ಧಾರ್ಮಿಕ ಮಠವಾಗಿ, ಬಸವತತ್ವ ಅನುಷ್ಠಾನ ಮಾಡುವ ಮಠವಾಗಿ ಕೆಲಸ ಮಾಡುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸಿದ್ದರಹಳ್ಳಿ ಪಾರಮಾರ್ಥ ಮಠದ ಮಲ್ಲಿಕಾರ್ಜುನ ಸ್ವಾಮಿ, ಮಾದ್ರಹಳ್ಳಿ ಪಟ್ಟದ ಮಠದ ಶಾಂತ ಮಲ್ಲಿ ಕಾರ್ಜುನ ಸ್ವಾಮಿ, ಚಾಮರಾಜನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ದುಗ್ಗಟ್ಟಿ ವಿ.ಮಲ್ಲಿಕಾರ್ಜುನ ಸ್ವಾಮಿ, ಅಖಿಲ ಭಾರತ ವೀರ ಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ತೊಟ್ಟವಾಡಿ ಮಹದೇವ ಸ್ವಾಮಿ,ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಸದಸ್ಯ ಎಂ.ಸಿದ್ದಲಿಂಗ ಸ್ವಾಮಿ, ಶರಣ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ತೊಂಟೇಶ್ ಮಾತನಾಡಿದರು.



ಎಂ.ಎಲ್.ಹುಂಡಿ ವಿರಕ್ತ ಮಠದ ಗೌರಿಶಂಕರ ಸ್ವಾಮಿ, ವೀರಪ್ಪ ಒಡೆಯರಹುಂಡಿ ಮಠದ ರೇಣುಕಾ ಶಿವಾಚಾರ್ಯಸ್ವಾಮಿ, ಕಳ್ಳಿಪುರ ಮಠದ ಗುರುಪಾದ ಶಿವಾಚಾರ್ಯ ಸ್ವಾಮಿ, ಸೇತುವೆ ಮಠದ ಸಹಜಾನಂದ ಸ್ವಾಮಿ, ಬಿಲಿಗೆರೆಹುಂಡಿ ಮಠದ ಗುರುಸ್ವಾಮಿಗಳು, ನಿಲಸೋಗೆ ಮಠದ ಮಲ್ಲಪ್ಪಸ್ವಾಮಿಗಳು, ವೀರಶೈವ ಸೇವಾ ಸಮಾಜದ ಅಧ್ಯಕ್ಷ ಟಿ.ಎಸ್.ಶಾಂತರಾಜು, ಶರಣ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಓಂಕಾರಸ್ವಾಮಿ, ಪುರಸಭಾ ಸದಸ್ಯೆ ರೂಪಾ ಪರಮೇಶ್, ಕೆ.ಎನ್. ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಮೂಗೂರು ಕುಮಾರಸ್ವಾಮಿ,ಕೋಶಾಧ್ಯಕ್ಷ ಹೆಳವರಹುಂಡಿ ಎನ್.ಮೂರ್ತಿ, ಸಹ ಕಾರ್ಯದರ್ಶಿ ತುರುಗನೂರು ಮಲ್ಲೇಶ್, ಸಂಘಟನಾ ಕಾರ್ಯದರ್ಶಿ ಬಿ.ಜಿ.ರಾಜಶೇಖರ್, ಸಂಚಾಲಕ ಅಂಗಡಿ ನಾಗೇಶ್, ಕಾನೂನು ಸಲಹೆಗಾರ ಎನ್.ಎಸ್.ಜ್ಞಾನೇಂದ್ರ ಮೂರ್ತಿ, ತುರುಗನೂರು ರಾಜಣ್ಣ, ಸಾಲೂರು ಸ್ವಾಮಿ, ಡಾ.ಎಂ.ಮಾದೇಶ್, ಆರ್.ಚಂದ್ರಪ್ಪ ಕೆ.ಬಿ.ಜಗದೀಶ್, ಚಿನ್ನಬುದ್ಧಿ, ಪ್ಯಾನ್ಸಿ ಮೋಹನ್, ಸಿ.ಬಿ.ಹುಂಡಿ ಸಿದ್ದು, ಎನ್.ಮರಿಸ್ವಾಮಿ, ಕು.ಶಿ. ಬ್ಯಂಗೀಶ್ ಆಡಿಟರ್ ಮಂಜುನಾಥ್ ಸೇರಿದಂತೆ ಸಮಾಜದ ಮುಖಂಡರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಡೆವಿಲ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂ)	2 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಟೇರ (ಕ)	4 ಪ್ರದರ್ಶನಗಳು
ರಾಜಕಮಲ್	
ಕಾಟೇರ (ಕ)	4 ಪ್ರದರ್ಶನಗಳು
ಸಂಗಂ	
ಸಲಾರ್ (ಕ) 3 ಪ್ರದರ್ಶನಗಳು ಸಲಾರ್ (ಹಿಂ)	1 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಲಾರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಸಲಾರ್– 1 (ತೆ):** ಬೆ.9.15ಕ್ಕೆ, ಮ.3.50ಕ್ಕೆ, ರಾ.10.20ಕ್ಕೆ, **ಡಂಕಿ (ಹಿಂ):** ಮ.12.50ಕ್ಕೆ, ರಾ.7.14ಕ್ಕೆ.
ಸ್ಕ್ರೀನ್ 2	**ಸಲಾರ್–1 (ಕ):** ಬೆ.9ಕ್ಕೆ, ಸಂ.6.50ಕ್ಕೆ, **ಅನಿಮಲ್ (ಹಿಂ):** ಮ.12.20ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಸಂ.4.05ಕ್ಕೆ, **ನೆರು (ಮ):** ರಾ.10.15ಕ್ಕೆ.
ಸ್ಕ್ರೀನ್ 3	**ಸಲಾರ್–1 (ತೆ):** ಬೆ.7ಕ್ಕೆ, **ಡಂಕಿ (ಹಿಂ):** ಬೆ.10.30ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.1.45ಕ್ಕೆ, ಸಂ.4.50ಕ್ಕೆ, ರಾ.7.15ಕ್ಕೆ, **ಸಲಾರ್ (ಕ):** ರಾ.9.55ಕ್ಕೆ.
ಸ್ಕ್ರೀನ್ 4	**ಸಲಾರ್–1(ತೆ):** ಬೆ.7.15ಕ್ಕೆ, ಮ.12.30ಕ್ಕೆ, ರಾ.7ಕ್ಕೆ, **ಡಂಕಿ (ಹಿಂ):** ಮ.3.55ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ಡಂಕಿ (ಹಿಂ):** ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	**ಸಲಾರ್ –1 (ತೆ):** ಬೆ.8.10ಕ್ಕೆ, ಬೆ.11.45ಕ್ಕೆ, ಮ.3.20ಕ್ಕೆ, ಸಂ.6.55ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	**ಡಂಕಿ (ಹಿಂ):** ಬೆ.11.30ಕ್ಕೆ, ಸಂ.6.25ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, **ಸಲಾರ್ –1 (ಕ):** ರಾ.9.45ಕ್ಕೆ.
ಸ್ಕ್ರೀನ್ 4	**ಸಲಾರ್–1 (ತೆ):** ಬೆ.8.40ಕ್ಕೆ, **ಸಲಾರ್–1 (ಕ):** ಮ.12.15ಕ್ಕೆ, ಸಂ.6.35ಕ್ಕೆ, **ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ):** ಮ.3.50ಕ್ಕೆ, ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಪಾರ್ಕಿಂಗ್ (ಕ):** ಬೆ.10.35ಕ್ಕೆ, **ಸಪ್ತ ಸಾಗರದಾಚೆ ಎಲ್ಲೋ 2 (ಕ):** ಮ.1.10ಕ್ಕೆ, **ಬ್ಯಾಡ್ ಮ್ಯಾನರ್ಸ್ (ಕ):** ಸಂ.4ಕ್ಕೆ, **ಅರ್ಧಂಬರ್ಧ ಪ್ರೇಮ ಕಥೆ (ಕ):** ಸಂ.6.35ಕ್ಕೆ, **ಅನ್ನಪೂರ್ಣಿ (ತ):** ರಾ.9.15ಕ್ಕೆ
ಸ್ಕ್ರೀನ್ 2	**ಅನಿಮಲ್ (ಹಿಂ):** ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ಮ.1.45ಕ್ಕೆ.
ಸ್ಕ್ರೀನ್ 3	**ಸ್ಯಾಮ್ ಬಹದ್ದೂರ್ (ಹಿಂ):** ಬೆ.10.10ಕ್ಕೆ, ಸಂ.4.50ಕ್ಕೆ, **ಅನಿಮಲ್ (ಹಿಂ):** ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	**ಸಪ್ತ ಸಾಗರದಾಚೆ ಎಲ್ಲೋ 2 (ಕ):** ಬೆ.10.45ಕ್ಕೆ, **ಅನಿಮಲ್ (ಹಿಂ):** ಮ.2.40ಕ್ಕೆ, **ನೆಪೋಲಿಯನ್ (ಇಂ):** ಸಂ.6.25ಕ್ಕೆ, **ಸ್ಯಾಮ್ ಬಹದ್ದೂರ್ (ಹಿಂ):** ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್


ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, **ಡಂಕಿ (ಹಿಂ):** ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, **ನೆರು (ಮ):** ರಾ.10.10ಕ್ಕೆ, **ಸಲಾರ್ –1 (ಮ):** ಸಂ.6.35ಕ್ಕೆ, **ಸಲಾರ್–1 (ಹಿಂ):** ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, **ಸಲಾರ್–1 (ಕ):** ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, **ಸಲಾರ್– 1(ತೆ):** ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಂಜಾಪುರ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ




ಬನ್ನೂರು: ಪಟ್ಟಣದ ಸಮೀಪದ ನಂಜಾಪುರ ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘದಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎನ್.ಎಲ್ ಬಸವರಾಜು, ಉಪಾಧ್ಯಕ್ಷರಾಗಿ ಸಿದ್ದೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದಲ್ಲಿ ಒಟ್ಟು 10 ಮಂದಿ ನಿರ್ದೇಶಕರಿದ್ದು, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನವು ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಎನ್.ಎಲ್.ಬಸವರಾಜು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸಿದ್ದೇಗೌಡ ಹೊರತುಪಡಿಸಿ, ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅಧ್ಯಕ್ಷರಾಗಿ ಎನ್.ಎಲ್.ಬಸವರಾಜು, ಉಪಾಧ್ಯಕ್ಷರಾಗಿ ಸಿದ್ದೇಗೌಡ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಸುಜಾತ ಘೋಷಣೆ ಮಾಡಿದರು.

ನಂತರ ಮಾತನಾಡಿದ ಮುಖಂಡರಾದ ಸೋಮಣ್ಣ, ಹೊಸ ಅಧ್ಯಕ್ಷರು ಡೈರಿ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡುವ ಮೂಲಕ ಸಾರ್ವಜನಿಕರಿಗೆ ಅನುಕೂಲವನ್ನು ಕಲ್ಪಿಸಲಿ ಎಂದು ತಿಳಿಸಿದರು.

ನಿರ್ದೇಶಕರಾದ ರವಿ, ಮಾದೇಶ ಶೆಟ್ಟಿ, ಬಸವರಾಜು, ವೆಂಕಟೇಶ್, ಬಿ.ಶಿವಣ್ಣ, ಚನ್ನಮ್ಮ, ಚಂದ್ರಮ್ಮ, ಸಿದ್ದರಾಜಮ್ಮ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಸುರಾಜು, ಸುಧಾ, ನಿಂಗಮ್ಮ ಮುಖಂಡರಾದ ಸೋಮಣ್ಣ, ರಮೇಶ್, ಎನ್.ಎಲ್.ಕೆಂಪಲಿಂಗಯ್ಯ, ಶಿವಣ್ಣ, ಶಂಕರ್, ಕುಮಾರ್, ಮಹದೇವಯ್ಯ, ಎಂ.ಬಿ.ಬೋರಣ್ಣಗೌಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಬನ್ನೂರಿನ ಸಮೀಪದ ಅಂಕನಹಳ್ಳಿ ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘದಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷರಾಗಿ ಎಂ.ಬಿ ಪುರುಷೋತ್ತಮ, ಉಪಾಧ್ಯಕ್ಷರಾಗಿ ನಾಗರಾಜು ಆಯ್ಕೆಯಾದರು. ನಿರ್ದೇಶಕರಾದ ಪಾಚಲಿಂಗೇಗೌಡ, ಬಿ.ಕಾಡೇಗೌಡ, ಎ.ಸಿ.ಕೆಂಪೇಗೌಡ, ನಂಜುಂಡಸ್ವಾಮಿ, ಎನ್.ಬಸವರಾಜು, ಎಂ.ಮರೀಗೌಡ, ಲಕ್ಷ್ಮಮ್ಮ, ಗೌರಮ್ಮ, ನಂಜುಂಡಪ್ಪ, ಭದ್ರಯ್ಯ, ದೇವರಾಜು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್.ಜಯರಾಮು ಉಪಸ್ಥಿತರಿದ್ದರು.

ಕೋಟೆ ಬಳಿಯ ಕಲ್ಲಹಟ್ಟಿಯಲ್ಲಿ ಮತ್ತೆ ಹುಲಿ ಪ್ರತ್ಯಕ್ಷ

● ಬಾಲಕನನ್ನು ಕೊಂದು ಹಾಕಿದ್ದ ಸ್ಥಳದಲ್ಲೇ ಹಸು ಬಲಿ ಪಡೆದ ಹುಲಿ
● ಗ್ರಾಮಸ್ಥರ ಪ್ರತಿಭಟನೆ ● ಇಂದಿನಿಂದ ಕಾರ್ಯಾಚರಣೆ ಆರಂಭ ● ಆನೆಗಳ ಆಗಮನ



ಹೆಚ್.ಡಿ.ಕೋಟೆ, ಡಿ.31– ಬಾಲಕನೋರ್ವನನ್ನು ಬಲಿ ಪಡೆದಿದ್ದ ಹುಲಿ ಮತ್ತೆ ಪ್ರತ್ಯಕ್ಷವಾಗಿದ್ದು, ಈ ಬಾರಿ ಹಸುವೊಂದನ್ನು ಕೊಂದು ಹಾಕಿದೆ. ತಾಲೂಕಿನ ಕಲ್ಲಹಟ್ಟಿ ಗ್ರಾಮದಲ್ಲಿ ಈ ಘಟನೆ ಸಂಭವಿಸಿದ್ದು, ಗ್ರಾಮಸ್ಥರು ಆಕ್ರೋಶಗೊಂಡಿದ್ದಾರೆ.

ಕಲ್ಲಹಟ್ಟಿ ಗ್ರಾಮದ ಕುಮಾರ್ ನಾಯಕ ಅವರ ಜಮೀನಿನ ಬಳಿ, ಭಾನುವಾರ ಮಧ್ಯಾಹ್ನ ರೈತ ನಾಗೇಗೌಡರು ತಮಗೆ ಸೇರಿದ್ದ ಇಲಾತಿ ಹಸುವನ್ನು ಮೇಯಿಸುತ್ತಿದ್ದರು. ಈ ಸಂದರ್ಭದಲ್ಲಿ ದಿಢೀರನೆ ದಾಳಿ ಮಾಡಿದ ಹುಲಿ ಹಸುವನ್ನು ಕೊಂದು, ಕೆಲ ದೂರ ಎಳೆದೊಯ್ದು ಭಕ್ಷಿಸಿ, ಜಾಗ ಖಾಲಿ ಮಾಡಿದೆ.

ಕಳೆದ ಕೆಲ ತಿಂಗಳ ಹಿಂದೆ ಗ್ರಾಮದ ವಾಸಿ ಚರಣ್ ನಾಯಕ್ ಎಂಬ ಬಾಲಕನನ್ನು ಬಲಿ ತೆಗೆದುಕೊಂಡಿದ್ದ ಹುಲಿ, ಮತ್ತೆ ಜಮೀನಿನಲ್ಲಿ ಕಾಣಿಸಿಕೊಳ್ಳುತ್ತಿದೆ. ಈ ವಿಚಾರ ಹಲವಾರು ಬಾರಿ ಅರಣ್ಯ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರೂ, ಅರಣ್ಯಾಧಿಕಾರಿಗಳು ಹುಲಿಯನ್ನು ಸೆರೆ ಹಿಡಿಯುವುದರಲ್ಲಿ ಬೇಜವಾಬ್ದಾರಿತನ ತೋರಿಸುತ್ತಿದ್ದಾರೆ. ಅಧಿಕಾರಿಗಳ ಬೇಜವಾಬ್ದಾರಿತನದಿಂದ ಇಂದು ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ಇಲಾತಿ ಹಸುವನ್ನು ಹುಲಿ ಬಲಿ ತೆಗೆದುಕೊಂಡಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

ರೊಚ್ಚಿಗೆದ್ದ ಗ್ರಾಮಸ್ಥರು ಜಮೀನಿನ ಬಳಿ ಧರಣಿ ಕುಳಿತು ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬರಬೇಕು ಎಂದು ಪಟ್ಟು ಹಿಡಿದು ಅರಣ್ಯ ಇಲಾಖೆ ಮತ್ತು ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಲಾರಂಭಿಸಿದರು. ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಆರ್‌ಎಫ್‌ಓ ಹರ್ಷಿತ್ ಕುಮಾರ್ ಹಾಗೂ ಸಿಬ್ಬಂದಿಗಳು ಪರಿಶೀಲನೆ ನಡೆಸಿ ಬಳಿಕ ಎಸಿಎಫ್ ರಂಗಸ್ವಾಮಿಯವರಿಗೆ ದೂರವಾಣಿ ಕರೆ ಮಾಡಿ, ಚರ್ಚಿಸಿ ತಕ್ಷಣ ಹುಲಿ ಸೆರೆ ಹಿಡಿಯುವ ಕಾರ್ಯಾಚರಣೆ ಆರಂಭಿಸುವಂತೆ ಸೂಚಿಸಿದರು. ಎಸಿಎಫ್ ರಂಗಸ್ವಾಮಿ ಅವರು ಹುಲಿಯನ್ನು ತಕ್ಷಣ ಸೆರೆ ಹಿಡಿಯುವ ಕಾರ್ಯವನ್ನು ತಕ್ಷಣದಿಂದಲೇ ಪ್ರಾರಂಭಿಸುತ್ತೇವೆ ಎಂದು ಭರವಸೆ ನೀಡಿದ್ದರಿಂದ ರೈತರು ಧರಣಿ ಕೈಬಿಟ್ಟರು. ನಾಗೇಗೌಡ ಅವರಿಗೆ ಸರ್ಕಾರದ ವತಿಯಿಂದ ಪರಿಹಾರ ಕೊಡಿಸಿಕೊಡುವ ಭರವಸೆ ನೀಡಿದರು.

> ಭಾನುವಾರ ಹಸುವನ್ನು ಕೊಂದಿರುವುದು ಹುಲಿ ಎಂದು ಖಚಿತವಾಗಿದ್ದು, ಕಲ್ಲಹಟ್ಟಿ ಗ್ರಾಮದಲ್ಲಿ ಹುಲಿಯನ್ನು ಸೆರೆ ಹಿಡಿಯಲು ಈಗಾಗಲೇ 20 ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಆದರೆ ಈ ಕ್ಯಾಮರಾದಲ್ಲಿ ಹುಲಿಯ ಚಿತ್ರಗಳು ಸೆರೆಯಾಗಿಲ್ಲ. ಆದ್ದರಿಂದ ಸ್ವಲ್ಪಮಟ್ಟಿಗೆ ಗೊಂದಲ ಉಂಟಾಗಿರುವ ಹಿನ್ನೆಲೆಯಲ್ಲಿ ಭಾನುವಾರದಿಂದಲೇ ಎರಡು ತಂಡಗಳನ್ನು ರಚನೆ ಮಾಡಿ ಕಾರ್ಯಾಚರಣೆ ಶುರು ಮಾಡಲಾಗಿದ್ದು, ಸೋಮವಾರದಿಂದ ಅರವಳಿಕೆ ತಜ್ಞರಾದ ಡಾಕ್ಟರ್ ರಮೇಶ ಅವರು ಆಗಮಿಸಲಿದ್ದಾರೆ. ಸೋಮವಾರದಿಂದ ಆನೆಗಳನ್ನು ತರಿಸುವುದರ ಮೂಲಕ ಇನ್ನೂ ಹೆಚ್ಚಿನ ಕಾರ್ಯಾಚರಣೆಯನ್ನು ಕೈಗೊಳ್ಳಲಾಗುವುದು.
> – ಹರ್ಷಿತ್ ಕುಮಾರ್, ಆರ್‌ಎಫ್‌ಓ

> ಇದು ಹುಲಿಗಳು ಮಿಲನ ನಡೆಸುವ ಸಮಯ. ಆದ್ದರಿಂದ ಸಾಕಷ್ಟು ಹುಲಿಗಳು ಬೇರೆ ಭಾಗದಿಂದ ಬಂದು ಓಡಾಡುತ್ತಿರುತ್ತವೆ. ಆದ್ದರಿಂದ ಬಾಲಕನನ್ನು ಬಲಿ ಪಡೆದ ಹುಲಿಯೇ ಇಂದು ಹಸು ಕೊಂದು ಹಾಕಿದೆ ಎಂದು ಹೇಳಲಾಗದು. ಕಲ್ಲಹಟ್ಟಿ ಗ್ರಾಮದ ಕಾಡಂಚಿನ ಗ್ರಾಮದಲ್ಲಿ ಈಗಾಗಲೇ ಹಲವಾರು ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಆ ಭಾಗದಲ್ಲಿ ಹುಲಿ ಹೆಜ್ಜೆಗಳು ಕಾಣಿಸಿಕೊಂಡಿರುವುದಲ್ಲದೆ, ಇಂದು ಹಸುವನ್ನು ಬಲಿ ತೆಗೆದುಕೊಂಡಿದೆ. ಆದ್ದರಿಂದ ಸೋಮವಾರ ಅರವಳಿಕೆ ತಜ್ಞರು ಆಗಮಿಸುತ್ತಿದ್ದು, ಅವರೊಡನೆ ಸಂಬಂಧಪಟ್ಟ ಇಲಾಖೆಯ ಎಲ್ಲಾ ಅಧಿಕಾರಿಗಳು ಆಗಮಿಸಲಿದ್ದು, ಅವರೊಂದಿಗೆ ಚರ್ಚಿಸಿ ಆನೆಗಳನ್ನು ತರಿಸಿ ಕಾರ್ಯಾಚರಣೆ ಕೈಗೊಳ್ಳುವ ಕೆಲಸವನ್ನು ಮಾಡುತ್ತೇವೆ.
> – ರಂಗಸ್ವಾಮಿ, ಎಸಿಎಫ್

ಯಾವುದೇ ಕ್ಷಣದಲ್ಲಿ ಯುದ್ಧ, ಸಂಭಾವ್ಯ ಸೇನಾ ಕಾಳಗಕ್ಕೆ ಸಿದ್ಧರಾಗಿರಿ

ಉತ್ತರ ಕೊರಿಯಾ ಸೇನೆಗೆ ಸರ್ವಾಧಿಕಾರಿ ಕಿಮ್ ಎಚ್ಚರಿಕೆ

ಪ್ಯೋಂಗ್ಯಾಂಗ್, ಡಿ.31 ಇಡೀ ಜಗತ್ತು ಹೊಸ ವರ್ಷ 2024ರ ಸ್ವಾಗತಕ್ಕೆ ಸಜ್ಜಾಗುತ್ತಿದ್ದರೆ ಅತ್ತ ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಮಾತ್ರ ಸಂಭಾವ್ಯ ಯುದ್ಧಕ್ಕೆ ಸಿದ್ಧರಾಗಿರುವಂತೆ ತನ್ನ ಸೇನೆಗೆ ಎಚ್ಚರಿಕೆ ನೀಡಿದ್ದಾರೆ. ಉತ್ತರ ಕೊರಿಯಾದ ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವರು ದಕ್ಷಿಣ ಕೊರಿಯಾ ಮೇಲೆ ಪರಮಾಣು ದಾಳಿಯ ಹೊಸ ಬೆದರಿಕೆವೊಡ್ಡಿದ್ದು, ಪರ್ಯಾಯ ದ್ವೀಪದಲ್ಲಿ ಯಾವುದೇ ಸಮಯದಲ್ಲಿ ಸಂಭವಿಸಬಹುದಾದ ಯುದ್ಧಕ್ಕೆ ಸನ್ನದ್ಧವಾಗಿರಲು ಮಿಲಿಟರಿ ಶಸ್ತ್ರಾಗಾರವನ್ನು ನಿರ್ಮಿಸುವಂತೆ ಆದೇಶಿಸಿದ್ದಾರೆ ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ.

2024ಕ್ಕೆ ತನ್ನ ದೇಶದ ಮಿಲಿಟರಿ, ರಾಜಕೀಯ ಮತ್ತು ಆರ್ಥಿಕ ನೀತಿ ನಿರ್ಧಾರಗಳನ್ನು ನಿಗದಿಪಡಿಸಿದ ಪಕ್ಷದ ಐದು ದಿನಗಳ ಸಭೆಗಳ ಅಂತ್ಯದಲ್ಲಿ ಸುದೀರ್ಘ ಭಾಷಣ ಮಾಡಿದ ಕಿಮ್, ಅಮೆರಿಕ ವಿರುದ್ಧ ತೀವ್ರ ಕಿಡಿಕಾರಿದ್ದಾರೆ. ಅಮೆರಿಕವು ವಿವಿಧ ರೀತಿಯ ಮಿಲಿಟರಿ ಬೆದರಿಕೆಯನ್ನು ಒಡ್ಡುತ್ತಿದೆ ಎಂದು ಆರೋಪಿಸಿದ ಕಿಮ್, ನಮ್ಮ ಮೇಲೆ ಆಕ್ರಮಣ ಮಾಡಲು ಶತ್ರುಗಳು ಹವಣಿಸುತ್ತಿರುವ ಹಿನ್ನೆಲೆಯಲ್ಲಿ ಕೊರಿಯಾ ಪರ್ಯಾಯ ದ್ವೀಪದಲ್ಲಿ ಯಾವುದೇ ಸಮಯದಲ್ಲಿ ಯುದ್ಧವು ಭುಗಿಲೇಳಬಹುದು ಎಂದು ಕಿಮ್ ಹೇಳಿದ್ದಾರೆ.